ಸಂಪುಟ: 05 ಸಂಚಿಕೆ: 260 ಪುಟಗಳು: 08 ಗುರುವಾರ 04 ಡಿಸೆಂಬರ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833

₹5

# ಉದಯ ವಾಹಿನಿ

ಸರ್ವ ಸಮಾನತೆಯ

ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಅರಮನೆಯು ಹಾಳಾದರೆ ಅದು ಪಾಳುಮನೆ ಎನ್ನಿಸಿಕೊಳ್ಳುತ್ತದೆ. ಆದರೆ ದೇವಾಲಯ ಎಷ್ಟು ಹಾಳಾದರೂ ಅದು ದೇವಾಲಯವೆಂದೇ ಅನಿಸಿಕೊಳ್ಳುತ್ತದೆ. ನಿಮ್ಮ ಬಾಳನ್ನು ದೇವಾಲಯವನ್ನಾಗಿ ಮಾಡಿಕೊಳ್ಳಿ

## ಆರ್ ಅಶೋಕ್ ಕೋಳಿಯನ್ನು ಜೀವಂತ ತಿನ್ನುತ್ತಾರಾ

• ಉದಯವಾಹಿನಿ, ಬೆಂಗಳೂರು

ವಿಪಕ್ಷ ನಾಯಕ ಆರ್ ಅಶೋಕ್ ಕೋಳಿಯನ್ನು ಜೀವಂತ ತಿನ್ನುತ್ತಾರಾ ಎಂದು ಸಚಿವ ಮಧು ಬಂಗಾರಪ್ಪ ಪ್ರಶ್ನಿಸಿದ್ದಾರೆ. ಡಿಸಿಎಂ ಡಿಕೆ ಶಿವಕುಮಾರ್ ನಿವಾಸದಲ್ಲಿ ಸಿದ್ದರಾಮಯ್ಯ ಅವರಿಗೆ ನಾಟಿ ಕೋಳಿ ಸಾರು ಬ್ರೇಕ್‌ಫಾಸ್ಟ್‌ಗೆ ಮಾಡಿರುವುದಕ್ಕೆ ಆಕ್ಷೇಪ ಮಾಡಿದ್ದ ಆರ್ ಅಶೋಕ್, ಹನುಮ ಜಯಂತಿಯ ದಿನವೇ ನಾಟಿ ಕೋಳಿ ಮರ್ಡರ್ ಆಗಿದೆ ಎಂದು ಹೇಳಿದ್ದರು. ಇದಕ್ಕೆ ಸಚಿವ ಮಧು ಬಂಗಾರಪ್ಪ ಕಿಡಿಕಾರಿದ್ದಾರೆ.

ಬೆಂಗಳೂರಿನಲ್ಲಿ ಬುಧವಾರ ಮಾತನಾಡಿದ ಅವರು,



''ನಡೆಯುತ್ತಿದ್ದ ಬೆಳವಣಿಗೆ ಹಿನ್ನೆಲೆಯಲ್ಲಿ ಕಾರ್ಯಕರ್ತರಲ್ಲಿ ಗೊಂದಲ ಇತ್ತು. ಮಾಧ್ಯಮಗಳಲ್ಲಿಹೆಚ್ಚು ಸುದ್ದಿಗಳು ಹರಿದಾಡುತ್ತಿತ್ತು. ಇದು ಜನರಿಗೂ ಗೊಂದಲ ಆಗಿತ್ತು. ಅದನ್ನು ಈಗ ನಿವಾರಿಸಿದ್ದಾರೆ'' ಎಂದರು.

ಸಿಎಂ ಮನೆಗೆ ಡಿಕೆ ಶಿವಕುಮಾರ್ ಅವರು ಹೋಗಿದ್ದು, ಡಿಕೆಶಿ ಮನೆಗೆ ಸಿಎಂ ಸಿದ್ದರಾಮಯ್ಯ ಅವರು ಬಂದಿದ್ದು ಉತ್ತಮ ಬೆಳವಣಿಗೆ. ಎಲ್ಲವೂ ಒಳ್ಳೆಯದಾಗ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು. ಸಿಎಂ ಶಾಶ್ವತವಲ್ಲ ಎಂಬ ವಿಚಾರವಾಗಿ ಇದೇ ಸಂದರ್ಭದಲ್ಲಿ ಪ್ರತಿಕ್ರಿಯೆ ನೀಡಿದ ಸಚಿವರು, ''ಅದನ್ನು ಬೇರೆ ಅರ್ಥದಲ್ಲಿನೋಡೋದು ಬೇಡ . ನಾವು ಮಾಧ್ಯಮಗಳಿಗೆ ಹೇಳ್ತೇನೆ. ನಾವು ಕೆಲವು ಬಾರಿ ರೇಗುತ್ತೇವೆ. ನಾವು ಮಾಧ್ಯಮಗಳ ಮುಂದೆ ಕೂಲಾಗಿರಬೇಕು. ಎರಡು ಬಾರಿ ಸಿಎಂ ಆಗಿದ್ದವರು. ಹಲವು ಯೋಜನೆ ಕೊಟ್ಟವರು. ಅವರು ಕ್ಲಿಯರ್ ಆಗಿ ಹೇಳಿದ್ದಾರೆ. ಹೈಕಮಾಂಡ್ ಹೇಳಿದಂತೆ ಕೇಳುತ್ತೇವೆ ಎಂದಿದ್ದಾರೆ'' ಎಂದರು.

ಹೈಕಮಾಂಡ್ ಹೇಳಿದ್ದು ನಮಗೆ ವೇದವಾಕ್ಯ. ಯಾರ್ಯಾರು ವೈಯುಕ್ತಿಕ ಹೇಳಿಕೆ ಕೊಟ್ಟಿದ್ದಾರೆ. ಅದು ಅವರ ಹೇಳಿಕೆ. ನಾವು ಅದರ ಬಗ್ಗೆ ಮಾತನಾಡಲ್ಲ. ನಾಯಕತ್ವದ ಚರ್ಚೆ ಎಲ್ಲಿಯೂ ಆಗ್ತಿಲ್ಲ. ತಿಂಡಿಗೆ ಹೋಗಿ ಬಂದಿದ್ದಾರೆ ಮತ್ತೆ ನಾಯಕತ್ವ ಬದಲಾವಣೆ ಅಂದ್ರೆ ಏನು ಎಂದರು.

ಸಿಎಂ, ಡಿಸಿಎಂ ಪರವಾಗಿ ಬೆಂಬಲಿಗರ ಘೋಷಣೆ ವಿಚಾರವಾಗಿ ಇದೇ ವೇಳೆ ಮಾತನಾಡಿದ ಅವರು, ''ಅವರ ಅಭಿಮಾನಿಗಳು ಕೂಗಿರಬಹುದು. ಆದರೆ ಎಲ್ಲವನ್ನೂ ದೆಹಲಿಯಲ್ಲಿ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ವೇಣುಗೋಪಾಲ್ ರಾಷ್ಟ್ರೀಯ ನಾಯಕರು. ಅವರ ಮುಂದೆ ಸಿಎಂ, ಡಿಸಿಎಂ ಅಭಿಮಾನಿಗಳು ಬೇಡಿಕೆ ಇಡುವುದು ಸಹಜ. ಅದು ಅವರವರ ಅಭಿಪ್ರಾಯ. ಅವಕಾಶಕ್ಕಾಗಿ ಎಲ್ಲರೂ ಕಾಯ್ತಾರೆ. ಈಗ ನಮಗೆ ಕೊಟ್ಟಿದ್ದಾರೆ. ನಾಳೆ ಬೇರೆಯವರಿಗೆ ಕೊಡಬಹುದು ಎಂದರು.

**ನಾಟಿ ಕೋಳಿ ಮರ್ಡರ್ ಹೇಳಿಕೆಗೆ ಕಿಡಿ**

ಸಿಎಂ,ಡಿಸಿಎಂ ಹೇಳಿದ ಮೇಲೆ ಇನ್ನೇನಿದೆ ನಾವು ಏನಾದ್ರೂ ಕೇಳೋಕೆ ಬರುತ್ತಾ ನಾನು ವಿಪಕ್ಷ ನಾಯಕರ ಮಾತು ಕೇಳಿದೆ, ಅವರು ಭಾವನಾತ್ಮಕ ವಿಚಾರದಲ್ಲೇ ಅಧಿಕಾರಕ್ಕೆ ಬಂದವರು. ಅವರು ವಿಪಕ್ಷದಲ್ಲಿರುವುದು ಯಾಕೆ. ಅವರ ಸ್ಥಾನಕ್ಕೆ ನಾಚಿಕೆ ಆಗಬೇಕು. ನಮ್ಮಂತರ ಬಳಿ ಅವರು ಪ್ರಶ್ನೆ ಕೇಳಲಿ ಎಂದು ಕಿಡಿಕಾರಿದರು.

## ಬೆಳಗ್ಗೆ ಇಡ್ಲಿ, ಮಧ್ಯಾಹ್ನ ನಾಟಿ ಕೋಳಿ, ಡಿನ್ನರ್ ಮೀಟಿಂಗ್ ಗೆ ಬೆಳ್ಳುಳ್ಳಿ ಕಬಾಬ್

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್ ಸರ್ಕಾರದಲ್ಲಿ ಬಡವರಿಗೆ ಆರೋಗ್ಯ ಸೇವೆಗಳು ಸಿಗುತ್ತಿಲ್ಲ, ರಾಜ್ಯಾದ್ಯಂತ 7 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳು ಮುಚ್ಚಿದ್ದು ಮಕ್ಕಳ ಶಿಕ್ಷಣಕ್ಕೆ ಆಪತ್ತು ಬಂದಿದೆ ನಿಖಿಲ್ ಕುಮಾರಸ್ವಾಮಿ ಅವರು ಆರೋಪಿಸಿದರು. ಬ್ರೇಕ್‌ಫಾಸ್ಟ್, ಡಿನ್ನರ್ ಮೀಟಿಂಗ್ ಮಾಡ್ತಾ ಹೋದರೆ ಜನರಿಗೆ ಯಾವ ಸಂದೇಶ ಕೊಡ್ತೀರಾ ಬ್ರೇಕ್ ಫಾಸ್ಟ್‌ಗೆ ಇಡ್ಲಿ, ಮಧ್ಯಾಹ್ನ ನಾಟಿ ಕೋಳಿ, ಡಿನ್ನರ್‌ಗೆ ಬೆಳ್ಳುಳ್ಳಿ ಕಬಾಬ್ ಬರುತ್ತೆನೋ ಎಂದು ವ್ಯಂಗ್ಯವಾಡಿದರು. ಕಾಂಗ್ರೆಸ್ ಪಕ್ಷದಲ್ಲಿ ಯಾವುದು ಸರಿಯಿಲ್ಲ. ಸರಿ ಇದ್ದರೆ ಆಡಳಿತದಲ್ಲಿ ತೋರಿಸಿ. ಅದು ಬಿಟ್ಟು ಈ ಬ್ರೇಕ್‌ಫಾಸ್ಟ್ ಮೀಟಿಂಗ್, ಡಿನ್ನರ್ ಮೀಟಿಂಗ್ ಯಾಕೆ ಮಾಡಬೇಕು. ರಾಜ್ಯದಲ್ಲಿ ಉಪಹಾರ ಇಲಾಖೆ ಮಾತ್ರ ಸಕ್ರಿಯವಾಗಿದೆ ಎಂದು ವಾಗ್ದಾಳಿ ನಡೆಸಿದರು.

ಆರೋಗ್ಯ ಇಲಾಖೆಯಲ್ಲಿ ಗರ್ಭಿಣಿಯರು ಸೇರಿ ಮಕ್ಕಳು ಎಷ್ಟು ಬಲಿಯಾದರು. ಆರೋಗ್ಯ ಇಲಾಖೆ ರಾಜ್ಯದಲ್ಲಿ ಸಂಪೂರ್ಣ ಕುಸಿದಿದೆ. ಆರೋಗ್ಯ ಇಲಾಖೆ ಮತ್ತು ಶಿಕ್ಷಣ ಇಲಾಖೆ ವೈಫಲ್ಯವಾಗಿದೆ. ರಾಜ್ಯದಲ್ಲಿ ಸರ್ಕಾರಿ ಶಾಲೆ ಮುಚ್ಚುತ್ತಿವೆ. ಶಿಕ್ಷಕರ ನೇಮಕಾತಿ ಆಗ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.ಎಂದು ನಿರ್ದೇಶನ ನೀಡಿದ್ದಾರೆ. ಈ ಸರ್ಕಾರಕ್ಕೆ 15 ಸಾವಿರ ಗುಂಡಿ ಮುಚ್ಚುವ ಯೋಗ್ಯತೆ ಇಲ್ಲ. 500–600 ಜನ ಗುಂಡಿಗೆ ಬಿದ್ದು ಸತ್ತಿದ್ದಾರೆ. ಇದರ ಹೊಣೆ ಸರ್ಕಾರವೇ ತೆಗೆದುಕೊಳ್ಳಬೇಕು.

ಬೆಂಗಳೂರು ನಗರ ಹೆಚ್ಚಿನ ಆದಾಯ ಕೊಡುತ್ತದೆ. ಕಂಪನಿ ಮಾಲೀಕರು ಸಮಸ್ಯೆ ಬಗ್ಗೆ ಮಾತಾಡುತ್ತಾರೆ. ಬೆಂಗಳೂರಿನಲ್ಲಿ ರಸ್ತೆ ಯಾವುದು ಪುಟ್‌ಪಾಥ್ ಯಾವುದು ಗೊತ್ತಿಲ್ಲ. ಇದು ಸರ್ಕಾರದ ಪರಿಸ್ಥಿತಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

## ಸಂಸತ್ ಅಧಿವೇಶನದಲ್ಲಿ ಬ್ಯುಸಿ; ಹೈಕಮಾಂಡ್ ನಾಯಕರ ಭೇಟಿ ಇಲ್ಲ

• ಉದಯವಾಹಿನಿ, ಬೆಂಗಳೂರು

'ಈಗ ನಮ್ಮ ನಾಯಕರು ಸಂಸತ್ ಅಧಿವೇಶನದಲ್ಲಿ ಬ್ಯುಸಿ ಇದ್ದಾರೆ. ಈ ಸಂದರ್ಭದಲ್ಲಿ ಅವರಿಗೆ ತೊಂದರೆ ಕೊಡಲು ಹಾಗೂ ಮುಜುಗರ ಉಂಟು ಮಾಡಲು ಬಯಸುವುದಿಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಯಾವುದೇ ನಾಯಕರನ್ನು ಭೇಟಿ ಮಾಡುವುದಿಲ್ಲ. ಗುರುವಾರ ಬೆಳಿಗ್ಗೆ 8ಕ್ಕೆ ಬೆಂಗಳೂರಿಗೆ ಮರಳುತ್ತೇನೆ ಎಂದರು. ಮತಕಳವು ವಿರುದ್ಧ ಇದೇ 14ರಂದು ನಡೆಯಲಿರುವ ಪ್ರತಿಭಟನಾ ಸಮಾವೇಶದ ಪೂರ್ವ ತಯಾರಿ ನೋಡಿಕೊಳ್ಳುವುದು ಪಕ್ಷದ ಅಧ್ಯಕ್ಷನಾಗಿ ನನ್ನ ಜವಾಬ್ದಾರಿ. ಈ ಉದ್ದೇಶದಿಂದ ಇಲ್ಲಿಗೆ ಬಂದಿದ್ದೇನೆ' ಎಂದರು. ಇದೇ 8ರಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆ ಇರುವ ಬಗ್ಗೆ ಮಾಹಿತಿ ಲಭಿಸಿದೆ. ಮೇಕೆದಾಟು ಯೋಜನೆಯ ಕುರಿತು ಎಲ್ಲಾ ದಾಖಲೆಗಳನ್ನು ಸಿದ್ಧ ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ನಾವು ನಮ್ಮ ವಿಚಾರ ಪ್ರತಿಪಾದಿಸಬೇಕು. ಇಲ್ಲದಿದ್ದರೆ ಸಭೆ ಮುಂದೂಡಿಕೆಯಾಗುತ್ತಾ ಹೋಗುತ್ತದೆ. ಯೋಜನೆಯ ವಿವರಗಳನ್ನು ಅವರಿಗೆ ನಾವು ನೀಡಬೇಕು. ಇದಕ್ಕೆ 6 ತಿಂಗಳ ಕಾಲಾವಕಾಶ ಇದೆ ಎಂದು ತಿಳಿಸಿದರು.

## ಅತ್ಯಾಚಾರ ಪ್ರಕರಣ: ಪ್ರಜ್ವಲ್ ಶಿಕ್ಷೆ ಅಮಾನತಿಗೆ ಹೈಕೋರ್ಟ್ ನಕಾರ

• ಉದಯವಾಹಿನಿ, ಬೆಂಗಳೂರು

ಅತ್ಯಾಚಾರ ಪ್ರಕರಣದ ಅಪರಾಧಿಯಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ, ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ವಿಧಿಸಿರುವ ಜೀವಿತಾವಧಿ ಜೈಲು ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಿ ಜಾಮೀನು ಮಂಜೂರು ಮಾಡಲು ಹೈಕೋರ್ಟ್ ಸ್ಪಷ್ಟವಾಗಿ ನಿರಾಕರಿಸಿದೆ. ಈ ಸಂಬಂಧ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ಬುಧವಾರ ವಜಾಗೊಳಿಸಿದ ಮಧ್ಯಂತರ ಆದೇಶವನ್ನು ನ್ಯಾಯಮೂರ್ತಿ ಕೆ.ಎಸ್.ಮುದಗಲ್ ನೇತೃತ್ವದ ವಿಭಾಗೀಯ ನ್ಯಾಯಪೀಠ ತೆರೆದ ನ್ಯಾಯಾಲಯ ದಲ್ಲಿ ಉಕ್ತ ಲೇಖನದ ಮೂಲಕ ದಾಖಲಿಸಿದರು.

'ತೀರ್ಪಿನಲ್ಲಿ ಅಲ್ಲೊಂದು ಇಲ್ಲೊಂದು ಇರುವ ಲೋಪಗಳನ್ನು ಪರಿಗಣಿಸಲಾಗದು. ಅಪರಾಧದ ಗಂಭೀರತೆ ಮತ್ತು ದಾಖಲೆಗಳನ್ನು ಪರಿಗಣಿಸಿದಾಗ ಪ್ರಜ್ವಲ್ ಬಿಡುಗಡೆ ಮಾಡುವುದು ಸೂಕ್ತವಲ್ಲ, ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲರು ಎತ್ತಿರುವ ಪ್ರಶ್ನೆಗಳನ್ನು ಅಂತಿಮ ವಿಚಾರಣೆಯ ಸಂದರ್ಭದಲ್ಲಿ ಪರಿಗಣಿಸಲಾಗುವುದು' ಎಂದು ನ್ಯಾಯಪೀಠ ಹೇಳಿದೆ. ಅಂತಿಮ ವಿಚಾರಣೆಯನ್ನು 2026ರ ಜನವರಿ 12ಕ್ಕೆ ಮುಂದೂಡಲಾಗಿದೆ.


# ರಾಜ್ಯಾಧ್ಯಕ್ಷ ಸ್ಥಾನ ಬದಲಾವಣೆ ಸಂಚಲನ


**2028ರ ಚುನಾವಣೆ ವಿಜಯೇಂದ್ರ ನೇತೃತ್ವದಲ್ಲೇ ಎದುರಿಸ್ತೇವೆ**

**ಬಿವೈ ವಿಜಯೇಂದ್ರ 1 ವರ್ಷ ಸೇಫ್**

**ದಿಲ್ಲಿಯಿಂದ ಬಂತಾ ಸಂದೇಶ..**

**ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ವಿ.ಸೋಮಣ್ಣ**





# ದೆಹಲಿಯಲ್ಲಿ ಬಿಜೆಪಿ ರೆಬೆಲ್ ತಂಡದ ಭಾರೀ ತಂತ್ರಗಾರಿಕೆ

• ಉದಯವಾಹಿನಿ, ನವದೆಹಲಿ

ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆ ಸಮರ, ಬಣ ಬಡಿದಾಟಗಳು ಗರಿಗೆದರಿರುವಂತೆ ಬಿಜೆಪಿ ಪಾಳಯದಲ್ಲೂ ರಾಜ್ಯಾಧ್ಯಕ್ಷ ಸ್ಥಾನದ ಬದಲಾವಣೆ ಸದ್ದು ಇನ್ನೂ ಕಡಿಮೆಯಾಗಿಲ್ಲ. ತೆರೆಮರೆಯಲ್ಲಿ ಮತ್ತೆ ಬಿಜೆಪಿ ರೆಬೆಲ್ ನಾಯಕರು ತಮ್ಮ ತಂತ್ರಗಾರಿಕೆ ಶುರುಮಾಡಿಕೊಂಡಿದ್ದರೆ. ಕರ್ನಾಟಕ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಮತ್ತೆ ರೇಸ್ ಆರಂಭವಾಗಿರುವ ನಡುವೆ ಕೇಂದ್ರ ಸಚಿವ ವಿ.ಸೋಮಣ್ಣ ಜೊತೆಗೆ ರೆಬೆಲ್ ಲೀಡರ್ಸ್ ಮಹತ್ವದ ಸಭೆ ನಡೆಸಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದ ರೇಸ್‌ನಲ್ಲಿರುವ ವಿ.ಸೋಮಣ್ಣರನ್ನು ಭೇಟಿ ಮಾಡಿ ರೆಬೆಲ್ ನಾಯಕರು ಮಹತ್ವದ ಸಭೆ ನಡೆಸಿದ್ದಾರೆ. ಇದಾದ ನಂತರ ಸೋಮಣ್ಣಗೆ ಬಿಜೆಪಿ ರೆಬೆಲ್ ತಂಡದ ಬೆಂಬಲ ಸಿಗುತ್ತದಾ ಎಂಬ ಪ್ರಶ್ನೆ ಮೂಡಿದ್ದು, ದೆಹಲಿಯಲ್ಲಿ ನಡೆದ ರಹಸ್ಯ ಭೇಟಿಯೊಂದು ರಾಜ್ಯ ಬಿಜೆಪಿಯಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದೆ.

**ಸೋಮಣ್ಣ ಭೇಟಿಯಾದ ರೆಬೆಲ್ ಲೀಡರ್ಸ್:** ಮಾಜಿ ಸಚಿವ ರಮೇಶ್ ಜಾರಕಿಹೊಳಿ, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ್ ನೇತೃತ್ವದ ರೆಬೆಲ್ ತಂಡವು ಕೇಂದ್ರ ಸಚಿವ ವಿ.ಸೋಮಣ್ಣ ಅವರನ್ನು ದೆಹಲಿಯಲ್ಲಿಯೇ ಭೇಟಿಯಾಗಿದೆ. ಸೋಮಣ್ಣ ಅವರ ಅಧಿಕೃತ ಕಚೇರಿಯಲ್ಲೇ ನಡೆದ ಈ ಮಾತುಕತೆಯಲ್ಲಿ ''ರಾಜ್ಯಾಧ್ಯಕ್ಷ ಸ್ಥಾನಕ್ಕೆ ವಿ. ಸೋಮಣ್ಣ ಅವರಿಗೆ ರೆಬೆಲ್ ತಂಡದ ಬೆಂಬಲ'' ಎಂಬ ವಿಷಯವೇ ಪ್ರಮುಖವಾಗಿ ಚರ್ಚೆಯಾಗಿದೆ ಎನ್ನಲಾಗಿದೆ. ಇದರಿಂದ ಮತ್ತೆ ಬಿಜೆಪಿಯಲ್ಲಿ ರಾಜ್ಯಾಧ್ಯಕ್ಷ ಸ್ಥಾನದ ಗದ್ದಲ ಶುರುವಾಗುವಂತಿದೆ.

**ರೆಬೆಲ್ ತಂಡದ ಹೊಸ ತಂತ್ರ...! :** ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ನಿರಾಕರಣೆಯಿಂದ ಸಿಡಿಮಿಡಿಗೊಂಡಿದ್ದ ಜಾರಕಿಹೊಳಿ, ಸಿದ್ದೇಶ್ವರ್, ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ, ಮಾಜಿ ಶಾಸಕ ಸಂಜಯ್ಯ ಶಿವರಾಜ್ ಪಾಟೀಲ್ ಸೇರಿದಂತೆ ಹಲವು ರೆಬೆಲ್ ನಾಯಕರು ಈಗಾಗಲೇ ಪಕ್ಷದ ವಿರುದ್ಧ ಗುಡುಗುತ್ತಿದ್ದಾರೆ. ಆದರೆ ಈ ತಂಡ ಈಗ ಪಕ್ಷದೊಳಗೆ ತಮ್ಮ ಪ್ರಾಬಲ್ಯ ತೋರಿಸುವ ಹೊಸ ತಂತ್ರಕ್ಕೆ ಮುಂದಾಗಿದೆ ಎನ್ನಲಾಗುತ್ತಿದೆ. ರಾಜ್ಯಾಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಹೈಕಮಾಂಡ್ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ. ಬಿ.ವೈ. ವಿಜಯೇಂದ್ರ ಬದಲಿಗೆ ನೂತನ ಅಧ್ಯಕ್ಷರ ನೇಮಕಕ್ಕೆ ದೆಹಲಿಯಲ್ಲಿ ತೀವ್ರ ಲಾಬಿ ನಡೆಯುತ್ತಿದೆ.

ಈ ನಡುವೆ ವಿ.ಸೋಮಣ್ಣ ಅವರ ಹೆಸರು ಗಟ್ಟಿಯಾಗಿ ಕೇಳಿಬರುತ್ತಿದೆ. ಒಕ್ಕಲಿಗ ಸಮುದಾಯದ ಹಿರಿಯ ನಾಯಕ, ಕೇಂದ್ರ ಸಚಿವ ಸ್ಥಾನ ಇದೆಲ್ಲ ಸೋಮಣ್ಣ ಅವರ ಬಲವಾಗಿದೆ. ರೆಬೆಲ್ ತಂಡಕ್ಕೆ ಸೋಮಣ್ಣ ಅವರನ್ನು ಬೆಂಬಲಿಸುವುದರಿಂದ ತಮ್ಮ ಮೌಲ್ಯ ಹೆಚ್ಚಿಸಿಕೊಳ್ಳಬಹುದು ಎಂಬ ಲೆಕ್ಕಾಚಾರ ಇದೆ ಎನ್ನಲಾಗಿದೆ. ನಾವು ಸೋಮಣ್ಣ ಅವರಿಗೆ ಬೆಂಬಲ ನೀಡಿದ್ರೆ, ಭವಿಷ್ಯದಲ್ಲಿ ಟಿಕೆಟ್, ಸ್ಥಾನಮಾನಗಳಲ್ಲಿ ಭಾಗ ದೊರೆಯಬಹುದು ಎಂಬ ಆಲೋಚನೆ ರೆಬೆಲ್ ತಂಡದಲ್ಲಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

**ವಿಜಯೇಂದ್ರ ವಿರುದ್ಧ ನಿಂತ ರೆಬೆಲ್ಸ್ ತಂಡ..!:** ಭೇಟಿಯ ಬಳಿಕ ಸೋಮಣ್ಣ ಭೇಟಿ ಮಾಡಿದ್ರು, ಚರ್ಚೆ ನಡೆದಿದೆ. ರಾಜ್ಯಾಧ್ಯಕ್ಷ ಸ್ಥಾನದ ಬಗ್ಗೆ ಹೈಕಮಾಂಡ್ ನಿರ್ಧರಿಸುತ್ತದೆ ಎಂದಿದ್ದಾರೆ. ಆದರೆ ರೆಬೆಲ್ ತಂಡದ ಬೆಂಬಲವು ಸೋಮಣ್ಣ ಅವರ ಲಾಬಿಯನ್ನು ಗಟ್ಟಿಗೊಳಿಸಿದೆ ಎಂಬುದು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ. ಈಗಾಗಲೇ ಬಿಜೆಪಿಯಲ್ಲಿ ವಿಜಯೇಂದ್ರ ಪರ-ವಿರೋಧಿ ಗುಂಪುಗಳಿವೆ.

ಈ ನಡುವೆ ರೆಬೆಲ್ ತಂಡ ಸೋಮಣ್ಣ ಪರವಾಗಿ ನಿಂತರೆ ಪಕ್ಷದೊಳಗೆ ಹೊಸ ಬಣಬಡಿದಾಟ ಉಂಟಾಗುವ ಸಾಧ್ಯತೆ ಇದೆ. ರಾಜ್ಯಾಧ್ಯಕ್ಷ ಸ್ಥಾನಕ್ಕಾಗಿ ನಡೆಯುತ್ತಿರುವ ಈ ದೆಹಲಿ ಲಾಬಿ ಬಿಜೆಪಿಯನ್ನು ಮತ್ತೊಮ್ಮೆ ಸಂಕಷ್ಟಕ್ಕೆ ದೂಡಿದೆ ಎನ್ನಲಾಗಿದೆ.

1. ರಾಜ್ಯಾಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಹೈಕಮಾಂಡ್ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ
2. ರಾಜ್ಯಾಧ್ಯಕ್ಷ ಸ್ಥಾನಕ್ಕೆ ವಿ. ಸೋಮಣ್ಣ ಅವರಿಗೆ ರೆಬೆಲ್ ತಂಡದ ಬೆಂಬಲ"
3. ದೆಹಲಿಯಲ್ಲಿ ನಡೆದ ರಹಸ್ಯ ಭೇಟಿಯೊಂದು ರಾಜ್ಯ ಬಿಜೆಪಿಯಲ್ಲಿ ದೊಡ್ಡ ಚರ್ಚೆ

**ಬಿಜೆಪಿಯಲ್ಲಿ ಬಣ ಇಲ್ಲ**

ದೆಹಲಿಗೆ ಹೋಗಿರೋರು ಅವರ ಕ್ಷೇತ್ರದಲ್ಲಿ ಸಂಘಟನೆ ಮಾಡಿಲ್ಲ. ಹಣ ಇದೆ ಅಂತ ಫ್ಲೈಟ್ ಮಾಡಿಕೊಂಡು ಹೋಗಿದ್ದಾರೆ. ಅವರ ಕ್ಷೇತ್ರದಲ್ಲಿ ಇವರು ಬಿಗ್ ಜಿರೋ. ಕಾಫಿ ಕುಡಿದು ಬರ್ತಾರೆ ಅಷ್ಟೆ. ಯಾವುದೇ ಹೈಕಮಾಂಡ್ ನಾಯಕರು ಇವರಿಗೆ ಸಮಯ ಕೊಟ್ಟಿಲ್ಲ. ಅವರ ಕ್ಷೇತ್ರದಲ್ಲಿ ಅಭಿವೃದ್ಧಿ ಇಲ್ಲ, ಶೂನ್ಯ ಸಾಧನೆ. ಇವರಿಗೆ ಜನ 100ಕ್ಕೆ ಜನ 0 ಅಂಕ ಕೊಡ್ತಿದ್ದಾರೆ. ರಾಜ್ಯಾಧ್ಯಕ್ಷರು ಬದಲಾವಣೆ ಅಂತ ಹಗಲು ಕನಸು ಕಾಣ್ತಾ ಇದ್ದಾರೆ. ಚಳಿ ಇದೆ, ಅಲ್ಲಿ ಕಾಫಿ ಕುಡಿದು ಬರ್ತಾರೆ. ಬಿಜೆಪಿಯಲ್ಲಿ ಯಾವುದೇ ಬಣ ಇಲ್ಲ. ನಮ್ಮದು ಕಮಲದ ಗುರುತು. ದೇಶದಲ್ಲಿ ಮೋದಿ, ಅಮಿತ್ ಶಾ, ನಡ್ಡಾ, ರಾಜ್ಯದಲ್ಲಿ ಯಡಿಯೂರಪ್ಪ ನಮ್ಮ ನಾಯಕರು ಎಂದರು. ಈ ರಾಜ್ಯ ಸರ್ಕಾರ ಸತ್ತು ಹೋಗಿದೆ. ಇದರ ವಿರುದ್ಧ ರಾಜ್ಯಾಧ್ಯಕ್ಷರು, ವಿಪಕ್ಷ ನಾಯಕ ನೇತೃತ್ವದಲ್ಲಿ ಹೋರಾಟ ಮಾಡ್ತೀವಿ. ಕರ್ನಾಟಕದಲ್ಲಿ ಬಿಜೆಪಿ ಕಟ್ಟಿದ್ದು ಯಡಿಯೂರಪ್ಪ. ಯಡಿಯೂರಪ್ಪ ಹೋರಾಟಗಾರ, ಅವರ ರಕ್ತದ ಕಣಕಣದಲ್ಲೂ ಹಿಂದುತ್ವ, ಪಕ್ಷ ಇದೆ.

**ರಾಜ್ಯಾಧ್ಯಕ್ಷರಾಗಿ ಮುಂದುವರಿಯೋದು ಸೂರ್ಯ-ಚಂದ್ರ ಇರುವಷ್ಟೇ ಸತ್ಯ**

**ದೆಹಲಿಯಲ್ಲಿ ಬೆಚ್ಚಗೆ ಮಲಗಿದ್ದು ಬರಲಿ**

ದೆಹಲಿಗೆ ಹೋಗಿ ಕಾಫಿ, ಟೀ ಕುಡಿದು ಕೆಲವರು ಸುದ್ದಿ ಮಾಡೋಕೆ ಹೊರಟಿದ್ದಾರೆ. ರಾಜ್ಯದ ಜನರು ಪ್ರಜ್ಞಾವಂತರು ಇದ್ದಾರೆ. ಯಡಿಯೂರಪ್ಪ ಕೆಲಸ ನಮಗೆ ಶ್ರೀರಕ್ಷೆ. ಮೋದಿ ಅವರ ಕೆಲಸ ಶ್ರೀರಕ್ಷೆ. ದೆಹಲಿಯಲ್ಲಿ ಚಳಿ ಬಹಳ ಇದೆ, ತುಂಬಾ ಮಂಜಿದೆ. ಬೆಡ್ ಶೀಡ್, ರಗ್ಗು ಅಥವಾ ಏನೇನು ಬೇಕೊ ಅದನ್ನ ತಗೊಂಡು ಬೆಚ್ಚಗೆ ಹೋಗಿ, ಬೆಚ್ಚಗೆ ಬರಲಿ ಅಂತ ಆಶಿಸುತ್ತೇನೆ ಅಂತ ರೆಬಲ್ ಟೀಂಗೆ ಲೇವಡಿ ಮಾಡಿದ್ರು. ಯಾರು ರಾಜ್ಯದ ಹಾಗೂ ದಾವಣಗೆರೆ ಜಿಲ್ಲೆಯ ಅಧ್ಯಕ್ಷರನ್ನ ಬದಲಾವಣೆ ಮಾಡುವ ಕನಸು ಕಾಣ್ತಿದ್ದಾರೋ ಅವರಿಗೆ ನಾನೊಂದು ಸಲಹೆ ಕೊಡ್ತೀನಿ. ಆರೋಗ್ಯದ ಬಗ್ಗೆ ಗಮನಹರಿಸಿ. ನಿಮ್ಮ ಆರೋಗ್ಯದ ಬಗ್ಗೆ ಕಳಕಳಿ ಇದೆ. ಅಲ್ಲಿ ಕಾಫಿ-ಟೀ ಕುಡಿದು ಸುದ್ದಿ ಮಾಡೋದು ಬೇಡ. ಸಿಎಂ-ಡಿಸಿಎಂ ನಡುವೆ ಆಗ್ತಿರೋ ಕುರ್ಚಿ ಗಲಾಟೆ ರೀತಿ ಬೇಡ. ರೆಬಲ್ ಟೀಂಗೆ ರೇಣುಕಾಚಾರ್ಯ ತಿರುಗೇಟು ಕೊಟ್ಟರು.

# ಮಂಗಳೂರಿನಲ್ಲಿ ಸಿದ್ದು, ಡಿಕೆಶಿ ಪರ ಘೋಷಣೆಯ ಹೈಡ್ರಾಮ

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಗದ್ದಲ ಮುಗಿದಿಲ್ಲ. ಎಲ್ಲವೂ ಶಮನ ಆಯ್ತು ಎಂದಾಗಲೇ ಕಾರ್ಯಕರ್ತರು ಭಿನ್ನ ಹಾದಿ ಹಿಡಿದಿದ್ದಾರೆ. ಮಂಗಳೂರು ಇಂತಹದೊಂದು ಹೈಡ್ರಾಮಕ್ಕೆ ಸಾಕ್ಷಿಯಾಯಿತು. ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಬೆಂಬಲಿಗರು ಘೋಷಣೆ ಕೂಗುವ ಮೂಲಕ ತಮ್ಮ ಅಭಿಮಾನ ಪ್ರದರ್ಶನ ಮಾಡಿದರು.

ನಾರಾಯಣ ಗುರು ಹಾಗೂ ಮಹಾತ್ಮ ಗಾಂಧಿ ಭೇಟಿ ಮತ್ತು ಸಂವಾದದ ಶತಮಾನೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮಂಗಳೂರಿನ ಉಳ್ಳಾಲದಲ್ಲಿ ಹಿರಿಯ ಕಾಂಗ್ರೆಸ್ ನಾಯಕ ಬಿ ಕೆ ಹರಿಪ್ರಸಾದ್ ನೇತೃತ್ವದಲ್ಲಿ ಬೃಹತ್ ಸಮಾವೇಶ ನಡೆಯಿತು. ಈ ಕಾರ್ಯಕ್ರಮದಲ್ಲಿ ಭಾಗಿಯಾಗಲು ಸಿದ್ದರಾಮಯ್ಯ ಆಗಮಿಸಿದ್ದರು.



**ಕೌಂಟರ್ ಆಗಿ ಘೋಷಣೆ**

ಅಲ್ಲದೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆಸಿ ವೇಣುಗೋಪಾಲ್ ಕೂಡಾ ಉಪಸ್ಥಿತರಿದ್ದರು. ಕೆಸಿ ವೇಣುಗೋಪಾಲ್ ಅವರು ವಿಮಾನ ನಿಲ್ದಾಣದ ಹೊರ ಬರುತ್ತಿದ್ದಂತೆ ಡಿಕೆ ಶಿವಕುಮಾರ್ ಅಭಿಮಾನಿಗಳು ಡಿಕೆ ಡಿಕೆ ಎಂದು ಘೋಷಣೆ ಕೂಗಲು ಶುರುಮಾಡಿದರು. ಕಾಂಗ್ರೆಸ್ ಮುಖಂಡರಾದ ಮಿಥುನ್ ರೈ ಹಾಗೂ ಮತ್ತಿತರರು ಡಿಕೆಶಿ ಪರವಾಗಿ ಘೋಷಣೆ ಕೂಗಿದರು.

ಕೆಲವೇ ಹೊತ್ತಿನಲ್ಲಿ ಸಿಎಂ ಸಿದ್ದರಾಮಯ್ಯ ವಿಮಾನ ನಿಲ್ದಾಣದಿಂದ ಹೊರಬರುತ್ತಿದ್ದಂತೆ ಸಿದ್ದರಾಮಯ್ಯ ಪರವಾಗಿ ಮತ್ತೊಂದು ಬಣದ ಕಾರ್ಯಕರ್ತರು ಘೋಷಣೆ ಕೂಗಿದರು. ಸಿದ್ದು, ಸಿದ್ದು ಪೂರ್ಣಾವಧಿ ಸಿಎಂ ಎಂದು ಘೋಷಣೆ ಕೂಗುವ ಮೂಲಕ ಟಕ್ಕರ್ ನೀಡಿದರು.

**ಕೆಸಿ ವೇಣುಗೋಪಾಲ್ ಜೊತೆಗೆ ಮಾತುಕತೆ:** ಸಿಎಂ ಸಿದ್ದರಾಮಯ್ಯ ಅವರು ಕೆ ಸಿ ವೇಣುಗೋಪಾಲ್ ಜೊತೆಗೆ ಮಾತುಕತೆ ನಡೆಸಿದರು. ಇಬ್ಬರು ನಾಯಕರು ಕೆಲ ಹೊತ್ತು ಚರ್ಚೆ ಮಾಡಿದರು. ಈ ವಿಚಾರವಾಗಿ ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿ, ''ವೇಣುಗೋಪಾಲ್ ಜೊತೆಗೆ ಯಾವುದೇ ರಾಜಕೀಯ ಚರ್ಚೆ ನಡೆದಿಲ್ಲ. ಸಾಮಾನ್ಯವಾಗಿ ನಾವು ಮಾತುಕತೆ ನಡೆಸಿದ್ದೇವೆ'' ಎಂದರು.

**ಸಮ್ಮೇಳನ ಉದ್ಘಾಟಿಸಿದ ಸಿಎಂ**

ದಕ್ಷಿಣ ಕನ್ನಡ ಜಿಲ್ಲೆ ಕೊಣಾಜೆ, ಮಂಗಳಗಂಗೋತ್ರಿಯಲ್ಲಿ ನಾರಾಯಣಗುರು ಅಧ್ಯಯನ ಪೀಠ, ಮಂಗಳೂರು ವಿವಿ ಆಯೋಜಿಸಿದ್ದ ಶತಮಾನದ ಪ್ರಸ್ತಾನ ನಾರಾಯಣಗುರು ಮಹಾತ್ಮಗಾಂಧಿ ಐತಿಹಾಸಿಕ ಸಂವಾದ ಶತಮಾನೋತ್ಸವ ಮತ್ತು ಶ್ರೀ ಗುರುವಿನ ಮಹಾಸಮಾಧಿ ಶತಾಬ್ದಿ, ಸರ್ವಮತ ಸಮ್ಮೇಳನ ಶತಮಾನೋತ್ಸವ, ಯತಿ ಪೂಜೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಕೆ ಸಿ ವೇಣುಗೋಪಾಲ್, ಲಕ್ಷ್ಮೀ ಹೆಬ್ಬಾಳ್ಕರ್, ಡಾ. ಜಿ ಪರಮೇಶ್ವರ್ ಮತ್ತಿತತರು ಉಪಸ್ಥಿತರಿದ್ದರು.

# ಕಾರ್ಟಿಯರ್ ವಾಚ್ ವಿವಾದದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ!

**• ಸಿದ್ದರಾಮಯ್ಯ ಧರಿಸಿದ 'ಸ್ಯಾಂಟೋಸ್ ಡಿ ಕಾರ್ಟಿಯರ್' ವಾಚ್ ಬೆಲೆ ಬರೋಬ್ಬರಿ 43.20 ಲಕ್ಷ ರೂ. ಎಂದು ಅಂದಾಜು**

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಕೀಯದಲ್ಲಿ ಐಷಾರಾಮಿ ವಾಚ್ ವಿವಾದಗಳು ಮತ್ತೆ ಮುನ್ನೆಲೆಗೆ ಬಂದಿದೆ. ಸದಾ ಸಮಾಜವಾದಿ ವರ್ಚಸ್ಸನ್ನು ಬಿಂಬಿಸಿಕೊಳ್ಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೊಮ್ಮೆ ದುಬಾರಿ ವಾಚ್ ಧರಿಸಿರುವುದು ರಾಜಕೀಯ ವಲಯದಲ್ಲಿ ಹೊಸ ಚರ್ಚೆಗೆ ನಾಂದಿ ಹಾಡಿದೆ. ಹಳೆಯ ಉಬ್ಲೋ ವಿವಾದದ ನೆನಪು ಮಾಸುವ ಮುನ್ನವೇ ಮತ್ತೊಮ್ಮೆ 'ಟೈಮ್' ಸುಳಿಯಲ್ಲಿ ಸಿಎಂ ಸಿಕ್ಕಿಕೊಂಡಿದ್ದಾರೆ.

ಇತ್ತೀಚೆಗೆ ಡಿಸಿಎಂ ಡಿಕೆ ಶಿವಕುಮಾರ್ ಸದಾಶಿವನಗರ ನಿವಾಸದಲ್ಲಿ ನಡೆದ ಉಪಹಾರ ಕೂಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಇಬ್ಬರೂ ಐಷಾರಾಮಿ ಕಾರ್ಟಿಯರ್ ಕಂಪನಿಯ ವಾಚ್‌ಗಳನ್ನು ಧರಿಸಿರುವುದು ಗಮನ ಸೆಳೆದಿತ್ತು. ಪರಿಶೀಲಿಸಿದಾಗ ಸಿದ್ದರಾಮಯ್ಯ ಇತ್ತೀಚಿನ ಹೆಚ್ಚು ಕಡಿಮೆ ಎಲ್ಲಾ ಕಾರ್ಯಕ್ರಮಗಳಲ್ಲೂ ಇದೇ ಕೈಗಡಿಯಾರವನ್ನು ಕಟ್ಟಿಕೊಂಡಿರುವುದು ಗಮನ ಸೆಳೆದಿದೆ. ಸ್ವತಃ ಅವರ ಫೇಸ್‌ಬುಕ್ ಪುಟದಲ್ಲಿರುವ ಚಿತ್ರಗಳೇ ಇದಕ್ಕೆ ಸಾಕ್ಷಿ.

ಈ ವಿಚಾರವನ್ನು ಇದೀಗ ಬಿಜೆಪಿ ಪಕ್ಷವು ಕೈಗೆತ್ತಿಕೊಂಡಿದ್ದು,







ಮುಖ್ಯಮಂತ್ರಿಗಳ ಕೈಯಲ್ಲಿರುವ 43 ಲಕ್ಷ ರೂ. ಮೌಲ್ಯದ ವಾಚ್ ಇದೀಗ ರಾಷ್ಟ್ರೀಯ ಮಟ್ಟದಲ್ಲಿಯೂ ಚರ್ಚೆಗೆ ಗ್ರಾಸವಾಗಿದೆ.

**ಏನೀ ವಾಚ್‌ನ ವಿಶೇಷತೆಯೇನು:** ಸಿದ್ದರಾಮಯ್ಯ ಅವರು ಧರಿಸಿದ್ದ ವಾಚ್ 'ಸ್ಯಾಂಟೋಸ್ ಡಿ ಕಾರ್ಟಿಯರ್' ಕಲೆಕ್ಷನ್‌ನ ಅತ್ಯುನ್ನತ ಶ್ರೇಣಿಗೆ ಸೇರಿದ್ದಾಗಿದೆ. ಇದು ಹಲವು ವಿಶೇಷತೆಗಳನ್ನು ಹೊಂದಿದೆ. ಅವುಗಳು ಹೀಗಿವೆ,

**ದುಬಾರಿ ಬೆಲೆ:** ಇದರ ಬೆಲೆ ಸುಮಾರು 43 ಲಕ್ಷದ 20 ಸಾವಿರ ರೂ.


**ಅತ್ಯಾಕರ್ಷಕ ವಿನ್ಯಾಸ:** ಇದು ಸಂಪೂರ್ಣವಾಗಿ 18 ಕ್ಯಾರೆಟ್ ರೋಸ್ ಗೋಲ್ಡ್‌ನಿಂದ ತಯಾರಿಸಲ್ಪಟ್ಟಿದೆ. ಇದರ ಕೇಸ್ ಮತ್ತು ಬ್ರೇಸ್‌ಲೆಟ್‌ನಲ್ಲಿರುವ ಸ್ಕ್ರೂಗಳು 1904ರ ಮೂಲ ವಿನ್ಯಾಸವನ್ನು ನೆನಪಿಸುತ್ತವೆ.

**ಅತ್ಯಾಧುನಿಕ ತಾಂತ್ರಿಕತೆ:** ಇದು ಕಾರ್ಟಿಯರ್‌ನ 'ಕ್ಯಾಲಿಬರ್ 1847 ಎಂಸಿ' ಮೆಕ್ಯಾನಿಸಂ ಹೊಂದಿದ್ದು, 100 ಮೀಟರ್‌ಗಳಷ್ಟು ನೀರಿನಲ್ಲಿಯೂ ಸುರಕ್ಷಿತವಾಗಿ ಕೆಲಸ ಮಾಡಬಲ್ಲದು. ಅಂದರೆ ಅಷ್ಟರಮಟ್ಟಿಗೆ ವಾಟರ್ ರೆಸಿಸ್ಟಂಟ್ ಆಗಿದೆ.

**ಆಕರ್ಷಕ ನೋಟ:** ಬೆಳ್ಳಿಯ ಬಣ್ಣದ ಡಯಲ್, ರೋಮನ್ ಅಂಕಿಗಳು ಮತ್ತು ಕತ್ತಿಯ ಆಕಾರದ ನೀಲಿ ಮುಳ್ಳುಗಳು ಈ ವಾಚ್‌ನ ಅಂದವನ್ನು ಹೆಚ್ಚಿಸಿವೆ.

**ಮರುಕಳಿಸಿದ ಉಬ್ಲೋ ವಿವಾದದ ಛಾಯೆ**

2016ರಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಸುಮಾರು 50 ರಿಂದ 70 ಲಕ್ಷ ರೂ. ಮೌಲ್ಯದ ವಜ್ರ ಖಚಿತ ಉಬ್ಲೋ ವಾಚ್ ಧರಿಸಿದ್ದು ಭಾರಿ ರಾಜಕೀಯ ವಿವಾದವನ್ನೇ ಎಬ್ಬಿಸಿತ್ತು. ಬಡವರ ಪರ ದನಿ ಎತ್ತುವ ನಾಯಕ ಇಷ್ಟು ದುಬಾರಿ ವಾಚ್ ಧರಿಸಬಹುದೇ ಎಂದು ವಿಪಕ್ಷಗಳು ಪ್ರಶ್ನಿಸಿದ್ದವು. ಅಂದು ಸಿದ್ದರಾಮಯ್ಯನವರು, ಇದು ತಮ್ಮ ಸ್ನೇಹಿತ ಡಾ. ಗಿರೀಶ್ ಚಂದ್ರ ವರ್ಮಾ ಅವರು ನೀಡಿದ ಸೆಕೆಂಡ್ ಹ್ಯಾಂಡ್ ಉಡುಗೊರೆ ಎಂದು ಸಮರ್ಥಿಸಿಕೊಂಡಿದ್ದರು. ಇದೀಗ 43 ಲಕ್ಷದ ಹೊಸ ವಾಚ್ ಅದೇ ಮಾದರಿಯ ಚರ್ಚೆಯನ್ನು ಹುಟ್ಟುಹಾಕಿದೆ.



**ಈ ದಿನದ ದರ** ಪೆಟ್ರೋಲ್: 103.49 ₹/L ಡೀಸೆಲ್ : 91.64 ₹/L ಬಂಗಾರ: ₹13,058/Gram24ct ₹11,970/Gram22ct ಬೆಳ್ಳಿ: ₹191.00/Gram



## ಸಿದ್ದಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

## ಲಿಂಗಾಯತರು: ಸಿದ್ಧಾರೂಢರು

ಸಿದ್ಧಾರೂಢರು ಜನ್ಮತಃ ಬಣಜಿಗ ಲಿಂಗಾಯತರು. ಲಿಂಗದೀಕ್ಷಿತರು. ಗಜದಂಡ ಸ್ವಾಮಿಗಳ ಬಳಿ ಅಧ್ಯಯನ ಪೂರೈಸಿದ ಬಳಿಕ ಲಿಂಗಮಧ್ಯೇ ಜಗತ್ಸರ್ವಂ ಸರ್ವಂ ಲಿಂಗಮಯಂ ಜಗತ್ ಲಿಂಗಬಾಹ್ಯಾತ್ ಪರಂ ನಾಸ್ತಿ ತಸ್ಮಾಲ್ಲಿಂಗಮಹಂ ಸದಾ = ಜಗವೆಲ್ಲ ಲಿಂಗಮಯ. ಲಿಂಗ ಬಿಟ್ಟು ಬೇರೇನಿಲ್ಲ. ನಾನು ಲಿಂಗವೇ ಆಗಿದ್ದೇನೆ ಎಂಬ ಆಗಮೋಕ್ತಿಯನ್ನು ಉಲ್ಲೇಖಿಸಿ ಹೊರಲಿಂಗ ನನಗಿನ್ನು ಬೇಕಿಲ್ಲ ಎಂದು ಕೊರಳೊಳಗಿನ ಲಿಂಗವನ್ನು ಗುರುಪಾದಕ್ಕೆ ಅರ್ಪಿಸಿದರು. ವಿಭೂತಿ ಧರಿಸುತ್ತಿದ್ದರು. ಸಂನ್ಯಾಸಿಯಾಗಿದ್ದರೂ ಕಾವೀ ಧರಿಸದೇ ಬಿಳಿಯ ಬಟ್ಟೆಯಲ್ಲಿದ್ದರು. ಅಖಂಡ ಭಾರತ ಸಂಚರಿಸಿ ಮಠ ದೇವಸ್ಥಾನ ಗುರುದ್ವಾರಗಳಿಗೆ ಭೇಟಿ ನೀಡಿದರು. ಕೆಲವೆಡೆ ದೇವರಿಗೇ ಆಶೀರ್ವದಿಸಿದರು. ತೀರ್ಥಯಾತ್ರೆ ಮಾಡಲಾಗದಿದ್ದಲ್ಲಿ ತೀರ್ಥಕ್ಷೇತ್ರಗಳ ಹೆಸರುಗಳನ್ನು ಪಠಿಸಿದರೂ ತೀರ್ಥಯಾತ್ರೆಯ ಲಾಭವಿದೆ ಎಂದರು. ತಾವು ಲಿಂಗ ಧರಿಸದಿದ್ದರೂ ಲಿಂಗಪೂಜೆಯನ್ನು ವಿರೋಧಿಸಲಿಲ್ಲ. ಅಥಣಿಯ ಮುರುಘೇಂದ್ರ ಶ್ರೀ ಹಾನಗಲ್ ಕುಮಾರ ಶ್ರೀಗಳಂಥವರು ತಮ್ಮ ಬಳಿ ಇದ್ದಾಗ ಅವರ ಇಷ್ಟಲಿಂಗ ಪೂಜೆಗೆ ಕೆಲವೊಮ್ಮೆ ಸ್ವತಃ ತಾವೇ ಪೂಜಾ ಸಾಮಗ್ರಿಗಳನ್ನು ಒಯ್ಯುತ್ತಿದ್ದರಂತೆ. ಎಂದಿಗೂ ಲಿಂಗ ಜಾತಿ ಮತ ಭೇದ ಎಣಿಸಲಿಲ್ಲ. ನಿಜಗುಣ ಶಿವಯೋಗಿಗಳ ವೇದಾಂತ ಗ್ರಂಥ ಉಪನಿಷತ್ ಬ್ರಹ್ಮಸೂತ್ರ, ಭಗವದ್ಗೀತೆ ಶೂನ್ಯ ಸಂಪಾದನೆ ಮುಂತಾದ ಕೃತಿಗಳ ಮೇಲೆ ಉಪನ್ಯಾಸ ನೀಡಿದರು. ಕರ್ಮ ಉಪಾಸನಾ ಭಕ್ತಿ ಜ್ಞಾನ ನಾಲ್ಕಕ್ಕೂ ಅವಕಾಶವಿತ್ತರು.

# ಶಾಲೆಯ ನೂರಾರು ಮಕ್ಕಳಿಂದ ವಿಶ್ವ ಅಂಗವಿಕಲರ ದಿನಾಚರಣೆ ಅಂಗವಾಗಿ ನಡಿಗೆ ಜಾಥ

• **ಉದಯವಾಹಿನಿ, ಬೆಂಗಳೂರು**

ಇಂದಿರಾನಗರ ಆಚಾರ್ಯ ಶ್ರೀ ರಾಕುಂ ಅಂಧರ ಮಕ್ಕಳ ಶಾಲೆಯಲ್ಲಿ ವಿಶ್ವ ಅಂಗವಿಕಲರ ದಿನಾಚರಣೆ ಅಂಗವಾಗಿ ನಡಿಗೆ ಜಾಥ(ವಾಕಥಾನ್) ಆಯೋಜಿಸಲಾಗಿತ್ತು. ಆಚಾರ್ಯ ಶ್ರೀ ರಾಕುಂ ಸ್ವಾಮೀಜಿರವರ ಮಾರ್ಗದರ್ಶನದಲ್ಲಿ ಬ್ರೈಲ್ ವಿಭಾಗದ ಮುಖ್ಯಸ್ಥರಾದ ನಟರಾಜ್ ಮತ್ತು ಅಂಧ ಬಾಲಕ, ಮತ್ತು ಬಾಲಕಿಯರು ಫಲಕಗಳು ಹಿಡಿದು ಇಂದಿರಾನಗರ ಸುತ್ತಮುತ್ತಲು ನಡಿಗೆ ಜಾಥ


ಉದಯವಾಹಿನಿ ಚಿತ್ರ

ಮಾಡಿದರು. ಅಂಗವಿಕಲರಿಗೆ ದೇಹದಲ್ಲಿ ನ್ಯೂನತೆ ಇರುತ್ತದೆ. ಮಾನಸಿಕವಾಗಿ ಸದೃಢವಾಗಿ ಇರುತ್ತಾರೆ. ಅವರಿಗೆ ಸಹಾನುಭೂತಿ ಮುಖ್ಯವಲ್ಲ ಅವಕಾಶ ನೀಡಬೇಕು. ಆಚಾರ್ಯ ಶ್ರೀ ರಾಕುಂ ಶಾಲೆಯಲ್ಲಿ ಕಳೆದ 27ವರ್ಷಗಳಲ್ಲಿ ಸಾವಿರಾರು ಅಂಧ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಪೂರೈಸಿ ಸ್ವಾವಲಂಭಿ ಜೀವನ ಸಾಗಿಸುತ್ತಿದ್ದಾರೆ. ಸರ್ಕಾರ, ಅರೆ ಸರ್ಕಾರಿ ಮತ್ತು ಐ.ಟಿ.ಬಿ.ಟಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಇಂದಿರಾನಗರದಲ್ಲಿರುವ ಆಚಾರ್ಯ ಶ್ರೀ ರಾಕುಂ ಅಂಧರ ಮಕ್ಕಳ ಶಾಲೆ ಮತ್ತು ದೇವನಹಳ್ಳಿಯಲ್ಲಿ ಆಚಾರ್ಯ ಶ್ರೀ ರಾಕುಂ ಶಾಲೆಯಲ್ಲಿ ಉಚಿತವಾಗಿ ನರ್ಸರಿಯಿಂದ ಮಾಸ್ಟರ್ ಪದವಿ ವರಗೆ ಉಚಿತ ವಿದ್ಯಾಭ್ಯಾಸ ನೀಡಲಾಗುತ್ತಿದೆ.

ಪದವಿ ಪೂರೈಸಿದ ಮಕ್ಕಳಿಗೆ ಇಲ್ಲಿಯೆ ಉದ್ಯೋಗ ಅವಕಾಶ ಸಹ ನೀಡಲಾಗುತ್ತಿದೆ.ಶಿಕ್ಷಣದಿಂದ ಮಾತ್ರ ದೇಶ ಅಭಿವೃದ್ಧಿ ಸಾಧ್ಯ ಮತ್ತು ವಿದ್ಯಾವಂತ ಸಮಾಜ ನಿರ್ಮಾಣಕ್ಕೆ ಸ್ವಾಮಿ ರಾಕುಂಜೀರವರು ಶ್ರಮವಹಿಸುತ್ತಿದ್ದಾರೆ.

# ಅಕ್ರಮ ಬಡಾವಣೆಗಳಲ್ಲಿನ ನಿವೇಶನಗಳಿಗೆ ಖಾತಾ ಪ್ರಮಾಣಪತ್ರ ನೀಡಿದ ಆರೋಪ

## ಬೊಮ್ಮನಹಳ್ಳಿ ವಲಯದ ಬೇಗೂರು ವಿಭಾಗದ ಕಂದಾಯ ಅಧಿಕಾರಿಗಳ ತಂಡ ಮೊದಲ ಬಾರಿಗೆ ವಜಾ

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರಿನಲ್ಲಿ ಅಕ್ರಮ ಬಡಾವಣೆಗಳಲ್ಲಿನ ನಿವೇಶನಗಳಿಗೆ ಖಾತಾ ಪ್ರಮಾಣಪತ್ರ ನೀಡಿದ ಆರೋಪದ ಮೇಲೆ, ಬೊಮ್ಮನಹಳ್ಳಿ ವಲಯದ ಬೇಗೂರು ವಿಭಾಗದ ಕಂದಾಯ ಅಧಿಕಾರಿಗಳ ಸಂಪೂರ್ಣ ತಂಡವನ್ನು ಬೆಂಗಳೂರು ಮಹಾನಗರ ಪ್ರಾಧಿಕಾರ (ಜಿಬಿಎ) ಮೊದಲ ಬಾರಿಗೆ ವಜಾಗೊಳಿಸಿದೆ. ಈ ಕ್ರಮವು ಪ್ರಾಧಿಕಾರ ಅಸ್ತಿತ್ವಕ್ಕೆ ಬಂದ ನಂತರ ತನ್ನ ಸಿಬ್ಬಂದಿ ವಿರುದ್ಧ ಕೈಗೊಂಡ ಮೊದಲ ದೊಡ್ಡಮಟ್ಟದ ಶಿಸ್ತುಕ್ರಮ.



ವಜಾಗೊಂಡವರಲ್ಲಿ ಬೇಗೂರು ಕಂದಾಯ ಅಧಿಕಾರಿ ಶಾಂಟೇಶ್, ಸಹಾಯಕ ಕಂದಾಯ ಅಧಿಕಾರಿ ನರಸಿಂಹಲು, ಕಂದಾಯ ನಿರೀಕ್ಷಕರಾದ ಹೇಮಂತ್ ಕುಮಾರ್ ಮತ್ತು ಸುರೇಶ್, ಹಾಗೂ ದ್ವಿತೀಯ ದರ್ಜೆ ಸಹಾಯಕರುಗಳಾದ ಬಾಲಲಿಂಗರಾಜು, ಭಾಗ್ಯ ಶ್ರೀ ಸೇರಿದ್ದಾರೆ. ಈ ವಜಾ ಕ್ರಮ 2025ರಲ್ಲಿ ಏಪ್ರಿಲ್, ಮೋಹನ್ ಬಾಬು ಎಂಬುವರು ಸಲ್ಲಿಸಿದ ದೂರಿನ ಆಧಾರದಲ್ಲಿ ನಡೆಸಲಾಗಿರುವ ತನಿಖೆಯ ಆಧಾರದಲ್ಲಿ ಆಗಿರುವಂಥದ್ದು.

ಜಿಬಿಎ ಈ ಪ್ರಕರಣದ ಬಗ್ಗೆ ಬೊಮ್ಮನಹಳ್ಳಿ ಜಂಟಿ ಆಯುಕ್ತರಿಂದ ವರದಿ ಕೇಳಿತ್ತು. ವರದಿಯಲ್ಲಿ, ಕಂದಾಯ ಅಧಿಕಾರಿಗಳು ಅಕ್ಟೋಬರ್ 2024 ರ ಸುತ್ತೋಲೆ, ಮತ್ತು ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ್, 1961 ರ ಸೆಕ್ಷನ್ 17 ರ ಉಲ್ಲಂಘನೆಯನ್ನು ಮಾಡಿ, ಅಕ್ರಮ ಬಡಾವಣೆಗಳಲ್ಲಿನ ನಿವೇಶನಗಳಿಗೆ ಬಿ ಖಾತಾ ಪ್ರಮಾಣಪತ್ರಗಳನ್ನು ನೀಡಿದ್ದಾರೆ ಎಂದು ತಿಳಿದುಬಂದಿದೆ. ಸುತ್ತೋಲೆಯ ಪ್ರಕಾರ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ದಂತಹ ಯೋಜನೆ ಪ್ರಾಧಿಕಾರಗಳಿಂದ ಅನುಮೋದನೆ ಪಡೆದ ಬಡಾವಣೆಗಳಲ್ಲಿನ ನಿವೇಶನಗಳಿಗೆ ಮಾತ್ರ ಖಾತಾ ಪ್ರಮಾಣಪತ್ರ ನೀಡಬೇಕು.

**ಈ ಹಿಂದೆ ಕಾಗದ ರೂಪದಲ್ಲಿ ನೀಡುತ್ತಿದ್ದ ಹಕ್ಕುಪತ್ರಗಳಲ್ಲಿ ಮೂಲ ದಾಖಲೆ ಇಲ್ಲದೆ, ಒಂದೇ ಮನೆಗೆ ಎರಡು-ಮೂರು ಹಕ್ಕುಪತ್ರ ನೀಡಿದ ಉದಾಹರಣೆಗಳಿದ್ದವು. ಇದನ್ನು ನಿಯಂತ್ರಿಸಲು ಡಿಜಿಟಲ್ ಹಕ್ಕುಪತ್ರಗಳನ್ನು ನೀಡಲು ನಿರ್ಧರಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ಈ ಡಿಜಿಟಲ್ ವ್ಯವಸ್ಥೆಯಿಂದ ಮೂಲ ಕಡತ ಕಳೆದುಹೋಗುವುದು ಅಥವಾ ನಕಲಿ ಮಾಡುವ ಸಮಸ್ಯೆಗಳು ಉದ್ಭವಿಸುವುದಿಲ್ಲ. ಜೊತೆಗೆ, ಅವರ ಆಸ್ತಿಗಳನ್ನು ನೋಂದಣಿ ಮಾಡಲು ಮತ್ತು ಖಾತೆ ಮಾಡಿಕೊಡಲು ಕ್ರಮ ವಹಿಸಲಾಗುವುದು ಎಂದಿದ್ದಾರೆ. -ಕೃಷ್ಣ ಬೈರೇಗೌಡ**

ಈ ಆದೇಶವು ನಿಯಮಗಳನ್ನು ಪಾಲಿಸದೆ ನಿವೇಶನಗಳನ್ನು ವಿಭಜಿಸುವುದನ್ನು ನಿಲ್ಲಿಸಿತ್ತು. ಏಕೆಂದರೆ ಇಂತಹ ಪದ್ಧತಿಗಳು ಕೇವಲ ಆದಾಯ ನಷ್ಟಕ್ಕೆ ಕಾರಣವಾಗುವುದಲ್ಲದೆ ಮತ್ತು ಅಗತ್ಯವಿರುವ ತೆರೆದ ಜಾಗಗಳನ್ನೂ ಕಡಿಮೆ ಮಾಡುತ್ತವೆ.

### ತನಿಖೆಯಲ್ಲಿ ಪತ್ತೆಯಾಗಿದ್ದೇನು

**ಆರು ಅಧಿಕಾರಿಗಳು ಮೂರು ಪ್ರತ್ಯೇಕ ಅಕ್ರಮಗಳಲ್ಲಿ ಭಾಗಿಯಾಗಿದ್ದಾರೆ ಎಂದು ತನಿಖೆಯಲ್ಲಿ ತಿಳಿದುಬಂದಿದೆ. ಮೊದಲ ಪ್ರಕರಣದಲ್ಲಿ, ನಾಗನಥಪುರ ಗ್ರಾಮದ ಸರ್ವೆ ನಂಬರ್ 31/2 ರಲ್ಲಿ 1 ಎಕರೆ 35 ಗುಂಟೆ ಜಾಗದಲ್ಲಿ ಸಂಸ್ಕೃತಿ ಡೆವಲಪರ್ಸ್' ನಿರ್ಮಿಸಿದ 49 ನಿವೇಶನಗಳಿಗೆ ಬಿ ಖಾತಾ ನೀಡಲಾಗಿದೆ. ಎರಡನೇ ಪ್ರಕರಣದಲ್ಲಿ, ಬಸವನಪುರ ಗ್ರಾಮದಲ್ಲಿ 10.12 ಗುಂಟೆ ಜಾಗದಲ್ಲಿ ರೀಟಾ ಫೆರ್ನಾಂಡಿಸ್ ಮತ್ತು ಇತರರು ಅಭಿವೃದ್ಧಿಪಡಿಸಿದ 27 ನಿವೇಶನಗಳಿಗೆ ಖಾತಾ ನೀಡಲಾಗಿದೆ. ಮೂರನೇ ಪ್ರಕರಣದಲ್ಲಿ, ಬೇಗೂರು ಗ್ರಾಮದಲ್ಲಿ ಕಮಲಮ್ಮ ಅವರಿಗೆ ಸೇರಿದ 2.11 ಎಕರೆ ಜಾಗದಲ್ಲಿ ನಿರ್ಮಿಸಲಾದ 52 ನಿವೇಶನಗಳಿಗೆ ಖಾತಾ ನೀಡಲಾಗಿದೆ.**

**ಬಡಾವಣೆ ರಚನೆಗೆ ಅನುಮೋದನೆ ಪಡೆದಿರಲಿಲ್ಲ**

ಈ ಯಾವುದೇ ನಿವೇಶನಗಳು ಬಡಾವಣೆ ರಚನೆಗೆ ಅನುಮೋದನೆ ಪಡೆದಿರಲಿಲ್ಲ. ರಸ್ತೆ ಜಾಲ, ತೆರೆದ ಜಾಗಗಳು, ಭೂಮಿ ಬಿಟ್ಟುಕೊಡುವಿಕೆ ಮುಂತಾದವುಗಳನ್ನು ಒದಗಿಸುವುದನ್ನು ತಪ್ಪಿಸಲು ಈ ಅಕ್ರಮ ನಡೆದಿದೆ.

ಕೆಲವು ನಿವೇಶನಗಳಿಗೆ ಇ-ಖಾತಾ ಕೂಡ ಸಿಕ್ಕಿದೆ. ಇದು ಭ್ರಷ್ಟ ಅಧಿಕಾರಿಗಳ ಸಹಾಯದಿಂದ ಅತ್ಯಂತ ಸುರಕ್ಷಿತ ಎನ್ನಲಾದ ವ್ಯವಸ್ಥೆಯನ್ನೂ ದುರುಪಯೋಗಪಡಿಸಿಕೊಳ್ಳಬಹುದು ಎಂಬುದನ್ನು ತೋರಿಸುತ್ತದೆ. ಖಾತಾ ಪ್ರಮಾಣಪತ್ರ ಈಗ ನಿವೇಶನ ನೋಂದಣಿಗೆ ಕಡ್ಡಾಯವಾಗಿರುವುದರಿಂದ, ಕಂದಾಯ ಅಧಿಕಾರಿಗಳು ಯಾವುದೇ ಮಾಲೀಕತ್ವದ ಪುರಾವೆಗಳಿಲ್ಲದೆ, ಕೇವಲ 128 ವ್ಯಕ್ತಿಗಳು ಸಲ್ಲಿಸಿದ ಸ್ವಯಂ ಘೋಷಿತ ಪ್ರಮಾಣಪತ್ರಗಳ ಆಧಾರದ ಮೇಲೆ ಕಂದಾಯ ಪ್ರಮಾಣಪತ್ರಗಳನ್ನು ಸೃಷ್ಟಿಸಿದ್ದಾರೆ ಎಂದು ತಿಳಿದುಬಂದಿದೆ. ಅವರು ಈ ವಿವರಗಳನ್ನು ಕೈಪಿಡಿ ರಿಜಿಸ್ಟರ್‌ನಲ್ಲಿ ನಮೂದಿಸಿದ್ದಾರೆ. ಹೀಗೆ, ಅಕ್ರಮವಾಗಿ ಖಾತೆ ಪಡೆದ ನಿವೇಶನಗಳ ಇ-ಖಾತಾ ಪ್ರಮಾಣಪತ್ರಗಳನ್ನು ಪರಿಶೀಲಿಸುವಾಗ ಈ ಹಗರಣ ಬೆಳಕಿಗೆ ಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಬಿಎ ಈಗ ನಗರ ಅಭಿವೃದ್ಧಿ ಇಲಾಖೆಯ ಅನುಮತಿಗಾಗಿ ಕಾಯದೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರ ಹೊಂದಿದೆ. ಆದ್ದರಿಂದ, ಭವಿಷ್ಯದಲ್ಲಿ ಇಂತಹ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ. ಜಿಬಿಎ, ಬೆಂಗಳೂರಿನಲ್ಲಿ ಭೂಮಿ ಮತ್ತು ಆಸ್ತಿ ವ್ಯವಹಾರಗಳಲ್ಲಿ ಪಾರದರ್ಶಕತೆ ತರಲು ಮತ್ತು ಅಕ್ರಮಗಳನ್ನು ತಡೆಯಲು ಈ ರೀತಿಯ ಕಠಿಣ ಕ್ರಮಗಳನ್ನು ಮುಂದುವರಿಸುವ ಸಾಧ್ಯತೆಯಿದೆ. ಈ ಘಟನೆ ಬೆಂಗಳೂರಿನಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳ ಭ್ರಷ್ಟಾಚಾರದ ಬಗ್ಗೆ ಮತ್ತೊಮ್ಮೆ ಬೆಳಕು ಚೆಲ್ಲಿದೆ.

## ಶೇಷಾದ್ರಿಪುರದ ರಾಯರ ಮಠದಲ್ಲಿ ಭಗವದ್ಗೀತಾ ಪಠಣ ಕಾರ್ಯಕ್ರಮ

• **ಉದಯವಾಹಿನಿ, ಬೆಂಗಳೂರು**

ವಿಶ್ವ ಹಿಂದೂ ಪರಿಷತ್ ವತಿಯಿಂದ ಹಿಂದೂ ಸಮಾಜದ ಸರ್ವಾಂಗೀಣ ಉನ್ನತಿಗಾಗಿ, ಸಂಸ್ಕೃತಿಯ ಉಳಿವಿಗಾಗಿ, ಜ್ಞಾನ-ಕರ್ಮ-ಭಕ್ತಿ ಹಾಗೂ ರಾಜ ಯೋಗಗಳ ಅರಿವಿಗಾಗಿ ಬೆಂಗಳೂರಿನ 108 ಧಾರ್ಮಿಕ ಕೇಂದ್ರಗಳಲ್ಲಿ ಭಗವದ್ಗೀತಾ ಪಠಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದರ ಅಂಗವಾಗಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಡಿಸೆಂಬರ್ 4, ಗುರುವಾರ ಮಧ್ಯಾಹ್ನ 3-30ಕ್ಕೆ ಶೇಷಾದ್ರಿಪುರದ ಪ್ಲಾಟ್ ಫಾರಂ ರಸ್ತೆಯಲ್ಲಿರುವ (ಮಂತ್ರಿ ಮಾಲ್ ಮೆಟ್ರೋ ಸ್ಟೇಷನ್ ಎದುರು) ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಏರ್ಪಡಿಸಲಾಗಿದೆ.



ಈ ವಿಶೇಷ ಲೋಕಕಲ್ಯಾಣ ಕಾರ್ಯಕ್ರಮದಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಸಂಸ್ಥೆಯ ಪದಾಧಿಕಾರಿಗಳು ವಿನಂತಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ, ಮೊಬೈಲ್: ಶ್ರೀ ಸತೀಶ್-9945282078 / ಶ್ರೀಮತಿ ಜಗದಂಬಾ-8310973938

## 1.71 ಕೋಟಿ ರೂ. ಮೌಲ್ಯದ ಹೈಡ್ರೋಪೋನಿಕ್ ಗಾಂಜಾ ಕಳ್ಳಸಾಗಣೆ

• **ಉದಯವಾಹಿನಿ, ಬೆಂಗಳೂರು**

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು 1.71 ಕೋಟಿ ರೂ. ಮೌಲ್ಯದ ಹೈಡ್ರೋಪೋನಿಕ್ ಗಾಂಜಾವನ್ನು ಕಳ್ಳಸಾಗಣೆ ಮಾಡುತ್ತಿದ್ದಕ್ಕಾಗಿ ಮಲೇಷ್ಯಾದಿಂದ ಇಲ್ಲಿಗೆ ಆಗಮಿಸಿದ ಪ್ರಯಾಣಿಕನನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಘಟನೆ ಡಿಸೆಂಬರ್ 1 ರಂದು ಬೆಂಗಳೂರು ವಿಮಾನ ನಿಲ್ದಾಣದ ಟರ್ಮಿನಲ್ 2 ರಲ್ಲಿ ನಡೆದಿದೆ ಎಂದು ಅವರು ತಿಳಿಸಿದ್ದಾರೆ. ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ ಅಧಿಕಾರಿಗಳು ಕೌಲಾಲಂಪುರದಿಂದ ಆಗಮಿಸುತ್ತಿದ್ದ ಒಬ್ಬ ಪ್ರಯಾಣಿಕನನ್ನು ತಡೆದು 1.71 ಕೋಟಿ ರೂ. ಮೌಲ್ಯದ 4.9 ಕೆಜಿ ಹೈಡ್ರೋಪೋನಿಕ್ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಆ ಪ್ರಯಾಣಿಕನನ್ನು NDPS ಕಾಯ್ದೆ ಅಡಿಯಲ್ಲಿ ಬಂಧಿಸಲಾಗಿದೆ ಎಂದು ಬೆಂಗಳೂರು ಕಸ್ಟಮ್ಸ್ X ನಲ್ಲಿನ ಪೋಸ್ಟ್‌ನಲ್ಲಿ ತಿಳಿಸಿದೆ.

## ಜಾತಿ ದೌರ್ಜನ್ಯ ತಡೆ ಕಾಯ್ದೆ ಅನ್ವಯಕ್ಕೆ ಆಗ್ರಹ: ಸವಿತಾ ಸಮಾಜ ಪ್ರತಿಭಟನೆ

• **ಉದಯವಾಹಿನಿ, ಬೆಂಗಳೂರು**

ಸಮಾಜದವರು ಅನುಭವಿಸುತ್ತಿರುವ ಸಂಕಷ್ಟವನ್ನು ತಪ್ಪಿಸಲು ಪರಿಶಿಷ್ಟ ಜಾತಿಯವರಿಗೆ ಇರುವಂತೆಯೇ ತಮ್ಮ ಸಮುದಾಯಕ್ಕೂ ಜಾತಿ ದೌರ್ಜನ್ಯ ತಡೆ ಕಾಯ್ದೆ ಅನ್ವಯಿಸುಸಬೇಕು ಎಂದು ಆಗ್ರಹಿಸಿ ಕರ್ನಾಟಕ ಸವಿತಾ ಸಮಾಜವು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿತು.ಗ್ರಾಮೀಣ ಭಾಗದಲ್ಲಿ ವೃತ್ತಿ ನಿರತ ಸವಿತಾ ಸಮಾಜದವರು ಬೇರೆ ಬೇರೆ ವರ್ಗಗಳಿಂದ ತೊಂದರೆ ಅನುಭವಿಸುವಂತಾಗಿದೆ. ದೌರ್ಜನ್ಯಗಳು ನಡೆಯುತ್ತಲೇ ಇವೆ. ಅಸ್ಪೃಶ್ಯತೆಯನ್ನು ತಮ್ಮ ಸಮುದಾಯವೂ ಅನುಭವಿಸುತ್ತಿದೆ. ಹಿಂದುಳಿದ ವರ್ಗಗಳ ಆಯೋಗವು ಸರ್ಕಾರ ಸಲ್ಲಿಸಿದ ವರದಿಯಲ್ಲಿ ತಮ್ಮ ಸಮುದಾಯದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಪರಿಸ್ಥಿತಿಯನ್ನು ಉಲ್ಲೇಖಿಸಲಾಗಿದೆ. ಈ ವರದಿಯ ಶಿಫಾರಸಿನಲ್ಲಿ ಸವಿತಾ ಸಮಾಜವನ್ನೂ ಜಾತಿ ದೌರ್ಜನ್ಯ ತಡೆ ಕಾಯ್ದೆ ವ್ಯಾಪ್ತಿಗೆ ತರಬೇಕು ಎಂದು ಸಮಾಜದ ಅಧ್ಯಕ್ಷ ಡಿ.ಆರ್.ಕೃಷ್ಣ ಅವರು ಸರ್ಕಾರವನ್ನು ಒತ್ತಾಯಿಸಿದರು. ಸವಿತಾ ಸಮುದಾಯದ 26 ಜಾತಿಗಳಿಗೆ ಸೇರಿದವರು, ಕರ್ನಾಟಕದಲ್ಲಿ ಸವರ್ಣೀಯರ ಹಾಗೂ ಪರಿಶಿಷ್ಟ ಜಾತಿ, ಪಂಗಡದವರ ಮಧ್ಯದ ಅಡಕತ್ತರಿಯಲ್ಲಿ ಸಿಕ್ಕಿ ನಲುಗುತ್ತಿದ್ದೇವೆ. ಮೀಸಲಾತಿಯ ಪಟ್ಟಿಯೊಳಗೆ ಪ್ರವರ್ಗ 2 ಎ ನಲ್ಲಿ 102 ಜಾತಿಗಳ ಮಧ್ಯೆ ತಮ್ಮ ಸಮುದಾಯವನ್ನು ಸೇರಿಸಲಾಗಿದೆ.

# ಯುಪಿಐ ಪಾವತಿ ಮಾಡುವವರ ಪ್ರಮಾಣ ಶೇಕಡ 52ಕ್ಕೆ ಏರಿಕೆ

• **ಉದಯವಾಹಿನಿ, ಬೆಂಗಳೂರು**

ಬಿಎಂಟಿಸಿ ಬಸ್‌ಗಳಲ್ಲಿ ಟಿಕೆಟ್ ಪಡೆಯಲು ಯುಪಿಐ ಮೂಲಕ ಪಾವತಿ ಮಾಡುವವರ ಪ್ರಮಾಣ ಶೇಕಡ 52ಕ್ಕೆ ಏರಿದೆ. ಈ ವರ್ಷ ನವೆಂಬರ್ ಅಂತ್ಯದವರೆಗೆ ರೂ.470 ಕೋಟಿ ವರಮಾನ ಯುಪಿಐ ಮೂಲಕ ಬಂದಿದೆ.

**ಡಿಜಿಟಲ್ ಪಾವತಿ ಮೂಲಕ 470 ಕೋಟಿ ಸಂಗ್ರಹ**


ಉದಯವಾಹಿನಿ ಚಿತ್ರ

ಕೋವಿಡ್ ಬಂದಾಗ ಅಂತರ ಕಾಪಾಡಿಕೊಳ್ಳಬೇಕು ಎಂಬ ಕಾರಣಕ್ಕೆ 2021ರ ಮೇ ತಿಂಗಳಲ್ಲಿ ಬಿಎಂಟಿಸಿ ಬಸ್‌ಗಳಲ್ಲಿ ಯುಪಿಐ ಆಧಾರಿತ ಪಾವತಿ ವ್ಯವಸ್ಥೆ ಪರಿಚಯಿಸಲಾಗಿತ್ತು. ಕೋವಿಡ್ ಕಡಿಮೆಯಾಗುತ್ತಿದ್ದಂತೆ, ಯುಪಿಐ ಆಧಾರಿತ ಪಾವತಿ ವ್ಯವಸ್ಥೆಯೂ ಮೂಲೆಗೆ ಸರಿದಿತ್ತು. ಜನ ಸಂಚಾರ ಹೆಚ್ಚಾಗಿ ಸಮಯದ ಕೊರತೆ, ನೆಟ್‌ವರ್ಕ್ ಸಮಸ್ಯೆ, ಕೆಲವೆಡೆ ಒಂದು ಕಿ.ಮೀ. ಒಳಗೆ ಮತ್ತೊಂದು ನಿಲುಗಡೆ ಇರುವುದರಿಂದರ ಅವರು ಇಳಿಯುವ ಮೊದಲು ಟಿಕೆಟ್ ವಿತರಿಸಬೇಕಾದ ಧಾವಂತಗಳೆಲ್ಲ ಯುಪಿಐ ಪೂರ್ಣ ಪ್ರಮಾಣದಲ್ಲಿ ಬಳಕೆಗೆ ಅಡ್ಡಿಯಾಗಿದ್ದವು.

ದೇವನಹಳ್ಳಿಯಲ್ಲಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಬನ್ನೇರುಘಟ್ಟ ಸಹಿತ ಪ್ರಮುಖ ಮತ್ತು ದೂರದ ಸ್ಥಳಗಳಿಗೆ ಸಂಚರಿಸುವ ಹವಾನಿಯಂತ್ರಿತ ಬಸ್‌ಗಳಲ್ಲಿ ಮಾತ್ರ ಯುಪಿಐ ವ್ಯವಸ್ಥೆ ಮುಂದುವರಿದಿತ್ತು.

ಚಿಲ್ಲರೆ ನೀಡುವ ವಿಚಾರದಲ್ಲಿ ನಿರ್ವಾಹಕ ಮತ್ತು ಪ್ರಯಾಣಿಕರ ನಡುವೆ ವಾಗ್ವಾದಗಳು ಹೆಚ್ಚಾಗತೊಡಗಿತ್ತು. ಇದನ್ನು ಮನಗಂಡ ಬಿಎಂಟಿಸಿ ಅಧಿಕಾರಿಗಳು ಯುಪಿಐ ಪಾವತಿ ಮತ್ತು ಟಿಕೆಟ್ ನೀಡುವ ವ್ಯವಸ್ಥೆಯನ್ನು 2025ರ ಜನವರಿಯಲ್ಲಿ ಆಧುನೀಕರಣಗೊಳಿಸಿ ಅನುಷ್ಠಾನಗೊಳಿಸಿತು. ಒಂದು ಬಸ್‌ನಲ್ಲಿ ಏಳೆಂಟು ಕಡೆಗಳಲ್ಲಿ ಕ್ಯೂಆರ್ ಕೋಡ್ ಅಂಟಿಸಲಾಯಿತು. ಪ್ರಯಾಣಿಕರು ಸ್ಕ್ಯಾನ್ ಮಾಡಿ ಪಾವತಿ ಮಾಡಿದ ಕೂಡಲೇ ನಿರ್ವಾಹಕರಲ್ಲಿರುವ ಎಲೆಕ್ಟ್ರಿಕ್ ಟಿಕೆಟ್ ಮಷಿನ್‌ನಲ್ಲಿ ಟಿಕೆಟ್ ಮುದ್ರಣವಾಗುವಂತೆ ಮಾಡಲಾಯಿತು. ಇದರಿಂದ ಬಸ್ ನಿರ್ವಾಹಕರು ಕ್ಯೂಆರ್ ಕೋಡ್ ಅನ್ನು ಕುತ್ತಿಗೆಯಲ್ಲಿ ನೇತು ಹಾಕಿಕೊಳ್ಳಬೇಕಾದ ಪ್ರಮೇಯ ತಪ್ಪಿತು.

**2021ರಲ್ಲಿ ಯುಪಿಐ ಆಧಾರಿತ ಪಾವತಿಯು ದಿನಕ್ಕೆ 15 ಸಾವಿರ ಇರುತ್ತಿತ್ತು. 2024ರಲ್ಲಿ ಅದು ದಿನಕ್ಕೆ ರೂ. 33 ಲಕ್ಷಕ್ಕೆ ತಲುಪಿತ್ತು. ಈ ವರ್ಷ ಆಧುನೀಕರಣಗೊಳಿಸಿ ಎಲ್ಲಾ ಬಸ್‌ಗಳಲ್ಲಿ ಅಳವಡಿಸಿದ ಬಳಿಕ ದಿನಕ್ಕೆ ರೂ.1.25 ಕೋಟಿಯಿಂದ 1.50 ಕೋಟಿವರೆಗೆ ಸಂಗ್ರಹವಾಗುತ್ತಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.**

# 10 ವರ್ಷ ಡೀಪ್ ಟೆಕ್ ದಶಕ

## ವಲಯದ ಉತ್ತೇಜನಕ್ಕೆ 635 ಕೋಟಿ ರೂ. ಅನುದಾನ: ಸಚಿವ ಪ್ರಿಯಾಂಕ್ ಖರ್ಗೆ



ಉದಯವಾಹಿನಿ ಚಿತ್ರ

### ಬೃಹತ್ ಡೇಟಾ ಸೆಂಟರ್ ಲೋಕಾರ್ಪಣೆ

**ಇದೇ ಸಂದರ್ಭದಲ್ಲಿ, ದೇವನಹಳ್ಳಿಯಲ್ಲಿ ಎನ್‌ಟಿಟಿ ಸಂಸ್ಥೆ ಸ್ಥಾಪಿಸಿರುವ ಬೆಂಗಳೂರಿನ ಅತಿದೊಡ್ಡ ಡೇಟಾ ಸೆಂಟರ್ ಕ್ಯಾಂಪಸ್‌ಗೆ ಸಚಿವ ಪ್ರಿಯಾಂಕ್ ಖರ್ಗೆ ಇ-ಚಾಲನೆ ನೀಡಿದರು. 8.5 ಎಕರೆ ವಿಸ್ತೀರ್ಣದಲ್ಲಿ ನಿರ್ಮಾಣಗೊಂಡಿರುವ ಈ ಕ್ಯಾಂಪಸ್, ಒಟ್ಟು 100 ಮೆಗಾವ್ಯಾಟ್ ಸಾಮರ್ಥ್ಯವನ್ನು ಹೊಂದಿದೆ. ಪ್ರಸ್ತುತ 22.4 ಮೆಗಾವ್ಯಾಟ್ ಸಾಮರ್ಥ್ಯದ ಬೆಂಗಳೂರು 4ಎ ಘಟಕವು ಕಾರ್ಯಾರಂಭಕ್ಕೆ ಸಿದ್ಧಗೊಂಡಿದೆ. ಈ ನೂತನ ಡೇಟಾ ಸೆಂಟರ್ 220 ಕೆವಿ ಸಾಮರ್ಥ್ಯದ ಪ್ರತ್ಯೇಕ ಸಬ್ ಸ್ಟೇಷನ್ ಹೊಂದಿದ್ದು, ಐಜಿಬಿಸಿ ಪ್ಲಾಟಿನಂ ರೇಟಿಂಗ್ ಪಡೆದಿದೆ. ನವೀಕರಿಸಬಹುದಾದ ಇಂಧನ ಬಳಕೆ ಮತ್ತು ಅತ್ಯಾಧುನಿಕ ಭದ್ರತಾ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಕೃತಕ ಬುದ್ಧಿಮತ್ತೆ ಹಾಗೂ ಡಿಜಿಟಲ್ ಮೂಲಸೌಕರ್ಯಗಳ ತಾಣವಾಗಿ ಕರ್ನಾಟಕದ ಸ್ಥಾನವನ್ನು ಈ ಯೋಜನೆಯು ಮತ್ತಷ್ಟು ಬಲಪಡಿಸಲಿದೆ ಎಂದು ಸಚಿವರು ಹರ್ಷ ವ್ಯಕ್ತಪಡಿಸಿದರು.**

• **ಉದಯವಾಹಿನಿ, ಬೆಂಗಳೂರು**

ವಿಶ್ವದಾದ್ಯಂತ 1,700ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳಿಗೆ ಆರ್ಥಿಕ ನೆರವು ನೀಡಿರುವ ಏಕೈಕ ಸರ್ಕಾರ ಕರ್ನಾಟಕದ್ದಾಗಿದ್ದು ಹಾಗೂ ರಾಜ್ಯದಲ್ಲಿ ಡೀಪ್ ಟೆಕ್ ವಲಯದ ಬೆಳವಣಿಗೆಗೆ ಪೂರಕವಾಗಿ ಮುಂದಿನ ಹತ್ತು ವರ್ಷಗಳನ್ನು ಡೀಪ್ ಟೆಕ್ ದಶಕ ಎಂದು ಘೋಷಿಸಲಾಗಿದೆ. ಈ ವಲಯಕ್ಕೆ ಉತ್ತೇಜನ ನೀಡಲು 635 ಕೋಟಿ ರೂಪಾಯಿಗಳ ಬೃಹತ್ ಅನುದಾನವನ್ನು ಮೀಸಲಿರಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ನಗರದಲ್ಲಿ ಬುಧವಾರ ನಡೆದ 8ನೇ ಅಸೋಚಾಂ ಸ್ಮಾರ್ಟ್ ಡೇಟಾಸೆಂಟರ್ ಮತ್ತು ಕ್ಲೌಡ್ ಇನ್‌ಫ್ರಾಸ್ಟ್ರಕ್ಚರ್ ಕಾನ್‌ಕ್ಲೇವ್ -2025ರಲ್ಲಿ ಮಾತನಾಡಿದ ಅವರು, ರಾಜ್ಯದ ತಂತ್ರಜ್ಞಾನ ವಲಯದ ಮುನ್ನೋಟ ಮತ್ತು ಸರ್ಕಾರದ ಹೊಸ ನೀತಿಗಳನ್ನು ಸವಿವರವಾಗಿ ಪ್ರಸ್ತುತಪಡಿಸಿದರು. ರಾಜ್ಯದಲ್ಲಿ ನೋಂದಾಯಿತವಾಗಿರುವ ಒಟ್ಟು ಸ್ಟಾರ್ಟ್‌ಅಪ್‌ಗಳ ಪೈಕಿ ಶೇಕಡಾ 28ಕ್ಕೂ ಹೆಚ್ಚು ಸಂಸ್ಥೆಗಳು ಡೀಪ್ ಟೆಕ್ ವಲಯಕ್ಕೆ ಸೇರಿವೆ ಎಂಬುದು ಹೆಮ್ಮೆಯ ಸಂಗತಿ. ಈ ವಲಯದ ಸಾಮರ್ಥ್ಯವನ್ನು ಮನಗಂಡು ದೀರ್ಘಕಾಲೀನ ಅಭಿವೃದ್ಧಿಗಾಗಿ ಈ ದಶಕವನ್ನು ಡೀಪ್ ಟೆಕ್‌ಗೆ ಮೀಸಲಿಡಲಾಗಿದೆ ಎಂದು ಅವರು ವಿವರಿಸಿದರು.

ಕರ್ನಾಟಕದಲ್ಲಿ ಹೂಡಿಕೆ ಮಾಡಲು ಆಸಕ್ತಿ ತೋರುವ ಜಾಗತಿಕ ಸಾಮರ್ಥ್ಯ ಕೇಂದ್ರಗಳಿಗಾಗಿ (GCC) ಸರ್ಕಾರವು ಕ್ಯಾಟಲಿಸ್ಟ್ ಎಂಬ ವಿಶೇಷ ಕಾರ್ಯಕ್ರಮವನ್ನು ರೂಪಿಸಿದೆ. ಇದಕ್ಕಾಗಿ ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಮುಂದಿನ ದಿನಗಳಲ್ಲಿ ಈ ಸೌಲಭ್ಯವನ್ನು ಡೇಟಾ ಸೆಂಟರ್‌ಗಳಿಗೂ ವಿಸ್ತರಿಸುವ ಆಲೋಚನೆ ಇದೆ ಎಂದು ಸಚಿವರು ತಿಳಿಸಿದರು. ರಾಜಧಾನಿ ಬೆಂಗಳೂರಿನ ಆಚೆಗೂ ಹೂಡಿಕೆಯನ್ನು ವಿಸ್ತರಿಸುವ ಮತ್ತು ಎರಡನೇ ಹಂತದ ನಗರಗಳಲ್ಲಿ ಆರ್ಥಿಕ ಚಟುವಟಿಕೆಗಳನ್ನು ಹೆಚ್ಚಿಸುವ ಉದ್ದೇಶದಿಂದ ಲೀಪ್ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಪ್ರತಿಭೆಗಳು ಹೂಡಿಕೆಗಳನ್ನು ಹುಡುಕಿಕೊಂಡು ಬರುವ ಹಳೆಯ ಪದ್ಧತಿಯ ಬದಲಿಗೆ, ಹೂಡಿಕೆಗಳೇ ಪ್ರತಿಭೆಗಳು ಇರುವಲ್ಲಿಗೆ ಹೋಗಬೇಕು ಎಂಬುದು ನಮ್ಮ ಸರ್ಕಾರದ ಆಶಯವಾಗಿದೆ. ಈ ನಿಟ್ಟಿನಲ್ಲಿ ಲೀಪ್ ಕಾರ್ಯಕ್ರಮವು ಮಹತ್ವದ ಪಾತ್ರ ವಹಿಸಲಿದೆ ಎಂದು ಖರ್ಗೆ ಪ್ರತಿಪಾದಿಸಿದರು. ಜಾಗತಿಕ ಮಟ್ಟದಲ್ಲಿ ಅತ್ಯುತ್ತಮ ಮಾನವ ಸಂಪನ್ಮೂಲವನ್ನು ಒದಗಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದೆ. ಇದಕ್ಕಾಗಿ 300 ಕೋಟಿ ರೂಪಾಯಿಗೂ ಹೆಚ್ಚು ವೆಚ್ಚದಲ್ಲಿ ಭಾರತದ ಅತಿದೊಡ್ಡ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ತಂತ್ರಜ್ಞಾನ ವಲಯದ ಸುಸ್ಥಿರತೆಗೆ ಅಗತ್ಯವಿರುವ ಇಂಧನ ಮತ್ತು ನೀರಿನ ಭದ್ರತೆಯನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ. ಇದು ಕೇವಲ ಐಟಿ ಅಥವಾ ತಂತ್ರಜ್ಞಾನದ ಅಜೆಂಡಾ ಆಗಿರದೆ, ಆರ್ಥಿಕ ಭದ್ರತೆ, ಉದ್ಯೋಗ ಸೃಷ್ಟಿ ಹಾಗೂ ರಾಷ್ಟ್ರೀಯ ಅಭಿವೃದ್ಧಿಯ ಕಾರ್ಯತಂತ್ರವಾಗಿದೆ ಎಂದು ಸಚಿವರು ಅಭಿಪ್ರಾಯಪಟ್ಟರು.


# ಅನ್ಯ ಭಾಷೆಗಳ ಮೇಲಿನ ವ್ಯಾಮೋಹ ಬಿಟ್ಟು ಕನ್ನಡದ ಬಗ್ಗೆ ಕಾಳಜಿ ಇರಲಿ

• **ಉದಯವಾಹಿನಿ, ಕೆ.ಆರ್.ಪುರ**

ಅನ್ಯ ಭಾಷೆಗಳ ಮೇಲಿನ ವ್ಯಾಮೋಹ ಬಿಟ್ಟು ಕನ್ನಡದ ಬಗ್ಗೆ ಕಾಳಜಿ ಇರಲಿ ಎಂದು ವೈಟ್ ಫೀಲ್ಡ್ ಪ್ರಾಂತಿಯ ಸಂಯುಕ್ತ ಕನ್ನಡ ಸಮಿತಿ ಮುಖ್ಯಸ್ಥ ಎಂ.ವೇಣುಗೋಪಾಲ್ ಅವರು ತಿಳಿಸಿದರು.

ಮಹದೇವಪುರ ಕ್ಷೇತ್ರದ ವೈಟ್ ಫೀಲ್ಡ್ ಆಟೋ ನಿಲ್ದಾಣದಲ್ಲಿ ಪ್ರಾಂತಿಯ ಸಂಯುಕ್ತ ಕನ್ನಡ ಸಮಿತಿ ಆಯೋಜಿಸಿದ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮತಾನಾಡಿದ ಅವರು. ಆಂಗ್ಲ ಭಾಷೆಯ ಪ್ರಭಾವ ಕನ್ನಡಿಗರಿಗೆ ಕರ್ನಾಟಕದಲ್ಲಿ ಉದ್ಯೋಗವಿಲ್ಲದಂತೆ ಮಾಡಿದೆ, ಇಲ್ಲಿ ವಾಸಿಸುವ ಪರಭಾಷಿಕರು ಕನ್ನಡದ ಬಗ್ಗೆ ಕಾಳಜಿ ಇಲ್ಲದೆ ಮನಬಂದಂತೆ ಕನ್ನಡ ಭಾಷೆಯ ಮೇಲೆ ದಬ್ಬಾಳಿಕೆ ಮಾಡುತ್ತಿರುವುದು ನಾವು ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಡಿಪಿಐ ಸಂಘಟನೆಯ ನಲ್ಲೂರಹಳ್ಳಿ ರಾಜಣ್ಣ ಮಾತನಾಡಿ, ಕನ್ನಡ ಮತನಾಡಲು ಅವಮಾನಕರ ಎಂದು ಭಾವಿಸುವ ಇಂದಿನ ಯುವಪೀಳಿಗೆಗೆ ನಾಚಿಗೆಯಾಗಬೇಕು.


ಉದಯವಾಹಿನಿ ಚಿತ್ರ

ಕನ್ನಡ ನಾಡಿನಲ್ಲಿ ಕನ್ನಡ ಬಳಸದ ಕನ್ನಡಿಗರು ಇದ್ದು ಸತ್ತಂತೆ ಎಂದು ಬೇಸರ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಮುನಿಸ್ವಾಮಿ, ಗುಟ್ಟ ಮಾರಪ್ಪ, ತೇಜಸ್ ವೇಣುಗೋಪಾಲ ಮತ್ತು ಮುನಿರಾಜ್, ಡಿಪಿಐ ಚಂದ್ರಶೇಖರ್ ಮತ್ತಿತರರು ಈ ಉಪಸ್ಥಿತರಿದ್ದರು.

# ಜೀವನದಲ್ಲಿ ನೀವು ಏನನ್ನೋ ಮಿಸ್ ಮಾಡ್ಕೊತಾ ಇದ್ದೀರಿ

## ಡಿಕೆ ಶಿವಕುಮಾರ್ ನಿವಾಸದಲ್ಲಿ ಬ್ರೇಕ್ ಫಾಸ್ಟ್ ಮೀಟಿಂಗ್ ನಂತರ ತಮಾಷೆ ಮಾಡಿದ ಸಿದ್ದರಾಮಯ್ಯ

• **ಉದಯವಾಹಿನಿ, ಬೆಂಗಳೂರು**

ಸಿದ್ದರಾಮಯ್ಯ ಅವರು ಮಹಿಳಾ ಪತ್ರಕರ್ತರೊಬ್ಬರಿಗೆ ನೀವು ಜೀವನದಲ್ಲಿ ಏನೋ ಮಿಸ್ ಮಾಡಿಕೊಳ್ತಾ ಇದ್ದೀರೆಂದು ಅರ್ಥ ಎಂದು ಹೇಳುವ ಮೂಲಕ ಪ್ರೆಸ್ ಮೀಟ್‌ನಲ್ಲಿ ದೊಡ್ಡ ನಗುವಿನ ಅಲೆ ಎಬ್ಬಿಸಿದ ಘಟನೆ ನಡೆದಿದೆ. ಇದು ನಡೆದದ್ದು ಡಿ. 2ರಂದು. ಅಂದು, ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ನಿವಾಸದಲ್ಲಿ ಬೆಳಗಿನ ಉಪಾಹಾರಕ್ಕೆ ಹೋಗಿದ್ದರು.

ಅವರಿಗಾಗಿ, ಡಿಕೆಶಿಯವರು ಮನೆಯಲ್ಲಿ ನಾಟಿಕೋಳಿ ಸಾರು, ಇಡ್ಲಿ ತಯಾರಿಸಿದ್ದರು. ಅವರು ಸಿದ್ದರಾಮಯ್ಯನವರ ಆಲ್ ಟೈಮ್ ಫೇವರಿಟ್ ಉಪಾಹಾರ. ಇದೇ ವಿಚಾರವಾಗಿ, ಮಹಿಳಾ ಪತ್ರಕರ್ತರೊಬ್ಬರಿಗೆ ಸಿದ್ದರಾಮಯ್ಯ ತಮಾಷೆ ಮಾಡಿದ ಘಟನೆಯೂ ನಡೆಯಿತು.

**ಪತ್ರಕರ್ತೆಗೆ ಸಿಎಂ ಹೀಗೆ ಹೇಳಿದ್ಯಾಕೆ-**

ಅತ್ತ, ಸಿಎಂ ಅವರು ಉಪಾಹಾರ ಸೇವಿಸುತ್ತಾ, ಡೈನಿಂಗ್ ಟೇಬಲ್‌ನಲ್ಲಿ ತಮ್ಮೊಂದಿಗೆ ತಿಂಡಿ ತಿನ್ನಲು ಕುಳಿತಿದ್ದ ಡಿಕೆ ಶಿವಕುಮಾರ್, ಅವರ ಸಹೋದರ ಹಾಗೂ ಮಾಜಿ ಸಂಸದ ಡಿಕೆ ಸುರೇಶ್ ಅವರೊಂದಿಗೆ ಲೋಕಾಭಿರಾಮವಾಗಿ ಮಾತನಾಡುತ್ತಾ ಬೆಳಗಿನ ಉಪಾಹಾರ ಸೇವಿಸಿದರು ಸಿದ್ದರಾಮಯ್ಯ. ಉಪಾಹಾರ ಸವಿದಾದ ಮೇಲೆ ಡಿಕೆಶಿ ನಿವಾಸದ ಆವರಣದಲ್ಲಿ



ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಅವರು ಮಾಧ್ಯಮಗಳೊಂದಿಗೆ ಮುಖಾಮುಖಿಯಾದರು. ಆ ಸಂದರ್ಭದಲ್ಲಿ ಮಹಿಳಾ ಪತ್ರಕರ್ತರೊಬ್ಬರು ಕೇಳುತ್ತಿದ್ದ ಪ್ರಶ್ನೆಗೆ ಉತ್ತರಿಸಿದ ಸಿದ್ದರಾಮಯ್ಯ ಆ ಪತ್ರಕರ್ತೆಗೆ ನೀವು ಚಿಕನ್ ತಿಂತೀರಾ ಎಂದು ಕೇಳಿದರು. ಅದಕ್ಕೆ ಅವರು, ಇಲ್ಲ ಸರ್, ನಾನು ಪ್ಯೂರ್ ವೆಜಿಟೇರಿಯನ್ ಎಂದರು. ಅದಕ್ಕೆ ಪ್ಯೂರ್ ಎಂದರೇನು ನೀವು ಮೊಟ್ಟೆ ಕೂಡ ತಿನ್ನಲ್ವಾ ಎಂದು ಕೇಳಿದರು. ಅದಕ್ಕೆ ಆ ಮಹಿಳೆ, ಇಲ್ಲ ಸರ್ ಎಂದು ಹೇಳಿದರು.

ಅದಕ್ಕೆ ಉತ್ತರಿಸಿದ ಸಿಎಂ, ಹಾಗಿದ್ರೆ



**ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಬೆಂಗಳೂರಿನಲ್ಲಿ ಮಾತನಾಡಿ, ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಉಪಹಾರ ಸಭೆಯ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ. ಸದ್ಯ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಇಬ್ಬರೇ ತಿಂಡಿ ತಿನ್ನುತ್ತಿದ್ದಾರೆ. ಅವರು ನನ್ನನ್ನು ಕರೆದರೆ, ಖಂಡಿತಾ ಹೋಗುತ್ತೇನೆ ಎಂದು ಅವರು ತಿರುಗೇಟು ನೀಡಿದರು.**

**-ಗೃಹ ಸಚಿವ ಡಾ. ಜಿ. ಪರಮೇಶ್ವರ್**

ನೀವು ಜೀವನದಲ್ಲಿ ಏನನ್ನೋ ಕಳೆದುಕೊಳ್ಳುತ್ತೀರಿ ಎಂದರ್ಥ ಎಂದರು. ಕೂಡಲೇ ಅಲ್ಲಿದ್ದ ಇತರ ಪತ್ರಕರ್ತರೂ ನಕ್ಕು ಸುಮ್ಮನಾದರು. ರಾಜಕೀಯ ಶಾಶ್ವತವಲ್ಲ, ಅಧಿಕಾರ ನಮ್ಮಪ್ಪನ ಆಸ್ತಿಯಲ್ಲ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರಾಜಕೀಯ ಶಾಶ್ವತವಲ್ಲ, ಏನಾಗುತ್ತದೋ ಆಗಲಿ ಎಂದು ಹೇಳಿದ ವಿಡಿಯೋ ವೈರಲ್ ಆಗಿದೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜೊತೆಗಿನ ಉಪಹಾರ ಸಭೆಯ ನಂತರ, ಅಧಿಕಾರ ಹಂಚಿಕೆ ಬಗ್ಗೆ ಕೇಳಿದಾಗ, ಹೈಕಮಾಂಡ್ ನಿರ್ಧರಿಸಿದರೆ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆ ಎಂದು ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ.

### ಪತ್ರಕರ್ತರ ಪ್ರಶ್ನೆಗೆ ಸಿಎಂ ಸಿಂಪಲ್ ಉತ್ತರ

**ಕಳೆದ ಒಂದು ವಾರದಿಂದ ನಾಯಕತ್ವ ಬದಲಾವಣೆ ಕುರಿತ ಎಲ್ಲಾ ಪ್ರಶ್ನೆಗಳಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೈಕಮಾಂಡ್ ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೆ ಬದ್ಧ ಎಂದು ಒಂದೇ ಉತ್ತರ ನೀಡುತ್ತಿದ್ದಾರೆ. ಡಿ.ಕೆ. ಶಿವಕುಮಾರ್ ಅವರ ನಿವಾಸದಲ್ಲಿ ನಡೆದ ಉಪಾಹಾರ ಸಭೆಯ ಬಳಿಕ, ಡಿ.ಕೆ. ಶಿವಕುಮಾರ್ ಅವರು ಯಾವಾಗ ಸಿಎಂ ಆಗುತ್ತಾರೆ ಎಂಬ ಪ್ರಶ್ನೆಗೂ ಸಿದ್ದರಾಮಯ್ಯ ಅವರು ಹೈಕಮಾಂಡ್ ಬಯಸಿದಾಗ ಎಂದು ನೇರವಾಗಿ ಪ್ರತಿಕ್ರಿಯಿಸಿದ್ದಾರೆ.**

## ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಲು ಸಲಹೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಮನಗರ

ಮಕ್ಕಳಿಗೆ ಉತ್ತಮ ಶಿಕ್ಷಣ, ಆಹಾರ, ಆರೋಗ್ಯ, ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರವು ಹಲವಾರು ಸೌಲಭ್ಯಗಳನ್ನು ಕಲ್ಪಿಸಿದೆ. ಜಿಲ್ಲೆಯ ಸರ್ಕಾರಿ ಶಾಲೆಗಳು, ವಸತಿ ನಿಲಯಗಳಲ್ಲಿ ಮಕ್ಕಳ ಸಂಪೂರ್ಣ ಸುರಕ್ಷತೆಗೆ ಆದ್ಯತೆ ನೀಡಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ ಸೂಚನೆ ನೀಡಿದರು. ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಡಾ. ತಿಪ್ಪೇಸ್ವಾಮಿ ಅವರೊಂದಿಗೆ ಬೆಂಗಳೂರು ದಕ್ಷಿಣ ಜಿಲ್ಲಾ ಪ್ರವಾಸ ಕೈಗೊಳ್ಳಲಾಗಿತ್ತು. ರಾಮನಗರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಗೆ ಭೇಟಿ ನೀಡಿ ವಸತಿ ನಿಲಯಕ್ಕೆ ಭೇಟಿ ನೀಡಿ ಮಕ್ಕಳ ಸುರಕ್ಷತಾ ಕ್ರಮಗಳನ್ನು ಪರಿಶೀಲಿಸಲಾಯಿತು ಎಂದು ಹೇಳಿದರು.

ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಬೇಡ್ಕರ್ ವಸತಿ ಶಾಲೆಯಲ್ಲಿ 197 ಮಕ್ಕಳಿದ್ದು, ಒಂದು ಕೊಠಡಿಯಲ್ಲಿ 50 ಮಕ್ಕಳಿದ್ದಾರೆ. ಇದರಿಂದಾಗಿ ಅವರು ಇಕ್ಕಟ್ಟಿನ ಸ್ಥಳದಲ್ಲಿ ಮಲಗುತ್ತಿದ್ದಾರೆ. ಈ ಮಕ್ಕಳಿಗೆ ಆಟದ ಮೈದಾನವೂ ಇಲ್ಲ. ಒಟ್ಟಾರೆ ಮಕ್ಕಳು ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಮಕ್ಕಳ ಸುರಕ್ಷತೆಗಾಗಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು. ವಸತಿ ನಿಲಯದ ಸ್ವಂತ ಕಟ್ಟಡದ ಕಾಮಗಾರಿ ಶೀಘ್ರವೇ ಪ್ರಾರಂಭಿಸಲು ಕ್ರಮ ವಹಿಸುವಂತೆ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರಿಗೆ ಸೂಚಿಸಿದರು. ಅಲ್ಲದೆ, ಈ ಸಂಬಂಧ ಮೂರು ದಿನಗಳಲ್ಲಿ ವಿಸ್ತ್ರತ ವರದಿ ನೀಡಬೇಕು ಎಂದು ಹೇಳಿದರು. ಅಧಿಕಾರಿಗಳು ನಿಯಮಿತವಾಗಿ ವಸತಿ ನಿಲಯಗಳಿಗೆ ಭೇಟಿ ನೀಡಿ ಮಕ್ಕಳಿಗೆ ನೀಡಲಾಗುತ್ತಿರುವ ಆಹಾರ, ವಸತಿ ಸೌಲಭ್ಯಗಳನ್ನು ಪರಿಶೀಲಿಸಬೇಕು ಎಂದು ಸೂಚಿಸಿದರು. ಚನ್ನಪಟ್ಟಣದ ಪುರ ಪೊಲೀಸ್ ಠಾಣೆಗೆ ಭೇಟಿ ನೀಡಿದ ಅವರು, ಜಿಲ್ಲೆಯ ಪ್ರತಿಯೊಂದು ಪೊಲೀಸ್ ಠಾಣೆಗಳಲ್ಲಿ ಮಕ್ಕಳ ವಿಶೇಷ ಮಕ್ಕಳ ರಕ್ಷಣಾ ಘಟಕವಿರಬೇಕು ಎಂದು ಸೂಚಿಸಿದರು.

# ಶ್ರೀರಂಗಪಟ್ಟಣದ ಜಾಮಿಯಾ ಮಸೀದಿ ಹಿಂದೂಗಳದ್ದು

## ಹನುಮ ಮಾಲಾಧಾರಿಗಳ ಬಿಗಿಪಟ್ಟು ; ಶಾಂತಿ ಕಾಪಾಡಲು ಪೊಲೀಸರ ಹರಸಾಹಸ

• ಉದಯವಾಹಿನಿ, ಮಂಡ್ಯ

ಶ್ರೀರಂಗಪಟ್ಟಣದಲ್ಲಿರುವ ಜಾಮೀಯಾ ಮಸೀದಿ ಮುಂದೆ ಡಿ. 3ರ ಮಧ್ಯಾಹ್ನ ಹೈಡ್ರಾಮಾ ನಡೆದಿದೆ. ಪಟ್ಟಣದಲ್ಲಿ ಆಯೋಜಿಸಲಾಗಿದ್ದ ಬೃಹತ್ ಸಂಕೀರ್ತನಾ ಯಾತ್ರೆಯ ವೇಳೆ, ಹನುಮ ಮಾಲಾಧಾರಿಗಳು ಜಾಮೀಯಾ ಮಸೀದಿಯ ಮುಂದುಗಡೆಯಿಂದ ಸಾಗಿಹೋಗುವಾಗ ಇದ್ದಕ್ಕಿದ್ದ ಹಾಗೆ ಜಾಮಿಯಾ ಮಸೀದಿಯೊಳಗೆ ನುಗ್ಗಿದ್ದಾರೆ. ಅದರಿಂದಾಗಿ, ಜಾಮಿಯಾ ಮಸೀದಿ ಬಳಿ ಉದ್ವಿಗ್ನ ವಾತಾವರಣ ಉಂಟಾಗಿತ್ತು.

**ಏನಿದು ಯಾತ್ರೆ:** ಮೂಡಲಬಾಗಿಲು ಶ್ರೀ ಆಂಜನೇಯ ಸ್ವಾಮಿಯ ದೇಗುಲ ಮರುಸ್ಥಾಪನೆ ಸಂಕಲ್ಪದ ಈ ಬೃಹತ್ ಸಂಕೀರ್ತನಾ ಯಾತ್ರೆಯನ್ನು ಆಯೋಜಿಸಲಾಗಿದೆ. ಇದರಲ್ಲಿ ಭಾಗವಹಿಸಲು ಮಂಡ್ಯ ಜಿಲ್ಲೆ ಮಾತ್ರವಲ್ಲದೆ, ಮೈಸೂರು, ಕೊಡಗು, ಹಾಸನ, ರಾಮನಗರ ಜಿಲ್ಲೆಗಳಿಂದ ಹನುಮ ಮಾಲಾಧಾರಿಗಳು ಆಗಮಿಸಿದ್ದಾರೆ. ಅವರ ಜೊತೆಗೆ, ಸ್ಥಳೀಯ ಬಿಜೆಪಿ-ಜೆಡಿಎಸ್ ನಾಯಕರೂ ಭಾಗವಹಿಸಿದ್ದರು.

ಇದರಿಂದಾಗಿ, ಈ ಬಾರಿಯ ಸಂಕೀರ್ತನಾ ಯಾತ್ರೆಗೆ ಹೆಚ್ಚಿನ ಮಹತ್ವದ ಬಂದಿತ್ತು. ಮುನ್ನೆಚ್ಚರಿಕೆ ಕ್ರಮವಾಗಿ, ಮೆರವಣಿಗೆ ಸಾಗುವಪಥದಲ್ಲಿ ಸಾವಿರಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿತ್ತು.

ಯಾತ್ರೆಯು ಸಾಗುವ ಹಾದಿಯಲ್ಲಿ ಯಾತ್ರೆಯ ಮುನ್ನಾ ದಿನ, ಅಂದರೆ, ಡಿ. 2ರಂದು ಪಥಸಂಚಲನ ನಡೆಸಲಾಗಿತ್ತು. ಅಲ್ಲದೆ, ಯಾತ್ರೆ ಸಾಗುವ ದಾರಿಯುದ್ದಕ್ಕೂ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು.ಡಿ. 3ರಂದು ಯಾತ್ರೆ ಆರಂಭವಾಗಿ ಜಾಮೀಯಾ ಮಸೀದಿ ಕಡೆಗೆ ಬರುತ್ತಲೇ ಮಾಲಾಧಾರಿಗಳು ಏಕಾಏಕಿ ಮಸೀದಿಗೆ ನುಗ್ಗಿದ್ದಾರೆ. ಇದು ನಮ್ಮ ಹಿಂದೂಗಳ ಜಾಗ. ಅಲ್ಲಿ ದೇವಸ್ಥಾನವಿತ್ತು. ಅದನ್ನು ಕೆಡವಿ ಮಸೀದಿ ಕಟ್ಟಿಕೊಂಡಿದ್ದೀರಿ. ಮಸೀದಿಯ ಒಳಗಿರುವ ದೇವರು ನಮ್ಮ ಹನುಮ ಎಂದೆಲ್ಲಾ ಕೂಗಾಡಿದರು. ಅಲ್ಲದೆ, ಕುಂಬಳಕಾಯಿ ಈಡನ್ನು ತಗೆದುಕೊಂಡು ಬಂದು ಮಸೀದಿಯ ಮುಂದೆ ಒಡೆದು ನಾವು ಇಲ್ಲಿ ಹನುಮ ಮಂದಿರವನ್ನು ಕಟ್ಟಿಯೇ ತೀರುತ್ತೇವೆ ಎಂದು ಪ್ರತಿಜ್ಞೆ ಮಾಡಿದರು.

ಇದು ಕೆಲಕಾಲ ಅಲ್ಲಿ ಉದ್ವಿಗ್ನ ವಾತಾರವರಣವನ್ನು ಉಂಟು ಮಾಡಿತ್ತು. ಕೂಡಲೇ ಸ್ಥಳದಲ್ಲಿದ್ದ ಪೊಲೀಸರು ಮಾಲಾಧಾರಿಗಳ ಮನವೊಲಿಸಲು ಮಂದಾದಾಗ ಪೊಲೀಸರು ಹಾಗೂ ಮಾಲಾಧಾರಿಗಳ ನಡುವೆ ವಾಗ್ವಾದ ಏರ್ಪಟ್ಟಿತು. ಆದರೂ, ಪೊಲೀಸರು ತಮ್ಮ ತೀವ್ರ ಪ್ರಯತ್ನದಿಂದ ಮಾಲಾ ಧಾರಿಗಳ ಮನವೊಲಿಸಿ ಅಲ್ಲಿಂದ ಕಳಿಸಿಕೊಟ್ಟರು.


ಉದಯವಾಹಿನಿ ಚಿತ್ರ

**ಮಸೀದಿ ಮುಂದೆ ಹೈಡ್ರಾಮಾ**

**ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣ**

ಶ್ರೀರಂಗಪಟ್ಟಣದಲ್ಲಿ ಸಂಕೀರ್ತನಾ ಯಾತ್ರೆ ವೇಳೆ, ಹನುಮ ಮಾಲಾಧಾರಿಗಳು ಜಾಮೀಯಾ ಮಸೀದಿಯೊಳಗೆ ನುಗ್ಗಿದರು. ಅಲ್ಲಿ ಹಿಂದೂಗಳ ಜಾಗ, ದೇವಸ್ಥಾನವಿತ್ತು ಎಂದು ಘೋಷಿಸಿದರು. ಮಸೀದಿ ಮುಂದೆ ಕುಂಬಳಕಾಯಿ ಒಡೆದು ಹನುಮ ಮಂದಿರ ಕಟ್ಟುವ ಪ್ರತಿಜ್ಞೆ ಮಾಡಿದರು. ಪೊಲೀಸರು ಮಾಲಾಧಾರಿಗಳನ್ನು ಮನವೊಲಿಸಿ ಕಳುಹಿಸಿದರು. ಇದರಿಂದಾಗಿ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಯಿತು.

**ಏನಿದು ಜಾಮಿಯಾ ಮಸೀದಿ ಬಗ್ಗೆ ವಿವಾದ?**

ಶ್ರೀರಂಗಪಟ್ಟಣದಲ್ಲಿರುವ ಜಾಮಿಯಾ ಮಸೀದಿಯ ಜಾಗದಲ್ಲಿ ಈ ಹಿಂದೆ ಮೂಡಲ ಬಾಗಿಲು ಆಂಜನೇಯಸ್ವಾಮಿ ದೇವಸ್ಥಾನವಿತ್ತು ಎಂದು ಹೇಳಲಾಗಿದೆ. ಆ ದೇವಸ್ಥಾನವನ್ನು ಕೆಡವಿ ಟಿಪ್ಪು ಸುಲ್ತಾನ್ ಮಸೀದಿ ನಿರ್ಮಿಸಿದ್ದು, ಇಲ್ಲಿರುವ ಕಲ್ಯಾಣಿ, ನಾಗರ ಕಲ್ಲುಗಳಂತಹ ಕುರುಹುಗಳೇ ಇದಕ್ಕೆ ಸಾಕ್ಷಿ ಎನ್ನಲಾಗಿದೆ. ಹೀಗಾಗಿ, ಮಸೀದಿ ಕೆಡವಿ ದೇವಸ್ಥಾನವನ್ನು ಮರುಸ್ಥಾಪನೆ ಮಾಡುವ ಸಂಕಲ್ಪದೊಂದಿಗೆ ಹಿಂದೂ ಜಾಗರಣ ವೇದಿಕೆ ಮತ್ತು ಹಿಂದೂಪರ ಸಂಘಟನೆಗಳು ಹಲವು ವರ್ಷಗಳಿಂದ ಹನುಮ ಮಾಲಾಧಾರಿಗಳ ಬೃಹತ್ ಸಂಕೀರ್ತನಾ ಯಾತ್ರೆಯನ್ನು ಮಾಡುತ್ತಿವೆ. ಅದೇ ರೀತಿ ಇಂದೂ ಸಹ ಶ್ರೀರಂಗಪಟ್ಟಣದಲ್ಲಿ ಬೃಹತ್ ಸಂಕೀರ್ತನಾ ಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ.

## ಮಿನಿ ನ್ಯೂಸ್

### ಕಾಳಸಂತೆಯಲ್ಲಿ ಪಡಿತರ ಮಾರಿದ ಶಿಕ್ಷಕರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಪ್ರತಿಭಟನೆ

• ಉದಯವಾಹಿನಿ, ಬಾಗೇಪಲ್ಲಿ

ಪಟ್ಟಣದ ಬಾಲಕರ ಸರ್ಕಾರಿ ಶಾಲೆಯಲ್ಲಿ ಪಡಿತರವನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿದ ಪ್ರಭಾರಿ ಮುಖ್ಯಶಿಕ್ಷಕರನ್ನು ವರ್ಗಾವಣೆ ಮಾಡಬೇಕು. ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ನೆರೆಯ ಶಾಲೆಗಳ ವಿಲೀನ ಕ್ರಮ ಬೇಡ. ಸರ್ಕಾರಿ ಹಿರಿಯ ಹಾಗೂ ಪ್ರೌಢಶಾಲೆಗಳ ಬಾಲಕರ ಶಾಲೆಗಳಿಗೆ ಖಾಯಂ ಮುಖ್ಯಶಿಕ್ಷಕರನ್ನು ನೇಮಕ ಮಾಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಒತ್ತಾಯಿಸಿ, ಕರ್ನಾಟಕ ರಕ್ಷಣಾ ವೇದಿಕೆ (ಸಂಘಟನೆಗಳ ಒಕ್ಕೂಟದ ಕನ್ನಡಿಗರ ಸಾರಥ್ಯದ) ಮುಖಂಡರು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ಮಾಡಿದರು. ಸಂಘಟನೆಯ ತಾಲ್ಲೂಕು ಅಧ್ಯಕ್ಷ ಬಿ.ಎ.ಬಾಬಾಜಾನ್ ಮಾತನಾಡಿ, ಬಾಗೇಪಲ್ಲಿ ಚೇಳೂರು ತಾಲ್ಲೂಕು ಗಡಿ ಹಾಗೂ ಹಿಂದುಳಿದ ತಾಲ್ಲೂಕು ಆಗಿವೆ. ಗಡಿಯಲ್ಲಿ 60ಕ್ಕೂ ಹೆಚ್ಚು ಕನ್ನಡ ಶಾಲೆಗಳನ್ನು ಮುಚ್ಚಲಾಗಿದೆ. ಸರ್ಕಾರಿ ಶಾಲೆಗಳನ್ನು ಉಳಿಸಿ, ಬೆಳೆಸಬೇಕು. ಶಾಲೆಗಳು ಸುಧಾರಣೆ ಹಾಗೂ ಅಭಿವೃದ್ಧಿ ಆಗಬೇಕು ಎಂದರು.

### ಪರಮೇಶ್ವರ ಸಿಎಂ ಆಗಲಿ: ತುಮಕೂರಿನಲ್ಲಿ ವಿಶೇಷ ಪೂಜೆ

• ಉದಯವಾಹಿನಿ, ತುಮಕೂರು

ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಅವರಿಗೆ ಮುಖ್ಯಮಂತ್ರಿ ಸ್ಥಾನಸಿಗಲಿ ಎಂದು ಪ್ರಾರ್ಥಿಸಿ ಪರಮೇಶ್ವರ ಬೆಂಬಲಿಗರು, ಕಾಂಗ್ರೆಸ್ ಮುಖಂಡರು ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.ದೇಗುಲದ ಮುಂಭಾಗ 101 ಈಡುಗಾಯಿ ಹೊಡೆದರು. ಪರಮೇಶ್ವರ ಭಾವಚಿತ್ರ ಪ್ರದರ್ಶಿಸಿದರು.

ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಘೋಷಣೆ ಕೂಗಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತಮ ಆಡಳಿತ ನೀಡುತ್ತಿದ್ದಾರೆ. ಮುಖ್ಯಮಂತ್ರಿ ಬದಲಾದರೆ ಆ ಸ್ಥಾನವನ್ನು ಪರಮೇಶ್ವರ ಅವರಿಗೆ ನೀಡಬೇಕು. ಈ ಹಿಂದೆ ಕೆಪಿಸಿಸಿ ಅಧ್ಯಕ್ಷರಾಗಿ ಸಮರ್ಥವಾಗಿ ಪಕ್ಷ ಮುನ್ನಡೆಸಿದ್ದಾರೆ. ಉಪ ಮುಖ್ಯಮಂತ್ರಿಯಾಗಿಯೂ ಕೆಲಸ ಮಾಡಿದ್ದಾರೆ. ಸಿಎಂ ಸ್ಥಾನಕ್ಕೆ ಅರ್ಹ ವ್ಯಕ್ತಿ' ಎಂದು ಮುಖಂಡ ಮಾಗಡಿ ಜಯರಾಮ್ ಹೇಳಿದರು. ರಾಜ್ಯದಲ್ಲಿ ಇದುವರೆಗೆ ಪರಿಶಿಷ್ಟ ಸಮುದಾಯದ ನಾಯಕರು ರಾಜ್ಯದ ಚುಕ್ಕಾಣಿ ಹಿಡಿದಿಲ್ಲ. ಈಗ ಅಂತಹ ಸಮಯ ಬಂದಿದ್ದು, ದಲಿತ ಮುಖ್ಯಮಂತ್ರಿ ಮಾಡಬೇಕು ಎಂಬ ಒತ್ತಾಯ ಕೇಳಿ ಬರುತ್ತಿದೆ. ಪರಮೇಶ್ವರ ಅವರನ್ನು ಸಿಎಂ ಮಾಡಿದರೆ ಸರ್ವರೂ ಸಹಮತ ವ್ಯಕ್ತಪಡಿಸಲಿದ್ದಾರೆ ಎಂದರು.

### ರೈತರು ಚಿಟ್ನಹಳ್ಳಿ ಗೇಟ್ ಬಳಿ ಹೆದ್ದಾರಿ ಬಂದ್ ಮಾಡಿ ಪ್ರತಿಭಟನೆ

• ಉದಯವಾಹಿನಿ, ಕೋಲಾರ

ತಾಲ್ಲೂಕಿನ ಸುಗಟೂರು ಹೋಬಳಿಯ ಎಸ್.ಅಗ್ರಹಾರ ಸರ್ವೆ ಸಂಖ್ಯೆ 60 ಹಾಗೂ ಇರಗಸಂದ್ರ ಸರ್ವೆ ಸಂಖ್ಯೆ 52 ರಲ್ಲಿ ಗಣಿಗಾರಿಕೆಗೆ ಅನುಮತಿ ನೀಡಬಾರದೆಂದು ಒತ್ತಾಯಿಸಿ ಸುತ್ತಲಿನ ಗ್ರಾಮಸ್ಥರು ಮತ್ತು ರೈತರು ಚಿಟ್ನಹಳ್ಳಿ ಗೇಟ್ ಬಳಿ ಹೆದ್ದಾರಿ ಬಂದ್ ಮಾಡಿ ಪ್ರತಿಭಟನೆ ನಡೆಸಿದರು. ಹತ್ತಾರು ಹಳ್ಳಿಗಳ ಜೀವನಾಡಿಯಾಗಿರುವ ಕೆರೆ, ದೇವಸ್ಥಾನ, ಪರಿಸರ, ಜಾನುವಾರು ಮತ್ತು ಕಾಡು ಪ್ರಾಣಿಗಳ ಹಿತದೃಷ್ಟಿಯಿಂದ ಈ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಪರಿಸರ, ಗಣಿ, ಕಂದಾಯ ಅಧಿಕಾರಿಗಳಿಗೆ ಮನವಿ ನೀಡಿದರು. ಗಣಿಗಾರಿಕೆಗೆ ಅನುಮತಿ ನೀಡಲು ಮುಂದಾಗಿರುವ ಜಮೀನಿನ ಪಕ್ಕದಲ್ಲಿಯೇ ಹತ್ತಾರು ಹಳ್ಳಿಗಳಿಗೆ ನೀರು ಪೂರೈಸುವ ಕೆರೆ ಇದೆ. ಪಕ್ಕದಲ್ಲಿಯೇ ಚೌಡೇಶ್ವರಿ ದೇವಸ್ಥಾನ ಇದ್ದು, ಪ್ರತಿ ವರ್ಷ 10 ಸಾವಿರ ಭಕ್ತಾದಿಗಳು ಸೇರುವ ಪ್ರದೇಶವಾಗಿದೆ. ಅಲ್ಲದೆ, ಸಾವಿರಾರು ಜಿಂಕೆಗಳು, ನವಿಲುಗಳು, ಕಾಡು ಪ್ರಾಣಿಗಳು ಈ ಕೆರೆಯಲ್ಲಿ ನೀರು ಕುಡಿಯುತ್ತಿರುತ್ತವೆ. ಒಂದು ವೇಳೆ ಗಣಿಗಾರಿಕೆಗೆ ಅವಕಾಶ ಕೊಟ್ಟರೆ ಕೆರೆ ಹಾಳಾಗಲಿದ್ದು ಪರಿಸರ ಮಾಲಿನ್ಯವಾಗಲಿದೆ. ದೂಳಿನಿಂದ ಸುತ್ತಮುತ್ತಲ ಹತ್ತಾರು ಹಳ್ಳಿಗಳ ಜನರ ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ ರೈತರು ಆಕ್ರೋಶ ವ್ಯಕ್ತಪಡಿಸಿದರು. ಸರ್ವೆ ಸಂಖ್ಯೆ 60 ಹಾಗೂ 52 ರಲ್ಲಿ 120 ಎಕರೆ ಸರ್ಕಾರಿ ಗೋಮಾಳ ಜಮೀನು ಇದೆ. ಭೂಮಿ ಇಲ್ಲದ 40ಕ್ಕೂ ಹೆಚ್ಚು ಅತಿ ಸಣ್ಣ ರೈತರು ಸಾಗುವಳಿ ಮಾಡುತ್ತಿದ್ದಾರೆ. ಆದರೆ, ಬೆಂಗಳೂರು ಮೂಲದವರು ಗಣಿಗಾರಿಕೆ ಮಾಡಲು ಮೂರು ಅರ್ಜಿಗಳನ್ನು ಸುಮಾರು 12 ಎಕರೆ ಜಮೀನಿಗೆ ಸಲ್ಲಿಸಿದ್ದು. ಕೆಲವು ರಾಜಕೀಯ ವ್ಯಕ್ತಿಗಳು, ಜಿಲ್ಲೆಯ ಹಿರಿಯ ಅಧಿಕಾರಿಗಳ ಮೇಲೆ ಒತ್ತಡ ಹಾಕಿ ಗಣಿಗಾರಿಕೆಗೆ ಅನುಮತಿ ನೀಡುವಂತೆ ಒತ್ತಾಯಿಸುತ್ತಿರುವುದು ಗೊತ್ತಾಗಿದೆ ಎಂದರು. ರೈತ ಸಂಘದ ರಾಜ್ಯ ಕೆ.ನಾರಾಯಣಗೌಡ ಮಾತನಾಡಿ, ವರ್ಷದಿಂದ ಗಣಿಗಾರಿಕೆಗೆ ಅವಕಾಶ ನೀಡಬಾರದೆಂದು ಸುತ್ತಮುತ್ತಲ ಗ್ರಾಮಸ್ಥರು ಹಿರಿಯ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ. ಆದರೆ, ಆ ಮನವಿಯನ್ನು ಮರೆಮಾಚಿ ರಾಜಕೀಯ ವ್ಯಕ್ತಿಗಳ ಒತ್ತಡಕ್ಕೆ ಮಣಿದು ಪರವಾನಿಗೆ ನೀಡಲು ಸೂಚಿಸಿರುವುದು ನ್ಯಾಯವೇ ಎಂದು ಪ್ರಶ್ನೆ ಮಾಡಿದರು.

### ಕಾಲಮಿತಿಯಲ್ಲಿ ಕಾಮಗಾರಿ ಮುಗಿಸಿ: ಶಾಸಕ ದರ್ಶನ್ ಧ್ರುವನಾರಾಯಣ

• ಉದಯವಾಹಿನಿ, ನಂಜನಗೂಡು

ತಾಲ್ಲೂಕಿನ ಗೋಳೂರು ಗ್ರಾಮದಲ್ಲಿ ರೂ.1.5 ಕೋಟಿ ವೆಚ್ಚದ ಸಿಸಿ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿ ಹಾಗೂ ಮಾದರಿ ಗ್ರಾಮ ಯೋಜನೆಯಲ್ಲಿ ವಿದ್ಯುತ್ ಮಾರ್ಗಗಳ ನಿರ್ವಹಣಾ ಕಾಮಗಾರಿಗೆ ಶಾಸಕ ದರ್ಶನ್ ಧ್ರುವನಾರಾಯಣ ಚಾಲನೆ ನೀಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೂ.25 ಕೋಟಿ ವಿಶೇಷ ಅನುದಾನ ನೀಡಿದ್ದು, ಅದರಲ್ಲಿ ರೂ.20 ಕೋಟಿಗಳನ್ನು ತಾಲ್ಲೂಕಿನ ಸಾಮಾನ್ಯ ವರ್ಗಗಳ ಜನ ವಾಸಿಸುವ ಬೀದಿಗಳಲ್ಲಿ ರಸ್ತೆ ಕಾಮಗಾರಿ ನಡೆಸಲು ಮೀಸಲಿಡಲಾಗಿದೆ. ರೂ.14.50 ಲಕ್ಷ ವೆಚ್ಚದಲ್ಲಿ ಹಳೇಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಹೊಸ ಕಟ್ಟಡ ಕಾಮಗಾರಿಗೆ, ಕುರಹಟ್ಟಿ ಗ್ರಾಮದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಮಂಜೂರಾದ ಅನುದಾನದಲ್ಲಿ ಗೆಜ್ಜೆಗಾರ ಕಾಲೊನಿ, ನಾಯಕರ ಕಾಲೊನಿಗಳಲ್ಲಿ ತಲಾ ರೂ.20 ಲಕ್ಷ ವೆಚ್ಚದ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದು ಅವರು ಹೇಳಿದರು. ಬದನವಾಳು ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ರೂ.25 ಲಕ್ಷ ವೆಚ್ಚದಲ್ಲಿ ಕಾಂಪೌಂಡ್ ನಿರ್ಮಾಣ, ಹುಣಸನಾಳು ಗ್ರಾಮದಲ್ಲಿ ರೂ.1 ಕೋಟಿ ವೆಚ್ಚದ ರಸ್ತೆ, ಮುದ್ದಹಳ್ಳಿ ಗ್ರಾಮದಲ್ಲಿ 4 ಮೆಗಾವ್ಯಾಟ್ ಸೌರ ಘಟಕ ಕಾಮಗಾರಿಗಳಿಗೆ ಚಾಲನೆ ಸೇರಿದಂತೆ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಒಟ್ಟು ರೂ.3.13 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಗುತ್ತಿಗೆದಾರರು ಕಾಲಮಿತಿಯಲ್ಲಿ ಗುಣಮಟ್ಟದ ಕಾಮಗಾರಿ ನಡೆಸಿ ಸೇವೆಗೆ ಒದಗಿಸಬೇಕು' ಎಂದು ಹೇಳಿದರು.

# ದೇಶದ ಆರ್ಥ ವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ: ಶ್ರದ್ಧಾ ಅಮಿತ್

• ಉದಯವಾಹಿನಿ, ರಾಮನಗರ

ದೇಶದ ಅಭಿವೃದ್ಧಿಯಲ್ಲಿ ಆರ್ಥಿಕ ವ್ಯವಸ್ಥೆ ಬಹಳ ಪ್ರಮುಖ ಪಾತ್ರ ವಹಿಸಿದ್ದು, ಭಾರತದಲ್ಲಿನ ಆರ್ಥಿಕಾಭಿವೃದ್ದಿಗೆ ಮಹಿಳೆಯರ ಕೊಡುಗೆ ಅಪಾರವಾಗಿದೆ ಎಂದು ಧರ್ಮಸ್ಥಳದ ಕ್ಷೇಮವನ ಕಾರ್ಯ ನಿರ್ವಹಣಾಧಿಕಾರಿಗಳಾದ ಶ್ರದ್ಧಾ ಅಮಿತ್ ಅಭಿಪ್ರಾಯಪಟ್ಟರು. ಬಿಡದಿಯ ಮಂಜುನಾಥ ಕಲ್ಯಾಣ ಮಂಟಪದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ರಾಮನಗರ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಮಹಿಳೆಯರು ತಮ್ಮ ಸ್ವ ಶಕ್ತಿಯ ಮೂಲಕ ಆರ್ಥಿಕ ಮಟ್ಟವನ್ನು ಸುಧಾರಣೆ ಮಾಡಿಕೊಳ್ಳುತ್ತಿದ್ದಾರೆ. ಇದು ದೇಶದ ಅಭಿವೃದ್ಧಿಯ ವಿಚಾರದಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸುತ್ತಿದೆ. ಅದರಲ್ಲಿಯೂ ಮುಖ್ಯವಾಗಿ ಮಹಿಳೆಯರು ಸ್ವಯಂ ಉದ್ಯೋಗವನ್ನು ಕಂಡುಕೊಳ್ಳುವ ಮೂಲಕ ಆರ್ಥಿಕ ಭದ್ರತೆ ಪಡೆದುಕೊಳ್ಳುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಜ್ಞಾನವಿಕಾಸ ಕಾರ್ಯಕ್ರಮದಲ್ಲಿ ಮಹಿಳೆಯರ ತೊಡಗಿಸಿಕೊಳ್ಳುವಿಕೆ, ಮಹಿಳೆಯರು ಕುಟುಂಬದ ಶಕ್ತಿಯಾಗಿ ಇರಬೇಕು. ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಸಿಗುವಂತ ತಿಂಗಳ ಮಾಹಿತಿಯನ್ನು ಇಲಾಖೆಗಳ ಭೇಟಿಯಿಂದ ಸದಸ್ಯರಿಗೆ ಸಿಗುವ ಸೌಲಭ್ಯಗಳ ಬಗ್ಗೆ ಅವರು ಮಾತನಾಡಿದರು. ಮಂಜುನಾಥೇಶ್ವರ ಆಯುರ್ವೇದ ಆಸ್ಪತ್ರೆ ಪ್ರಾಧ್ಯಾಪಕರಾದ ಡಾ. ಮಮತಾ ಅವರು, ಆಯುರ್ವೇದದಿಂದ ಮಹಿಳೆಯ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದಾದ ಸರಳ ಮಾರ್ಗಗಳ ಬಗ್ಗೆ ಉಪನ್ಯಾಸ ನೀಡಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಹಿಳಾ ಪೊಲೀಸ್ ಠಾಣೆ ಆರಕ್ಷಕ ನಿರೀಕ್ಷಕಿ ಶೋಭಾ ಅವರು, ಮಹಿಳೆಯರಿಗೆ ಸಂಬಂಧಪಟ್ಟಂತೆ ಇರುವಂತಹ ಸಂರಕ್ಷಣೆ ಬಗ್ಗೆ, ಮೊಬೈಲ್ ಆಪ್ ನಿಂದಾಗಿ ಬರುವಂತಹ ಸಮಸ್ಯೆಗಳು, ಕಾನೂನು ಸುರಕ್ಷತೆಯ ಬಗ್ಗೆ ಮಾಹಿತಿಯನ್ನು ನೀಡಿದರು. ಕೇಂದ್ರದ ಸದಸ್ಯರಿಗೆ ರಂಗೋಲಿ ಮತ್ತು ಹೂಗುಚ್ಚ ಸ್ಪರ್ಧೆ ನಡೆಸಲಾಗಿದ್ದು ವಿಜೇತರಿಗೆ ಬಹುಮಾನ ವಿತರಣೆ ಮತ್ತು ಹೈನುಗಾರಿಕೆ ಮತ್ತು ಸ್ವಉದ್ಯೋಗ ಸಾಧನೆ ಮಾಡಿರುವ ಮಹಿಳೆಯರನ್ನು ಗುರುತಿಸಿ ಬಹುಮಾನ ನೀಡಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪ್ರಾದೇಶಿಕ ನಿರ್ದೇಶಕ ಜಯಂತ್ ಪೂಜಾರಿ, ಜಿಲ್ಲಾ ಜನ ಜಾಗೃತಿ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಚಿಕ್ಕಣ್ಣಯ್ಯ ಇವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಸಂಸ್ಥೆಯ ನಿರ್ದೇಶಕರಾದ ಜಯಕರ್ ಶೆಟ್ಟಿ, ತಾಲ್ಲೂಕು ಯೋಜನಾಧಿಕಾರಿ ಮುರಳಿಧರ್, ಪ್ರಾದೇಶಿಕ ಯೋಜನಾಧಿಕಾರಿ ಮುಕಾಂಬಿಕಾ ಭಾಗವಹಿಸಿದ್ದರು.


ಉದಯವಾಹಿನಿ ಚಿತ್ರ

# ಸಫಾರಿ ಪುನರಾರಂಭಕ್ಕೆ ಹೋಟೆಲ್ ಮಾಲೀಕರ ಒತ್ತಾಯ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ಮಾನವ ವನ್ಯಜೀವಿ ಸಂಘರ್ಷ ಹೆಚ್ಚಾದ ಹಿನ್ನೆಲೆ ಬಂಡೀಪುರ ಸಫಾರಿಯನ್ನ ನವೆಂಬರ್ 7 ರಿಂದಲೇ ಸ್ಥಗಿತಗೊಳಿಸಿ ಸರ್ಕಾರ ಆದೇಶ ಹೊರಡಿಸಿತ್ತು, ಇದರ ಬೆನ್ನಲ್ಲೇ ಹೋಟೆಲ್ ಮಾಲೀಕರು ಸಫಾರಿ ಪುನರಾರಂಭಕ್ಕೆ ಒತ್ತಾಯಿಸುತ್ತಿದ್ದು ಜಂಗಲ್ ಸಫಾರಿ ವಿರುದ್ಧ ತಿರುಗಿಬಿದ್ದಿರುವ ರೈತರು ಒಂದು ವರ್ಷಗಳ ಕಾಲವಾದರು ಸಫಾರಿಯನ್ನ ಸಂಪೂರ್ಣವಾಗಿ ಬಂದ್ ಮಾಡಬೇಕು ಎಂಬ ಬಿಗಿಪಟ್ಟು ಹಿಡಿದಿದ್ದಾರೆ. ಇದರ ನಡುವೆಯೇ ಟಿ. ನರಸೀಪುರದಲ್ಲಿ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಅವರಿಗೆ ಹೋಟೆಲ್ ರೆಸಾರ್ಟ್ ಮಾಲೀಕರು ಮನವಿ ಸಲ್ಲಿಸಿದ್ದಾರೆ.

ಗುಂಡ್ಲುಪೇಟೆ ಮೈಸೂರು ಊಟಿ ಕೇರಳ ರಾಷ್ಟ್ರೀಯ ಹೆದ್ದಾರಿಯಲ್ಲಿ ಸರಿಸುಮಾರು 30 ವಸತಿ ಗೃಹಗಳು, 25 ಹೋಟೆಲ್ ಗಳು, 25 ಬೇಕರಿಗಳು ಸೇರಿದಂತೆ ಬಂಡೀಪುರಕ್ಕೆ ಹೊಂದಿಕೊಂಡಂತೆ 7 ರೆಸಾರ್ಟ್‌ಗಳಿವೆ, ಮತ್ತು ಇಷ್ಟೂ ಸಹ ಪ್ರವಾಸಿಗರಿಂದಲೇ ವಹಿವಾಟು ನಡೆಸಿಕೊಂಡು ಬರುತ್ತಿವೆ ಎಂಬುದು ಹೋಟೆಲ್ ಮಾಲೀಕರ ಸ್ಪಷ್ಟನೆಯಾಗಿದೆ. ವಾರಾಂತ್ಯದಲ್ಲಿ ಪ್ರತಿಷ್ಠಿತ ಹುಲಿ ರಕ್ಷಿತಾರಣ್ಯ ಬಂಡೀಪುರ ಹಾಗೂ ಇತಿಹಾಸಪ್ರಸಿದ್ದ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಬರುತ್ತಿದ್ದ ಭಕ್ತರು, ಪ್ರವಾಸಿಗರಿಂದ ವಾಣಿಜ್ಯ ಚಟುವಟಿಕೆಗೆ ಹುರುಪು ದೊರೆದಿತ್ತಾದರು ಪ್ರಸ್ತುತವಾಗಿ ಸಫಾರಿ ಚಟುವಟಿಕೆ ಬಂದ್ ಆಗಿರುವುದರಿಂದ ವ್ಯಾಪಾರ ವಹಿವಾಟಿನ ಮೇಲೆ ಪರಿಣಾಮ ಬೀರಿದೆ , ಉದ್ಯೋಗ ಕಂಡುಕೊಂಡಿದ್ದ 02 ಸಾವಿರಕ್ಕೂ ಹೆಚ್ಚು ಸ್ಥಳೀಯರಿಗೆ ಹೊಡೆತ ಬಿದ್ದಿದೆ. ಪ್ರವಾಸೋದ್ಯಮವನ್ನೇ ನಂಬಿ ಬಂಡವಾಳ ಹೂಡಿರುವ ನಮಗೆ ನಷ್ಟವಾಗಿದೆ ಈ ಹಿನ್ನೆಲೆಯಲ್ಲಿ ಹೂಡಿಕೆದಾರರ ಹಿತದೃಷ್ಟಿಯಿಂದ ಹಾಗೂ ಕಾರ್ಮಿಕರಿಗೆ ಅನುಕೂಲವಾಗುವಂತೆ ಸಫಾರಿ ಮರು ಆರಂಭಕ್ಕೆ ಅನುಮತಿಸಿ ಸ್ವಾವಲಂಭಿ ಜೀವನ ನಡೆಸಲು ಅವಕಾಶ ಕಲ್ಪಿಸಿಕೊಡಬೇಕು ಎಂದು ವಿನಂತಿಸಿ ಮನವಿ ಸಲ್ಲಿಸಿದ್ದಾರೆ.

ಅರಣ್ಯ ಇಲಾಖೆ ವನ್ಯಜೀವಿಗಳ ಕುರಿತು ಜಾಗೃತಿ ಮೂಡಿಸುವ ಮೂಲಕ ಸಮೃದ್ಧತೆಗೆ ಒತ್ತು ನೀಡಿದರೆ ಪ್ರವಾಸಿಗರ ಸಂಖ್ಯೆಯು ಹೆಚ್ಚಳವಾಗುವ ಜೊತೆಗೆ ಸರ್ಕಾರದ ಖಜಾನೆಗೆ ಲಾಭವಾಗುವ ಜೊತೆಗೆ ಅರಣ್ಯದ ಅಭಿವೃದ್ಧಿಗೂ ಸಹಾಯಕಾರಿಯಾಗಲಿದೆ ಎಂಬುದು ಇವರ ವಾದವಾಗಿದೆ. ಒಟ್ಟಾರೆಯಾಗಿ ಸಫಾರಿಗೆ ಪರ ವಿರೋಧದ ಕೂಗು ಹೆಚ್ಚಾಗಿದ್ದು ಸರ್ಕಾರದ ನಿರ್ಧಾರ ಯಾರ ಪರ ಇರಲಿದೆ ಎಂಬುದನ್ನ ಕಾದುನೋಡಬೇಕಿದೆ.

**ಅರಣ್ಯ ಸಚಿವರಿಗೆ ಮನವಿ**

**ಸಫಾರಿ ಸ್ಥಗಿತವಾದ ನಂತರದ ದಿನಗಳಲ್ಲಿ ಯಾವುದೇ ವ್ಯಾಘ್ರ ದಾಳಿ ಪ್ರಕರಣಗಳು ನಡೆದಿಲ್ಲ, ಅಲ್ಲಲ್ಲಿ ಜಾನುವಾರುಗಳ ಮೇಲೆ ಚಿರತೆ ದಾಳಿ ನಡೆಸಿದ್ದನ್ನ ಹೊರತುಪಡಿಸಿ ಬೇರೇನೂ ಅಹಿತಕರ ಘಟನೆ ನಡೆದಿಲ್ಲ ಆದರೆ ಕೇವಲ ಉದ್ದಿಮೆದಾರರಿಗೆ ನಷ್ಟವಾಗುತ್ತಿದೆ ಎಂಬ ವಾದ ರೈತ ವಿರೋಧಿತನವಾಗಿದೆ, ಕಾರ್ಮಿಕರ ಹೆಸರನ್ನ ಮುನ್ನೆಲೆಗೆ ತಂದಿರುವ ಉದ್ಯಮಿಗಳು ಸರ್ಕಾರದ ಮಟ್ಟದಲ್ಲಿ ಲಾಭಿ ನಡೆಸುತ್ತಿರುವುದು ಖಂಡನೀಯ, ಕೆಲವೇ ಕೆಲವು ಬಂಡವಾಳಶಾಹಿಗಳ ಪರ ಸರ್ಕಾರ ಒಲವು ತೋರಿದ್ದೆಯಾದಲ್ಲಿ ರೈತರಿಗೂ ಸಹ ರಕ್ಷಣೆ ಕೊಡಲು ಸರ್ಕಾರ ಮುಂದಾಗಬೇಕಾಗುತ್ತದೆ.**

-ಮಹದೇವಪ್ಪ ಶಿವಪುರ.
ರೈತ ಸಂಘ ಚಾ.ನಗರ ಜಿಲ್ಲಾಧ್ಯಕ್ಷ

## ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಲೆಂದು ಪ್ರಾರ್ಥನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕನಕಪುರ

ಡಿ.ಕೆ. ಶಿವಕುಮಾರ್ ಅವರು ಶೀಘ್ರವೇ ಮುಖ್ಯಮಂತ್ರಿ ಯಾಗಬೇಕು ಎಂದು ಪ್ರಾರ್ಥಿಸಿ ನಗರಸಭೆ ಮಾಜಿ ಅಧ್ಯಕ್ಷೆ ಲಕ್ಷ್ಮಿದೇವಮ್ಮ ಅವರ ನೇತೃತ್ವದಲ್ಲಿ ಕೆಂಕೇರಮ್ಮ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.ಈ ಪೂಜಾ ಕಾರ್ಯಕ್ರಮದಲ್ಲಿ ಕಾಂಗ್ರೆಸ್‌ನ ಮಹಿಳೆಯರು ಮತ್ತು ನಗರಸಭೆ ಮಾಜಿ ಸದಸ್ಯರು ಭಾಗವಹಿಸಿದ್ದರು. ನಗರದ ಹಲಸಿನಮರದೊಡ್ಡಿಯ ಕೆಂಕೇರಮ್ಮ ದೇವಾಲಯವು ಗ್ರಾಮದ ಶಕ್ತಿ ದೇವತೆ ಡಿ.ಕೆ.ಶಿವಕುಮಾರ್ ಅವರ ಮನೆ ದೇವರು. ಶಿವಕುಮಾರ್ ಅವರು ರಾಜಕೀಯವಾಗಿ ಯಾವುದೇ ಕೆಲಸ ಕೈಗೊಳ್ಳುವ ಮುನ್ನ ಮೊದಲು ಇಲ್ಲಿ ಪೂಜೆ ಸಲ್ಲಿಸುತ್ತಾರೆ.

ಪೂಜೆಯ ನೇತೃತ್ವ ವಹಿಸಿದ್ದಲಕ್ಷ್ಮಿ ದೇವಮ್ಮ ಮಾತನಾಡಿ, ಮತ್ತು ಶಿವಕುಮಾರ್ ಅವರು ತಮ್ಮ ಶ್ರಮದಿಂದ ರಾಜಕೀಯ ಹೋರಾಟಗಳ ಮೂಲಕ ಜಿಲ್ಲಾ ಪಂಚಾಯಿತಿಯಿಂದ ಸಚಿವ ಸ್ಥಾನದವರೆಗೆ ಶ್ರಮಪಟ್ಟು ಮುಂದೆ ಬಂದಿದ್ದಾರೆ. ಅವರನ್ನು ಮುಖ್ಯಮಂತ್ರಿಯಾಗಿ ನೋಡಬೇಕು ಎಂಬ ಆಕಾಂಕ್ಷೆ ಇದೆ. ಡಿ.ಕೆ. ಶಿವಕುಮಾರ್ ಮನುಸು ಮಾಡಿದರೆ, 2023ರಲ್ಲೇ ಮುಖ್ಯಮಂತ್ರಿಯಾಗಬಹುದಿತ್ತು ಎಂದರು. ಕಾಂಗ್ರೆಸ್‌ನ ಮಹಿಳಾ ನಾಯಕಿಯರಾದ ರೋಹಿಣಿ ಪ್ರಿಯ, ಮಹದೇವಮ್ಮ, ರೂಪಾ, ಸರಳ, ನಾಗರತ್ನಮ್ಮ, ಸುಧಾ, ಶೋಭಾ, ಬಿ.ಕೆ.ಪ್ರಭಾ, ರತ್ನಮ್ಮ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಹರೀಶ್, ಜಗದೀಶ್, ಕಿರಣ್ ಉಪಸ್ಥಿತರಿದ್ದರು.

## ಪ್ರತಿಯೊಬ್ಬರು ಭಾಷಾಭಿಮಾನ ಬೆಳೆಸಿಕೊಳ್ಳಿ ; ನ್ಯಾಯಾಧೀಶ ಬಸವರಾಜ್ ತಳವಾರ್

• ಉದಯವಾಹಿನಿ, ಗುಂಡ್ಲುಪೇಟೆ

ಪ್ರತಿಯೊಬ್ಬರು ಭಾಷಾಭಿಮಾನ ಬೆಳೆಸಿಕೊಂಡಿದ್ದೆಯಾದಲ್ಲಿ ಕನ್ನಡ ಭಾಷೆಯನ್ನ ಮತ್ತಷ್ಟು ಉತ್ತುಂಗಕ್ಕೆ ಕೊಂಡೊಯ್ಯಲು ಸಾಧ್ಯ ಎಂದು ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದ ನ್ಯಾಯದೀಶರಾಧ ಬಸವರಾಜ್ ತಳವಾರ್ ಅಭಿಪ್ರಾಯಪಟ್ಟರು. ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರ ವಕೀಲರ ಸಂಘದಿಂದ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನ ಉದ್ಘಾಟಿಸಿ ಅವರು ಮಾತನಾಡಿದರು.

ಗಡಿಭಾಗ ಗುಂಡ್ಲುಪೇಟೆಯಲ್ಲಿ ಪರಭಾಷಿಕರ ಸಂಖ್ಯೆ ಸಹಜವಾಗಿ ಹೆಚ್ಚಾಗುತ್ತಿದೆ, ನಾವು ಸಹ ಭಾಷಾಭಿಮಾನ ಬೆಳೆಸಿಕೊಂಡಾಗ ಮಾತ್ರ ನಮ್ಮ ಮಾತೃಭಾಷೆ ಎತ್ತರಕ್ಕೇರುತ್ತದೆ ಎಂದರು.

ಪ್ರದಾನ ಸಿವಿಲ್ ನ್ಯಾಯದೀಶರಾಧ ಎಂ.ಟಿ. ದೀಪು ಮಾತನಾಡುತ್ತ ಪರಭಾಷೆಯ ಮೇಲಿನ ವ್ಯಾಮೋಹ ಕಡಿಮೆಯಾದಾಗ ಮಾತ್ರವೇ ಕನ್ನಡ ಭಾಷೆಯ ಮೇಲೆ ಅಭಿಮಾನ ದ್ವಿಗುಣವಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಕನ್ನಡ ಹಾಡನ್ನ ಹಾಡುವ ಮೂಲಕ ಎಲ್ಲಾರನ್ನು ರಂಜಿಸಿದರು. ಈ ವೇಳೆ ಪಿಐ ಜಯಕುಮಾರ್, ಶಿರೇಸ್ತಾದಾರ್ ಶಬ್ಬೀರ್, ವಕೀಲರಾದ ಮನುಶ್ಯಾನುಭೋಗ್, ಟಿ. ಎಸ್.ವೆಂಕಟೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

# ಬೆಳಗಾವಿ ಅಧಿವೇಶನದ ಬಳಿಕ ಸಚಿವ ಸಂಪುಟ ವಿಸ್ತರಣೆ

## ● ಹಳ್ಳಿ ಕಡೆ ಶಾಂತಿ ನೆಲೆಸಲು ಕುರಿ,ಕೋಳಿ ಬಲಿಕೊಡ್ತಾರೆ ಅದೇ ತರ ಈ ಬ್ರೇಕ್ ಫಾಸ್ಟ್ ಮೀಟಿಂಗ್: ಕೆ.ಎನ್. ರಾಜಣ್ಣ

• ಉದಯವಾಹಿನಿ, ತುಮಕೂರು

ಬ್ರೇಕ್ ಫಾಸ್ಟ್ ಮೀಟಿಂಗ್ ಬೀಗತನ ಮಾಡಿದಂತೆ. ಮೊದ್ಲು ಒಂದು ಕಡೆ ಹೆಣ್ಣು ನೋಡೋಕೆ ಬರ್ತಾರೆ. ಆ ಮೇಲೆ ಗಂಡು ನೋಡೋಕೆ ಬರ್ತಾರೆ. ಆ ರೀತಿಯಾಗಿದೆ ಈ ಬ್ರೇಕ್ ಫಾಸ್ಟ್ ಮೀಟಿಂಗ್. ಇರೋದು ಏನಿದಿಯೋ ಅದೇ ಮುಂದುವರಿದು ಕೊಂಡು ಹೋಗುತ್ತೆ. ಯಾವುದೇ ರಿವರ್ಸ್ ಆಗಲ್ಲ ಎಂದು ಮಾಜಿ ಸಚಿವ ಕೆ.ಎನ್. ರಾಜಣ್ಣ ವ್ಯಂಗ್ಯವಾಡಿದ್ದಾರೆ. ಇತ್ತೀಚೆಗೆ ರಾಜ್ಯ ರಾಜಕೀಯದಲ್ಲಿ ಸಂಚಲನ ಮೂಡಿಸಿದ್ದ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳ ಬ್ರೇಕ್‌ಫಾಸ್ಟ್ ಮೀಟಿಂಗ್ ನಾಯಕತ್ವ ಬದಲಾವಣೆ ಬಗ್ಗೆ ಮಾಜಿ ಸಚಿವ ಕೆ.ಎನ್. ರಾಜಣ್ಣ ತುಮಕೂರಿನಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ. ಹಳ್ಳಿಗಳಲ್ಲಿ ಶಾಂತಿಯಾಗಬೇಕೆಂದರೆ ಕುರಿ, ಕೋಳಿ ಬಲಿ ಕೊಡುತ್ತಾರೆ. ಅದೇ ರೀತಿ ಸಿಎಂ ಮತ್ತು ಡಿಸಿಎಂ ಅವರ ಮನೆಯಲ್ಲಿ ಆಗಿದೆ. ಸದ್ಯ ಇರುವ ವ್ಯವಸ್ಥೆಯೇ ಮುಂದುವರಿಯಲಿದ್ದು, ಯಾವುದೇ ರಿವರ್ಸ್ ಆಗುವುದಿಲ್ಲ. ನಾಯಕತ್ವ ಬದಲಾವಣೆ ಇಲ್ಲ ಎಂದು ನಾವು ಅಂದುಕೊಂಡಿದ್ದೇವೆ. ಒಂದು ವೇಳೆ ಬದಲಾವಣೆ ಇದ್ದರೆ ಹೈಕಮಾಂಡ್ ಹೇಳುತ್ತದೆ ಎಂದು ಕಾಂಗ್ರೆಸ್ ಶಾಸಕ ರಾಜಣ್ಣ ಸ್ಪಷ್ಟಪಡಿಸಿದರು.



**ಸಿಎಂ-ಡಿಸಿಎಂ ಬ್ರೇಕ್‌ಫಾಸ್ಟ್ ಮೀಟಿಂಗ್ ಅನ್ನು ಬೀಗರೂಟವಿದ್ದಂತೆ, ಅನಿವಾರ್ಯವಾಗಿ ಸಿದ್ದರಾಮಯ್ಯನವರು ಅಧಿಕಾರದಿಂದ ಕೆಳಗಿಳಿಯುವಂತಾದರೆ ಮುಂದಿನ ಸಿಎಂ ಡಾ. ಜಿ. ಪರಮೇಶ್ವರ್ ಆಗಬೇಕು, ಸಂಪುಟ ವಿಸ್ತರಣೆ, ತಮ್ಮ ಪುತ್ರ ಬಿಜೆಪಿ ಸಚಿವರನ್ನು ಭೇಟಿಯಾದ ವಿಚಾರದ ಬಗ್ಗೆಯೂ ಸ್ಪಷ್ಟನೆ.**

– ಕೆ.ಎನ್. ರಾಜಣ್ಣ, ಮಾಜಿ ಸಚಿವ

**ಪರಮೇಶ್ವರ್ ಅವರು ಸಿಎಂ ಆಗಲಿ:** ದಲಿತ ಸಿಎಂ ವಿಚಾರವಾಗಿ ಪರಮೇಶ್ವರ್ ಅವರ ಹೆಸರನ್ನು ಪ್ರಸ್ತಾಪಿಸಿದ ರಾಜಣ್ಣ, ಒಂದು ವೇಳೆ ಅನಿವಾರ್ಯವಾಗಿ ಸಿದ್ದರಾಮಯ್ಯನವರು ಪದಚ್ಯುತಿಗೊಂಡರೆ ಅಥವಾ ಕೆಳಗಿಳಿಯುವಂತಾದರೆ, ಆಗ ದಲಿತ ನಾಯಕರಾದ ಡಾ. ಜಿ. ಪರಮೇಶ್ವರ್ ಅವರೇ ಮುಖ್ಯಮಂತ್ರಿಯಾಗಬೇಕು ಎಂದರು.

**ಬೆಳಗಾವಿ ಅಧಿವೇಶನ ಸಂಪುಟ ವಿಸ್ತರಣೆ:** ಸಚಿವ ಸಂಪುಟ ವಿಸ್ತರಣೆಯ ಬಗ್ಗೆ ಮಾಹಿತಿ ನೀಡಿದ ಅವರು, ಮುಂಬರುವ ಬೆಳಗಾವಿ ಅಧಿವೇಶನದ ನಂತರ ಸಂಪುಟ ವಿಸ್ತರಣೆ ಪ್ರಕ್ರಿಯೆ ನಡೆಯಲಿದೆ ಎಂದು ಹೇಳಿದರು. ಇನ್ನು ದೆಹಲಿಗೆ ಹೋಗಿ ಬಂದ ಶಾಸಕರ ಪ್ರಯತ್ನ ಸಫಲವೂ ಆಗಿಲ್ಲ, ವಿಫಲವೂ ಆಗಿಲ್ಲ ಎಂದರು. ತಮ್ಮ ಪುತ್ರ ರಾಜೇಂದ್ರ ಕೇಂದ್ರ ಸಚಿವರನ್ನು ಭೇಟಿಯಾದ ವಿಚಾರವಾಗಿ ಎದ್ದಿರುವ ಊಹಾಪೋಹಗಳಿಗೆ ರಾಜಣ್ಣ ತೆರೆ ಎಳೆದರು. ನನ್ನ ಮಗ ರಾಜೇಂದ್ರ ಸ್ಕೀಫ್ಕೋದಲ್ಲಿ ಸೀನಿಯರ್ ಡೈರೆಕ್ಟರ್ ಆಗಿದ್ದಾನೆ. ಸ್ಕೀಫ್ಕೋ ಮತ್ತು ಇಸ್ಕೋದಲ್ಲಿ ಆರ್ಟಿಫಿಸಿಯಲ್ ಮೆನ್ಯೂರ್ ತಯಾರಿ ಸಂಬಂಧ ಕೆಲಸಗಳಿರುತ್ತವೆ. ಇವು ಏಷ್ಯಾ ಖಂಡದಲ್ಲೇ ದೊಡ್ಡ ಸಹಕಾರಿ ಸಂಸ್ಥೆಗಳಾಗಿದ್ದು, ಕೇಂದ್ರ ಸಹಕಾರಿ ಸಚಿವರ ಅಡಿಯಲ್ಲಿ ಬರುತ್ತವೆ. ಈ ಬಗ್ಗೆ ಚರ್ಚೆ ಇದ್ದಾಗ ರಾಜೇಂದ್ರ ಒಬ್ಬನೇ ಅಲ್ಲ, ಎಲ್ಲಾ ನಿರ್ದೇಶಕರೂ ಹೋಗುತ್ತಾರೆ. ಸ್ವತಃ ಅಮಿತ್ ಶಾ ಅವರೇ ಸಭೆ ಕರೆಯುತ್ತಾರೆ. ಹೀಗಾಗಿ ಈ ಭೇಟಿಗೆ ವಿಶೇಷ ಅರ್ಥ ಕಲ್ಪಿಸುವುದು ಬೇಡ? ಎಂದು ಹೇಳಿದರು.



**ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರು ಕುರ್ಚಿಯಲ್ಲಿಗಟ್ಟಿಯಾಗಿ ಕುಳಿತಿದ್ದಾರೆ, ಅವರೇ ಸಿಎಂ ಆಗಿ ಮುಂದುವರೆಯುತ್ತಾರೆ, ಸಿಎಂ ಬದಲಾವಣೆ ವಿಷಯ ಪಕ್ಷದ ಮುಂದೆಯೇ ಇಲ್ಲ. ಅಂತೆ, ಕಂತೆ ಮಾತುಗಳು ಏಕೆ? ಈ ಬಗ್ಗೆ ಯಾವುದೇ ಗೊಂದಲ ಇರಬಾರದು ಎಂಬ ಕಾರಣಕ್ಕಾಗಿಯೇ ಹೈಕಮಾಂಡ್ ಸೂಚನೆಯಂತೆ ಸಿಎಂ, ಡಿಸಿಎಂ ಬ್ರೇಕ್ ಫಾಸ್ಟ್ ಮೀಟಿಂಗ್ ಮಾಡಿ ಒಂದಾಗಿದ್ದೇವೆ ಎಂಬ ಸಂದೇಶ ಸಾರಿದ್ದಾರೆ. ನಿಮಗ್ಯಾಕೆ ಈ ಡೌಟ್.**

– ಎಚ್.ಸಿ. ಮಹಾದೇವಪ್ಪ ಸಮಾಜ ಕಲ್ಯಾಣ ಸಚಿವ

ಅಂತರಾಳದಿಂದ... EDITORIAL

# ಡಿಜಿಟಲ್ ಬಂಧನಕ್ಕೊಳಗಾಗಿರುವ ದೇಶದ ಅರ್ಥವ್ಯವಸ್ಥೆ

ದೇಶದಲ್ಲಿ ಅಸಲಿ ತನಿಖಾ ಸಂಸ್ಥೆಗಳಿಗಿಂತ ನಕಲಿ ತನಿಖಾ ಸಂಸ್ಥೆಗಳ ಕಾರ್ಯಾಚರಣೆಗಳೇ ಹೆಚ್ಚುತ್ತಿರುವುದು ಸುಪ್ರೀಂಕೋರ್ಟ್‌ನ ಗಮನಕ್ಕೂ ಬಂದಂತಿದೆ. ಡಿಜಿಟಲ್ ಬಂಧನ ಪ್ರಕರಣಗಳ ಕುರಿತು ಏಕೀಕೃತ ರಾಷ್ಟ್ರವ್ಯಾಪಿ ತನಿಖೆಯನ್ನು ಸಿಬಿಐಗೆ ವಹಿಸಿಕೊಟ್ಟಿರುವ ಸರ್ವೋಚ್ಚ ನ್ಯಾಯಾಲಯವು, ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಅಂತಹ ಪ್ರಕರಣಗಳ ತನಿಖೆ ನಡೆಸಲು ಸಿಬಿಐಗೆ ಒಪ್ಪಿಗೆ ನೀಡುವಂತೆ ರಾಜ್ಯ ಸರಕಾರಗಳಿಗೆ ಆದೇಶಿಸಿದೆ. ಇದೇ ಸಂದರ್ಭದಲ್ಲಿ ಆರ್‌ಬಿಐಗೂ ನೋಟಿಸನ್ನು ನೀಡಿದೆ. ಪ್ರಧಾನಿ ಮೋದಿಯವರು ತನ್ನ ಆಡಳಿತದ ಹೆಗ್ಗಳಿಕೆಗಳಲ್ಲಿ ಒಂದು ಎಂದು ಹೇಳಿಕೊಂಡು ಬರುತ್ತಿರುವ ಡಿಜಿಟಲ್ ಬ್ಯಾಂಕಿಂಗ್ ದೇಶದಲ್ಲಿ ದರೋಡೆಗೆ ಹೊಸ ಆಯಾಮವೊಂದನ್ನು ನೀಡಿದೆ. 2014ಕ್ಕೆ ಮೊದಲು ಮನೆ, ಬ್ಯಾಂಕ್‌ಗಳ ಬಾಗಿಲು ಮುರಿದು, ಗೋಡೆ ಕೊರೆದು ಒಳ ನುಗ್ಗಿ ದರೋಡೆ ಮಾಡುತ್ತಿದ್ದರೆ, ಮೋದಿಯವರ ಡಿಜಿಟಲ್ ಯುಗದಲ್ಲಿ ಸಾವಿರಾರು ಕಿಲೋಮೀಟರ್ ದೂರದಲ್ಲಿ ಕುಳಿತು ದೇಶದ ಜನರ ಮನೆ, ಬ್ಯಾಂಕ್‌ಗಳನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಒಂದು ರೀತಿಯಲ್ಲಿ ದರೋಡೆಗಳನ್ನೇ ಡಿಜಿಟಲೀಕರಣ ಮಾಡಲಾಗಿದೆ. ಹಿಂದೆ ಬ್ಯಾಂಕ್ ದರೋಡೆಯಾದರೆ ಅದರ ಹೊಣೆಯನ್ನು ಬ್ಯಾಂಕ್‌ಗಳು ಹೊತ್ತುಕೊಂಡು ಗ್ರಾಹಕರಿಗೆ ಆದ ನಷ್ಟವನ್ನು ತುಂಬಿಕೊಡುತ್ತಿತ್ತು. ಆದರೆ ಈ ಡಿಜಿಟಲ್ ದರೋಡೆಗಳಿಗೆ ಸಂಬಂಧಿಸಿ ಬ್ಯಾಂಕ್‌ಗಳು ಹೊಣೆಗಾರಿಕೆಯಿಂದ ಸಂಪೂರ್ಣ ನುಣುಚಿಕೊಳ್ಳುತ್ತಿದೆ. ಗ್ರಾಹಕ ತನ್ನ ಖಾತೆಯನ್ನು ಸೈಬರ್ ಕಳ್ಳರು ದೋಚಿದರೆ ಯಾರಲ್ಲಿ ದೂರು ನೀಡಬೇಕು ಎಂದು ಗೊತ್ತಾಗದೆ ಅಸಹಾಯಕನಾಗಬೇಕಾಗುತ್ತದೆ. ಈ ಡಿಜಿಟಲ್ ದರೋಡೆಗಳಿಗೆ ಹೊಸ ತಂತ್ರಗಳನ್ನು ಅನ್ವೇಷಣೆ ಮಾಡುವಲ್ಲಿ ಕಳ್ಳರು ಪೊಲೀಸರಿಗಿಂತ ಎಷ್ಟೋ ಮುಂದಿದ್ದಾರೆ. ಪ್ರಧಾನಿ ಮೋದಿಯವರು ಭದ್ರತೆಗೆ ಸೂಕ್ತ ಕ್ರಮ ತೆಗೆದುಕೊಳ್ಳುವ ಬದಲು, ಸಂತ್ರಸ್ತ ಗ್ರಾಹಕರನ್ನು ತಮ್ಮ ಭಾಷಣಗಳಿಂದ ಸಂತೈಸುವುದಕ್ಕೆ ಸೀಮಿತರಾಗಿದ್ದಾರೆ.


2024ರಲ್ಲಿ ಭಾರತವು ಸೈಬರ್ ಕ್ರಿಮಿನಲ್‌ಗಳು ಮತ್ತು ವಂಚಕರಿಂದಾಗಿ 22, 842 ಕೋಟಿ ರೂಪಾಯಿಗಳನ್ನು ಕಳೆದುಕೊಂಡಿದೆ ಎಂದು ಸರಕಾರಿ ಅಂಕಿ ಅಂಶಗಳು ಹೇಳುತ್ತವೆ. ಅಷ್ಟೇ ಅಲ್ಲ 2025ರಲ್ಲಿ ಇಂತಹ ವಂಚನೆಗಳಿಂದ 1.2 ಲಕ್ಷ ಕೋಟಿ ರೂ.ಗೂ ಹೆಚ್ಚು ಹಣವನ್ನು ಕಳೆದುಕೊಳ್ಳಲಿದ್ದಾರೆ ಎಂದು ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರ ಅಂದಾಜಿಸಿದೆ. 2023ರಲ್ಲಿ ಈ ಸೈಬರ್ ದರೋಡೆಯಲ್ಲಿ ಭಾರತೀಯರು 7, 465 ಕೋಟಿ ರೂಪಾಯಿಗಳನ್ನು ಕಳೆದುಕೊಂಡಿದ್ದರೆ, 2022ರಲ್ಲಿ 2,306 ಕೋಟಿ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ. ಅಂದರೆ ವರ್ಷದಿಂದ ವರ್ಷಕ್ಕೆ ಕಳೆದುಕೊಳ್ಳುತ್ತಿರುವ ಹಣ ಹಲವು ಪಟ್ಟು ಹೆಚ್ಚುತ್ತಿದೆ. ವಿಶೇಷವೆಂದರೆ, ಹೀಗೆ ಹಣ ಕಳೆದುಕೊಳ್ಳುತ್ತಿರುವವರು ಅನಕ್ಷರಸ್ಥರು, ಡಿಜಿಟಲ್ ಬ್ಯಾಂಕಿಂಗ್‌ನ ಬಗ್ಗೆ ಅಜ್ಞಾನ ಹೊಂದಿರುವವರಲ್ಲ. ಸ್ವತಃ ಬ್ಯಾಂಕ್ ಅಧಿಕಾರಿಗಳೇ ಈ ಸೈಬರ್ ವಂಚಕರ ಮೋಸಕ್ಕೆ ನೇರವಾಗಿ ಬಲಿಯಾಗುತ್ತಿದ್ದಾರೆ. ರಾಜಕಾರಣಿಗಳು, ಉಪನ್ಯಾಸಕರು, ನಿವೃತ್ತ ಅಧಿಕಾರಿಗಳು ಹೀಗೆ ವಿದ್ಯಾವಂತರ ದೊಡ್ಡ ಪಡೆಯೇ ಡಿಜಿಟಲ್ ದರೋಡೆಯ ನೇರ ಸಂತ್ರಸ್ತರಾಗಿದ್ದಾರೆ. ಕಳೆದ ವರ್ಷ ಕರ್ನಾಟಕದ ಗದಗ್ ಜಿಲ್ಲೆಯಲ್ಲಿ ಬ್ಯಾಂಕ್ ಉದ್ಯೋಗಿಯೊಬ್ಬರು ಸೈಬರ್ ವಂಚಕರಿಗೆ ಬಲಿಯಾಗಿ 26 ಲಕ್ಷ ರೂಪಾಯಿ ಕಳೆದುಕೊಂಡರು. ಮನೆಯಲ್ಲೇ ಕುಳಿತು ಲಕ್ಷ ಲಕ್ಷ ಸಂಪಾದಿಸಿ ಎನ್ನುವ ಜಾಹೀರಾತಿಗೆ ಮರುಳಾಗಿ ತಮ್ಮ ಬ್ಯಾಂಕ್ ವಿವರಗಳನ್ನು ನೀಡಿ ಅವರು ಹಣ ಕಳೆದುಕೊಂಡಿದ್ದರು. ಕಳೆದ ಜುಲೈ ತಿಂಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಬ್ಯಾಂಕ್ ಅಧಿಕಾರಿಯನ್ನೇ ಡಿಜಿಟಲ್ ಅರೆಸ್ಟ್ ಮಾಡಿ ಸುಮಾರು 56 ಲಕ್ಷ ರೂಪಾಯಿಗಳನ್ನು ದೋಚಿದ್ದರು. ಜನರನ್ನು ಜಾಗೃತಿಗೊಳಿಸಬೇಕಾಗಿದ್ದ, ಡಿಜಿಟಲ್ ಬ್ಯಾಂಕ್ ವ್ಯವಹಾರದ ಕುರಿತಂತೆ ಜನರನ್ನು ಸಾಕ್ಷರರನ್ನಾಗಿಸಬೇಕಾಗಿದ್ದ ಅಧಿಕಾರಿಗಳೇ ಡಿಜಿಟಲ್ ಅರೆಸ್‌ಗೆ ಬಲಿಯಾದರೆ, ಇನ್ನು ಜನಸಾಮಾನ್ಯರ ಸ್ಥಿತಿಯೇನಾಗಬೇಕು?

**ಸೈಬರ್ ವಂಚನೆ ಪ್ರಕರಣಗಳಲ್ಲಿ ಬಳಸಲಾದ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲು ಕೃತಕ ಬುದ್ಧಿಮತ್ತೆ ಅಥವಾ ಎಐ ತಂತ್ರಜ್ಞಾನವನ್ನು ಯಾಕೆ ಬಳಸಿಲ್ಲ ಎನ್ನುವುದಕ್ಕೆ ಉತ್ತರಿಸುವಂತೆಯೂ ಅದು ಸೂಚಿಸಿದೆ. ಜೊತೆಗೆ ಇಂತಹ ಆನ್‌ಲೈನ್ ಅಪರಾಧಗಳನ್ನು ಎದುರಿಸಲು ಪ್ರಾದೇಶಿಕ ಮತ್ತು ರಾಜ್ಯ ಸೈಬರ್ ಅಪರಾಧ ಸಮನ್ವಯ ಕೇಂದ್ರವನ್ನು ಸ್ಥಾಪಿಸುವಂತೆ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಿದೆ.**

ಇನ್ನೊಬ್ಬರ ಬ್ಯಾಂಕ್ ಖಾತೆಯನ್ನು ಹ್ಯಾಕ್ ಮಾಡಿ ಅಥವಾ ಮೋಸದಿಂದ ಒಟಿಪಿ ಪಡೆದು ಹಣ ದೋಚುವುದು ಒಂದು ರೀತಿಯಾದರೆ, ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಕೋಟಿಗಟ್ಟಳೆ ಹಣವನ್ನು ದೋಚುವುದು ವಂಚಕರ ಇನ್ನೊಂದು ಬಗೆಯ ತಂತ್ರ. ಇಲ್ಲಿ ಡಿಜಿಟಲ್ ವ್ಯವಸ್ಥೆಯನ್ನು ದುರ್ಬಳಕೆ ಮಾಡುತ್ತಿರುವುದು ಮಾತ್ರವಲ್ಲ ತನಿಖಾ ಸಂಸ್ಥೆಯ ಹೆಸರನ್ನೇ ದುರ್ಬಳಕೆ ಮಾಡಿ ಜನರನ್ನು ವಂಚಿಸಲಾಗುತ್ತಿದೆ. ಸಿಬಿಐ ಹೆಸರಿನಲ್ಲಿ ಇಂತಹ ಭಾರೀ ವಂಚನೆಗಳು ನಡೆದಾಗಲೇ ತನಿಖಾ ಸಂಸ್ಥೆಗಳು ಎಚ್ಚೆತ್ತು ಇದಕ್ಕೆ ಕಡಿವಾಣ ಹಾಕಲು ಕ್ರಮ ತೆಗೆದುಕೊಳ್ಳಬೇಕಾಗಿತ್ತು. ತನಿಖಾ ಸಂಸ್ಥೆಗಳ ಹೆಸರುಗಳನ್ನೇ ಬಳಸಿಕೊಂಡು ವಂಚಕರು ಮೋಸವೆಸಗುವುದು ಆಯಾ ಸಂಸ್ಥೆಗೆ ಅವಮಾನಕಾರಿ ವಿಷಯವಾಗಿದೆ. ತಮ್ಮ ಹೆಸರಿನಲ್ಲೇ ನಡೆಯುತ್ತಿರುವ ವಂಚನೆಗಳನ್ನು ತಡೆಯಲು ತನಿಖಾ ಸಂಸ್ಥೆಗಳು ವಿಫಲವಾಗುತ್ತವೆ ಎಂದಾದರೆ, ಇತರ ವಂಚನೆಗಳನ್ನು ತಡೆಯುವಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಬಹುದು ಡಿಜಿಟಲ್ ಅರೆಸ್ಟ್‌ನಲ್ಲಿ ಜನರು ಮೋಸ ಹೋಗಿ ಹಣದ ವಿವರಗಳನ್ನು ನೀಡುವುದು ಈ ದೇಶದ ಕಾನೂನು ವ್ಯವಸ್ಥೆಗೆ ಹೆದರಿ.

ಒಂದು ರೀತಿಯಲ್ಲಿ ಡಿಜಿಟಲ್ ಅರೆಸ್ಟ್ ಮೂಲಕ ವಂಚಕರು ಕಾನೂನು ವ್ಯವಸ್ಥೆಯನ್ನು ಅಣಕಿಸುತ್ತಿದ್ದಾರೆ. ಡಿಜಿಟಲ್ ಅರೆಸ್ಟ್‌ಗೊಳಾಗಾದವರ ಹಿನ್ನೆಲೆ ಗಮನಿಸಿದರೆ ನಿಜಕ್ಕೂ ಆಘಾತವಾಗುತ್ತದೆ. ಗುಜರಾತ್‌ನಲ್ಲಿ ವೈದ್ಯೆಯೊಬ್ಬರನ್ನು ಡಿಜಿಟಲ್ ಅರೆಸ್ಟ್ ಮಾಡಿದ್ದೇವೆ ಎಂದು ಬೆದರಿಸಿ ಅವರಿಂದ 19 ಕೋಟಿ ರೂಪಾಯಿಯನ್ನು ದೋಚಿದ್ದಾರೆ. ಇಲ್ಲಿ ದುಷ್ಕರ್ಮಿಗಳು ಆರಂಭದಲ್ಲಿ ದೂರವಾಣಿ ಸಂಪರ್ಕ ಇಲಾಖೆಯ ಅಧಿಕಾರಿಗಳೆಂದು ಪರಿಚಯಿಸಿಕೊಂಡಿದ್ದಾರೆ.

# ರಾಮಾಯಣ



## ಲಕ್ಷ್ಮಣನು ಶ್ರೀರಾಮನಿಗೆ ಹೇಳಿದ ಸಮಾಧಾನ

• ಹಿಂದಿನ ಸಂಚಿಕೆಯಿಂದ **120 ನೆಯ ಅಧ್ಯಾಯ**

ಅಣ್ಣ, ದೇವತೆಗಳು ಅತಿಪ್ರಯಾಸದಿಂದ ಅಮೃತವನ್ನು ಪಡೆದಂತೆ ದಶರಥರಾಯನು ತಪಸ್ಸಿನಿಂದಲೂ ಅನೇಕ ವ್ರತೋಪವಾಸನಿಯಮಗಳಿಂದಲೂ ನಿನ್ನನ್ನು ಪಡೆದು ನಿನ್ನ ಕಲ್ಯಾಣಗುಣಗಳಿಂದ ಬದ್ಧನಾಗಿ ನಿನ್ನ ವಿಯೋಗದಿಂದ ದೇವಲೋಕವನ್ನೋದಿದನು. ನೀನೇ ಇಂಥ ದು.ಖವನ್ನು ಸಹಿಸಿಕೊಳ್ಳಲಾರದಿದ್ದರೆ ಪ್ರಾಕೃತನಾದ ಯಾವ ಮನುಷ್ಯನು ಸಹಿಸಿಕೊಂಡಾನು – ನೀನು ದುಃಖ ಬಂದದ್ದಕ್ಕಾಗಿ ಸಮಸ್ತ ಲೋಕಗಳನ್ನೂ ದಹಿಸಿದರೆ ಜನರನ್ನು ರಕ್ಷಿಸತಕ್ಕವರಾರು – ಮನುಷ್ಯರಿಗೆ ಸುಖದುಃಖಗಳು ಬಂದಾಗ ಅವೆರಡನ್ನೂ ಸಮವಾಗಿ ಭಾವಿಸಿ ಸುಖಬಂದಾಗ ಹೆಚ್ಚದೆ ದುಃಖ ಬಂದಾಗ ಕುಗ್ಗದೆ ಇರಬೇಕಲ್ಲದೆ, ದುಃಖವು ಬಂದಾಗ ಕೋಪದಿಂದ ಪರರಿಗೆ ಉಪದ್ರವವನ್ನುಂಟುಮಾಡಬಾರದು. ಪೂರ್ವದಲ್ಲಿ ನಹುಷರಾಯನ ಮಗನಾದ ಯಯಾತಿರಾಯನು ಇಂದ್ರಲೋಕವನ್ನು ಪಡೆದು ಪುನಃ ಭೂಮಿಯಲ್ಲಿ ಬಿದ್ದನು. ನಮ್ಮ ಪುರೋಹಿತನಾದ ವಸಿಷ್ಠ ಮುನೀಶ್ವರನು ತನ್ನ ನೂರುಮಂದಿ ಮಕ್ಕಳನ್ನೂ ಕಳೆದುಕೊಂಡನು. ಸರ್ವಲೋಕಪೂಜ್ಯಳಾದ ಭೂದೇವಿಯು ಚಲಿಸುತ್ತಿದ್ದಾಳೆ. ಸಮಸ್ತ ಜಗತ್ತುಗಳಿಗೂ ಕಣ್ಣುಗಳಂತೆ ಇದ್ದು ಸರ್ವವಸ್ತುಗಳನ್ನೂ ಪ್ರಕಾಶಮಾಡುವ ಚಂದ್ರಸೂರ್ಯರು ರಾಹುವಿನಿಂದ ಗ್ರಹಣವನ್ನೆ ದುತ್ತಿದ್ದಾರೆ. ಶ್ರೀರಾಮ, ಲೋಕದಲ್ಲಿರುವ ಸಮಸ್ತ ಪ್ರಾಣಿಗಳೂ ಇಂದ್ರಾದಿ ದೇವತೆಗಳೂ ದೈವಗತಿಯನ್ನು ಮೀರಲಾರದೆ ಹೋಗಿದ್ದಾರೆ. ದ್ರಾದಿ ದೇವತೆಗಳಿಗೂ ಸುಖ ದುಃಖಗಳುಂಟು. ಸೀತಾದೇವಿಯು ನಷ್ಟಳಾಗಲಿ, ಅಪಹೃತಳಾಗಲಿ ಯಾವ ಸಂದರ್ಭದಲ್ಲಿಯೂ ನೀನು ಅಲ್ಪಮನುಷ್ಯರಂತೆ ಶೋಕ ಮಾಡುವುದು ಉಚಿತವಲ್ಲ. ಸುಖ ದುಃಖಗಳನ್ನು ಸಮಾನವಾಗಿ ಕಾಣಬೇಕು. ನಿನ್ನಂಥ ಮಹಾತ್ಮರು ಮಹತ್ತಾದ ದುಃಖವು ಪ್ರಾಪ್ತವಾದರೂ ಶೋಕ ಪಡರು. ಜ್ಞಾನದೃಷ್ಟಿಯಿಂದ ವಿಚಾರಿಸಿ ನೋಡು. ಲೋಕದಲ್ಲಿ ಜ್ಞಾನಿಗಳು ಧ್ಯಾನಾಸಕ್ತರಾಗಿ ಜ್ಞಾನದೃಷ್ಟಿಯಿಂದಲೇ ತಮ್ಮ ಶುಭಾಶುಭಗಳನ್ನು ವಿಚಾರಿಸಿಕೊಳ್ಳುವರು. ಕ್ರಿಯೆಯಲ್ಲಿ ತೊಡಗಿದ ಹೊರತು ಜನ್ಮಾಂತರದ ಪಾಪಪುಣ್ಯಗಳು ಫಲವನ್ನು ಕೊಡುವುದಿಲ್ಲವೆಂದು ಪೂರ್ವದಲ್ಲಿ ನೀನೇ ನನಗೆ ಉಪದೇಶ ಮಾಡಿದ್ದೀಯೆ. ಸಾಕ್ಷಾತ್ ಬೃಹಸ್ಪತಿಯಾದರೂ ನಿನಗೆ ಬೋಧಿಸುವುದಕ್ಕೆ ಸಮರ್ಥನಲ್ಲ. ಹಾಗಿರಲು ನಾನು ನಿನಗೆ ಬೋಧಿಸಲು ಸಮರ್ಥನೇ ಶ್ರೀರಾಮ, ನೀನು ಮಹಾಪ್ರಾಜ್ಞನು. ನಿನ್ನ ತತ್ತ್ವಜ್ಞಾನವು ಸೀತಾದೇವಿಯ ವಿರಹದುಃಖದಿಂದ ಮರೆಯಾಗಿರುವುದರಿಂದ ನಾನು ಅದನ್ನು ಸ್ಮರಣೆಗೆ ತಂದುಕೊಟ್ಟೆನಲ್ಲದೆ ನಿನಗೆ ಬೋಧನೆಯನ್ನು ಮಾಡಲಿಲ್ಲ. ಶ್ರೀರಾಮ, ನೀನು ನಿನ್ನ ದಿವ್ಯಮಾನುಷಾವತಾರವನ್ನೂ ನಿನ್ನ ಪರಾಕ್ರಮಾತಿಶಯವನ್ನೂ ವಿಚಾರಿಸಿಕೊಂಡು ನಿನ್ನ ಶತ್ರುಗಳಾದ ರಾಕ್ಷಸರ ವಧೆಗೆ ತಕ್ಕ ಯೋಚನೆಯನ್ನು ಮಾಡು. ನಿನಗೆ ಸಮಸ್ತ ಭೂತಗಳನ್ನು ವಿನಾಶಮಾಡು ವುದರಿಂದ ಬರುವ ಪ್ರಯೋಜನವೇನು ? ಆದ್ದರಿಂದ ನಮಗೆ ಶತ್ರುವಾದವನಾರೆಂದು ವಿಚಾರಿಸಿ ಅವನನ್ನು ಕೊಲ್ಲುವುದಕ್ಕೆ ಯತ್ನ ಮಾಡು ಎಂದು ನುಡಿದನು.

ಮುಂದುವರಿಯುವುದು...

# ಆಂಜನೇಯಸ್ವಾಮಿಯ 108 ಹೆಸರುಗಳ ವಿವರಣೆ...





☛ ವಿಶ್ವಾಸ್.ಡಿ.ಗೌಡ

ಆಂಜನೇಯ ಅಷ್ಟೋತ್ತರ ಶತನಾಮಾವಳಿಯಲ್ಲಿ ಹನುಮಂತನ 108 ಹೆಸರುಗಳನ್ನು ಹೇಳಿಕೊಂಡು ನಮಸ್ಕರಿಸುವುದು ಪರಿಪಾಠ.

ಅಷ್ಟೋತ್ತರ ಶತನಾಮಾವಳಿಯ ಈ 108 ಹೆಸರುಗಳು ಕನ್ನಡ ಅರ್ಥ / **ಹಿನ್ನೆಲೆ ಇಲ್ಲಿದೆ :** ಆಂಜನೇಯಯ – ಅಂಜನಾ ದೇವಿಯ ಪುತ್ರನಿಗೆ ನಮಸ್ಕಾರ ಮಹಾವೀರಾಯ – ವೀರರಲ್ಲಿ ವೀರನಾದವನಿಗೆ ನಮಸ್ಕಾರ ಹನುಮತೇ – ಭಕ್ತಿ ಮತ್ತು ಸ್ವಯಂ ಶಿಸ್ತುವುಳ್ಳವನಿಗೆ ನಮಸ್ಕಾರ

ಮಾರುತಾತ್ಮಜಾಯ – ಮಾರುತ (ವಾಯುದೇವ) ಪುತ್ರನಿಗೆ ನಮಸ್ಕಾರ ತತ್ತ್ವಜ್ಞಾನ ಪ್ರದಾಯ ತತ್ವಜ್ಞಾನಿಯೂ ಮತ್ತು ತತ್ತ್ವಜ್ಞಾನದ ಅರಿವನ್ನು ನೀಡುವವನೂ ಆದವನಿಗೆ ನಮಸ್ಕಾರ ಸೀತಾದೇವಿಮುದ್ರಾ ಪ್ರದಾಯಕಾಯ – ಸೀತಾದೇವಿಯ ಬಳಿ ರಾಮನ ಮುದ್ರೆಯನ್ನು ಕೊಂಡೊಯ್ದವನಿಗೆ ನಮಸ್ಕಾರ ಅಶೋಕವನಿಕಾಚ್ಛೇತ್ರೇ – ಅಶೋಕವನದಲ್ಲಿ ಸೀತಾದೇವಿಯನ್ನು ಪತ್ತೆ ಮಾಡಿದವನಿಗೆ ನಮಸ್ಕಾರ ಸರ್ವ ಮಾಯಾವಿಭಂಜನಾಯ – ಎಲ್ಲೆಡೆ ತನ್ನ ಕಾಂತಿ ತುಂಬಿ ಶೋಭಿಸುವವನಿಗೆ ನಮಸ್ಕಾರ ಸರ್ವ ಬಂಧ ವಿಮೋಕ್ತ್ರೇ – ಎಲ್ಲಾ ಬಗೆಯ ಬಂಧನಗಳಿಂದ ಮುಕ್ತಗೊಳಿಸುವವನಿಗೆ ನಮಸ್ಕಾರ ರಕ್ಷೋವಿಧ್ವಂಸಕಾರಕಾಯ– ಪಾಂಡಿತ್ಯದ ಮೂರ್ತರೂಪನೇ ನಿನಗೆ ನಮಸ್ಕಾರ ಪರವಿದ್ಯಾ ಪರಿಹಾರಾಯ – ಮತ್ತೊಬ್ಬರು ತಮ್ಮ ವಿದ್ಯೆಯಿಂದ ಉಂಟು ಮಾಡುವ ಅಡ್ಡಿಗಳನ್ನು ನಿವಾರಿಸುವವನಿಗೆ ನಮಸ್ಕಾರ ಪರ ಶೌರ್ಯ ವಿನಾಶಕಾಯ – ಮತ್ತೊಬ್ಬರು ತಮ್ಮ ಶೌರ್ಯದಿಂದ ಉಂಟು ಮಾಡುವ ಅಡ್ಡಿಗಳನ್ನು ನಿವಾರಿಸುವವನಿಗೆ ನಮಸ್ಕಾರ ಪರ ಮಂತ್ರ ನಿರಾಕರ್ತ್ರೇ – ಮತ್ತೊಬ್ಬರು ಮಂತ್ರ ಪ್ರಯೋಗದಿಂದ ಉಂಟು ಮಾಡುವ ಅಡ್ಡಿಗಳನ್ನು ನಿವಾರಿಸುವವನಿಗೆ ನಮಸ್ಕಾರ ಪರ ಯಂತ್ರ ಪ್ರಭೇದಕಾಯ – ಮತ್ತೊಬ್ಬರು ಯಂತ್ರ ಪ್ರಯೋಗದಿಂದ ಉಂಟು ಮಾಡುವ ಅಡ್ಡಿಗಳನ್ನು ನಿವಾರಿಸುವವನಿಗೆ ನಮಸ್ಕಾರ ಸರ್ವಗ್ರಹ ವಿನಾಶಿನೇ – ಎಲ್ಲಾ ಗ್ರಹ ಬಾಧೆಗಳನ್ನು ನಿವಾರಿಸುವವನಿಗೆ ನಮಸ್ಕಾರ ಭೀಮಸೇನ ಸಹಾಯಕೃತೇ – ಭೀಮಸೇನನಿಗೆ ಸಹಾಯ ಮಾಡಿದ ನಿನಗೆ ನಮಸ್ಕಾರ ಸರ್ವದುಃಖ ಹರಾಯ – ಎಲ್ಲಾ ಬಗೆಯ ದುಃಖಗಳನ್ನು ಪರಿಹರಿಸುವವನಿಗೆ ನಮಸ್ಕಾರ ಸರ್ವಲೋಕಚಾರಿಣೇ – ಸಕಲ ಲೋಕಗಳಲ್ಲೂ ಸಂಚರಿಸಬಲ್ಲವನಿಗೆ ನಮಸ್ಕಾರ ಮನೋಜವಾಯ – ಮನೋವೇಗದಲ್ಲಿ ಚಲಿಸಬಲ್ಲವನೇ ನಮಸ್ಕಾರ ಪಾರಿಜಾತ ದ್ರುಮೂಲಸ್ಥಾಯ – ಪಾರಿಜಾತ ವೃಕ್ಷದ ಕೆಳಗೆ ಕುಳಿತವನೇ ನಿನಗೆ ನಮಸ್ಕಾರ ಸರ್ವ ಮಂತ್ರ ಸ್ವರೂಪಾಯ – ಸಕಲ ಮಂತ್ರ ಸ್ವರೂಪಿಯಾದ ನಿನಗೆ ನಮಸ್ಕಾರ ಸರ್ವ ತಂತ್ರ ಸ್ವರೂಪಿಣೇ – ಸಕಲ ತಂತ್ರ ಸ್ವರೂಪಿಯಾದ ನಿನಗೆ ನಮಸ್ಕಾರ ಸರ್ವ ಯಂತ್ರಾತ್ಮಕಾಯ – ಸಕಲ ಯಂತ್ರ ಸ್ವರೂಪಿಯಾದ ನಿನಗೆ ನಮಸ್ಕಾರ ಕಪೀಶ್ವರಾಯ – ಕಪಿ ಸೇನೆಗಳ ನಾಯಕ ನಿನಗೆ ನಮಸ್ಕಾರ ಮಹಾಕಾಯಾಯ – ಬೃಹತ್ ಶರೀರವುಳ್ಳವ ನಿನಗೆ ನಮಸ್ಕಾರ ಸರ್ವರೋಗಹರಾಯ – ಸಕಲ ರೋಗಗಳನ್ನು ಪರಿಹರಿಸುವವನೇ ನಮಸ್ಕಾರ ಪ್ರಭವೇ – ಪ್ರಭಾವಶಾಲಿಯಾದ ನಿನಗೆ ನಮಸ್ಕಾರ ಬಲಸಿದ್ಧಿಕರಾಯ – ಬಲವನ್ನೂ ಸಿದ್ಧಿಯನ್ನೂ ದಯಪಾಲಿಸುವವನೇ ನಮಸ್ಕಾರ ಸರ್ವವಿದ್ಯಾ ಸಂಪತ್ಪ್ರದಾಯಕಾಯ – ಸಕಲ ವಿದ್ಯೆಗಳನ್ನೂ ಸಂಪತ್ತನ್ನೂ ಕರುಣಿಸುವವನೇ ನಮಸ್ಕಾರ ಕಪಿಸೇನಾನಾಯಕಾಯ – ಕಪಿಸೇನೆಯ ನಾಯಕನೇ ನಮಸ್ಕಾರ ಭವಿಷ್ಯತ್ ಚತುರಾನನಾಯ – ನಾಲ್ಕು ಮುಖಗಳನ್ನು ಹೊಂದಿರುವವನೇ ನಮಸ್ಕಾರ ಕುಮಾರ ಬ್ರಹ್ಮಚಾರಿಣೇ – ಬ್ರಹ್ಮಚಾರಿಯೇ ನಿನಗೆ ನಮಸ್ಕಾರ ರತ್ನ ಕುಂಡಲ ದೀಪ್ತಿಮತೇ – ರತ್ನಕುಂಡಲಗಳನ್ನು ಧರಿಸಿ ದೀಪದಂತೆ ಬೆಳಗುವವನೇ ನಮಸ್ಕಾರ ಚಂಚಲದ್ವಾಲಸನ್ನದ್ಧ ಲಂಬಾಮಾನ ಶಿಖೋಜ್ವಾಲಾಯ ಚಂಚಲನೇತ್ರ ಜ್ವಾಲೆಯಂತೆ ಶೋಭಿಸುವವನೇ ನಮಸ್ಕಾರ ಗಂಧರ್ವ ವಿದ್ಯಾಯ – ಗಂಧರ್ವ ವಿದ್ಯೆ ಬಲ್ಲವನೇ ನಿನಗೆ ನಮಸ್ಕಾರ ತತ್ತ್ವಜ್ಞಾನಾಯ– ತತ್ವಜ್ಞಾನಿಯೇ ನಿನಗೆ ನಮಸ್ಕಾರ ಮಹಾಬಲ ಪರಾಕ್ರಮಾಯ ಮಹಾಬಲಶಾಲಿಯಾದ ಪರಾಕ್ರಮಿಯೇ ನಿನಗೆ ನಮಸ್ಕಾರ ಕಾರಾಗೃಹ ವಿಮೋಕ್ತ್ರೇ – ಸೆರೆಮನೆಯಿಂದ ಮುಕ್ತಗೊಳಿಸುವವನೇ ನಿನಗೆ ನಮಸ್ಕಾರ ಶೃಂಖಲಾ ಬಂಧಮೋಚಕಾಯ – ಸಂಸಾರ ಸಂಕೋಲೆಗಳ ಬಂಧಮುಕ್ತಗೊಳಿಸುವವನೇ ನಿನಗೆ ನಮಸ್ಕಾರ ಸಾಗರೋತ್ತರಕಾಯ – ಭವ ಸಾಗರವನ್ನು ದಾಟಿದವನೇ ನಿನಗೆ ನಮಸ್ಕಾರ ಪ್ರಾಜ್ಞಾಯ – ಸ್ವತಃ ಪ್ರಜ್ಞೆಯಾಗಿರುವವನೇ ನಿನಗೆ ನಮಸ್ಕಾರ ರಾಮದೂತಾಯ – ಪ್ರಭು ರಾಮನ ದೂತನಾಗಿರುವ ನಿನಗೆ ನಮಸ್ಕಾರ ಪ್ರತಾಪವತೇ – ಪ್ರತಾಪಿಯಾದ ನಿನಗೆ ನಮಸ್ಕಾರ ಕೇಸರಿಸುತಾಯ – ಕೇಸರಿಯ ಮಗನೇ ನಿನಗೆ ನಮಸ್ಕಾರ

ಸೀತಾ ಶೋಕ ನಿವಾರಕಾಯ – ಸೀತೆಯ ಶೋಕ ಪರಿಹರಿಸಿದ ನಿನಗೆ ನಮಸ್ಕಾರ ಅಂಜನಾ ಗರ್ಭ ಸಂಭೂತಾಯ – ಅಂಜನೆಯ ಗರ್ಭದಲ್ಲಿ ಜನಿಸಿದ ನಿನಗೆ ನಮಸ್ಕಾರ ಬಾಲಾರ್ಕಸದೃಶಾನನಾಯ – ಮಕ್ಕಳ ರಕ್ಷಣೆ ಮಾಡುವವನೇ ನಿನಗೆ ನಮಸ್ಕಾರ ವಿಭೀಷಣ ಪ್ರಿಯಕರಾಯ – ವಿಭೀಷಣನಿಗೆ ಪ್ರಿಯನಾದವನೇ ನಿನಗೆ ನಮಸ್ಕಾರ ದಶಗ್ರೀವ ಕುಲಾಂತಕಾಯ – ಹತ್ತು ತಲೆಯ ರಾವಣನಿಗೆ ಪಾಠ ಕಲಿಸಿದವನೇ ನಿನಗೆ ನಮಸ್ಕಾರ ಲಕ್ಷ್ಮಣ ಪ್ರಾಣದಾತ್ರೇ – ಲಕ್ಷ್ಮಣನ ಪ್ರಾಣ ರಕ್ಷಣೆ ಮಾಡಿದ ನಿನಗೆ ನಮಸ್ಕಾರ

............ಮುಂದುವರೆಯುತ್ತದೆ

# ದಾಳಿಂಬೆ ಹಣ್ಣಿನ ಸಿಪ್ಪೆಯನ್ನು ಸುಲಿಯಬಹುದು!

ದಾಳಿಂಬೆ ಸಿಪ್ಪೆ ಸುಲಿಯುವುದು ದೊಡ್ಡ ತಲೆನೋವು ಎಂದರೂ ತಪ್ಪಾಗಲಾರದು ಇದೇ ಕಾರಣಕ್ಕೆ ಹೆಚ್ಚಿನವರು ಈ ಹಣ್ಣಿನ ಸಹವಾಸವೇ ಬೇಡ ಎಂದು ದೂರ ನಿಲ್ಲುತ್ತಾರೆ. ಆದರೆ ಕೆಲವೊಂದು ಈಸಿಯಾಗಿರುವ ಟ್ರಿಕ್ಸ್ ಅನ್ನು ಅನುಸರಿಸಿದರೆ, ಬಹಳ ಸುಲಭವಾಗಿ ಈ ಹಣ್ಣಿನ ಸಿಪ್ಪೆಯನ್ನು ತೆಗೆಯಲು ನೆರವಾಗುತ್ತದೆ.

ಕೆಂಪಗೆ ಮುತ್ತಿನಂತಿರುವ ಬೀಜಗಳನ್ನು ಒಳಗೊಂಡಿರುವ ದಾಳಿಂಬೆ ಹಣ್ಣು ಸೃಷ್ಟಿಯ ಅದ್ಭುತ ಎಂದೇ ಹೇಳಬಹುದು.

ಬೆಲೆಯಲ್ಲಿ ದುಬಾರಿ ಎನ್ನುವ ಒಂದೇ ಕಾರಣ ಬಿಟ್ಟರೆ, ಮತ್ತು ಈ ಹಣ್ಣಿನಲ್ಲಿ ಬೆಟ್ಟದಷ್ಟು ಪ್ರಯೋಜನಗಳು ಅಡಗಿವೆ ಎಂದರೂ ತಪ್ಪಾಗಲಾರದು. ಹೀಗಾಗಿ ಈ ಹಣ್ಣನ್ನು ಔಷಧೀಯ ಖಜಾನೆ ಎಂದೂ ಕರೆಯಲಾಗುತ್ತದೆ. ಇನ್ನು ಈ ಹಣ್ಣಿನ ಬೀಜಗಳನ್ನು ಹಾಗೆಯೇ ಕೂಡ ತಿನ್ನಬಹುದು ಅಥವಾ ಜ್ಯೂಸ್ ರೀತಿ ಮಾಡಿಯೂ ಕೂಡ ಕುಡಿಯಬಹುದು. ಪ್ರಮುಖವಾಗಿ ಈ ಹಣ್ಣಿನಲ್ಲಿ ಹಲವಾರು ಬಗೆಯ ಪೌಷ್ಟಿಕ ಸತ್ವಗಳ ಜೊತೆಗೆ ವಿವಿಧ ಬಗೆಯ ವಿಟಮಿನ್ಸ್ ಅಂಶಗಳು ಕೂಡ ಸಿಗುವುದರಿಂದ ದೇಹದ ಆರೋಗ್ಯಕ್ಕೆ ಇದು ತುಂಬಾ ಒಳ್ಳೆಯದು. ಅದರಲ್ಲೂ ಬಿಪಿ ಸಮಸ್ಯೆ ಇರುವವರಿಗೆ ಈ ಹಣ್ಣಿನಿಂದ ಬಹಳಷ್ಟು ಲಾಭಗಳಿವೆ. ಎಲ್ಲಾಕ್ಕಿಂತ ಮುಖ್ಯವಾಗಿ ಹೃದಯದ ಆರೋಗ್ಯ ಕಾಪಾಡುವಲ್ಲಿ ಈ ಹಣ್ಣಿನ ಪಾತ್ರ ಮರೆಯುವ ಹಾಗಿಲ್ಲ. ಪ್ರಸ್ತುತ ಇಂದಿನ ಲೇಖನದಲ್ಲಿ ದಾಳಿಂಬೆ ಸಿಪ್ಪೆಯನ್ನು ಈಸಿಯಾಗಿ ಹಣ್ಣಿನ ಸಿಪ್ಪೆ ಸುಲಿದು, ಸುಲಭವಾಗಿ ಬೀಜಗಳನ್ನು ಬೇರ್ಪಡಿಸುವ ಸಿಂಪಲ್ ಟ್ರಿಕ್ಸ್ ಬಗ್ಗೆ ನೋಡೋಣ ಬನ್ನಿ

**ದಾಳಿಂಬೆ ಹಣ್ಣಿನ ಸಿಪ್ಪೆ ಸುಲಿಯುವ ಟಾಸ್ಕ್**



ದಾಳಿಂಬೆ ಹಣ್ಣಿನಲ್ಲಿ ಸಾಕಷ್ಟು ಆರೋಗ್ಯಕಾರಿ ಪ್ರಯೋಜನಗಳು ಕಂಡು ಬಂದರೂ ಕೂಡ, ಈ ಹಣ್ಣಿನ ಸಿಪ್ಪೆ ಸುಲಿಯುವುದು ತುಂಬಾನೇ ತ್ರಾಸದಾಯವಾಗಿರುವ ಕಾರಣ, ನಮ್ಮಲ್ಲಿ ಬಹುತೇಕ ಜನರು ಈ ಹಣ್ಣಿನ ಸಹವಾಸವೇ ಬೇಡ ಎಂದು ದೂರ ನಿಲ್ಲುತ್ತಾರೆ ಸಾಮಾನ್ಯವಾಗಿ ಈ ಹಣ್ಣಿನಲ್ಲಿ ಸಿಪ್ಪೆ ದಪ್ಪವಾಗಿರುವುದರಿಂದ, ಬೀಜಗಳುಸೂಕ್ಷ್ಮವಾಗಿರುವುದರಿಂದ ಮತ್ತು ಬಿಳಿ ಪೊರೆಯಲ್ಲಿ ಬಿಗಿಯಾಗಿ ಸುತ್ತುವರೆದಿರುವುದರಿಂದ, ಮತ್ತು ಅವುಗಳನ್ನು ಸುಲಭವಾಗಿ ಬೇರ್ಪಡಿಸುವುದು ಸಮಯ ತೆಗೆದುಕೊಳ್ಳುತ್ತದೆ ಜೊತೆಗೆ ಅಷ್ಟು ಈಸಿಯಾಗಿ ಸಿಪ್ಪೆಯನ್ನು ಸುಲಿಯಲು ಕೂಡ ಆಗುವುದಿಲ್ಲ

ಕೆಲವೊಮ್ಮೆ ಒತ್ತಡ ಹಾಕಿ ಸಿಪ್ಪೆ ಸುಲಿಯಲು ಹೋದರೆ ಹಲವು ಬಾರಿ ಬೀಜಗಳು ಸಿಡಿಯುತ್ತವೆ, ರಸ ಚೆಲ್ಲುತ್ತವೆ, ಕೈಗಳು ಕೆಂಪು ಬಣ್ಣಕ್ಕೆ ತಿರುಗುತ್ತವೆ ಮತ್ತು ಅಡುಗೆ ಮನೆ ಕೊಳಕಾಗುತ್ತದೆ,ಅದಕ್ಕಾಗಿಯೇ

ಅನೇಕ ಜನರು ದಾಳಿಂಬೆ ಹಣ್ಣಿನಿಂದ ದೂರ ನಿಲ್ಲುತ್ತಾರೆ. ಆದರೆ ವಾಸ್ತವವಾಗಿ, ದಾಳಿಂಬೆಯನ್ನು ಸುಲಿಯುವಾಗ ಕೆಲವೊಂದು ಟ್ರಿಕ್ಸ್ ಅನುಸರಿಸಿ

**ದಾಳಿಂಬೆ ಬೀಜಗಳು ದಪ್ಪವಾದ ಹೊರ ಸಿಪ್ಪೆಯಲ್ಲಿ ಸುತ್ತಿರುತ್ತವೆ ಮತ್ತು ಒಳಗೆ ಬಿಳಿ ಪೊರೆಯನ್ನು ಹೊಂದಿರುತ್ತವೆ. ಈ ಬೀಜಗಳನ್ನು ಸರಳವಾಗಿ ಬೇರ್ಪಡಿಸಿ ದಾಗ ಸಿಡಿದು ರಸ ಬಿಡುಗಡೆಯಾಗುತ್ತದೆ. ಆದ್ದರಿಂದ ಸಾಂಪ್ರದಾಯಿಕ ರೀತಿಯಲ್ಲಿ ಅವುಗಳನ್ನು ಸಿಪ್ಪೆ ಸುಲಿದಾಗ...**

- **ಕಾಳುಗಳು ಒಡೆಯುತ್ತವೆ.**
- **ಕೆಂಪು ರಸವು ಕೈಗಳಿಗೆ ಬರುತ್ತದೆ.**
- **ಇದು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ.**
- **ಇದು ಒಂದು ತ್ರಾಸದಾಯಕ ವಿಧಾನದಂತೆ ತೋರುತ್ತದೆ.**

ಕೊಂಡು ಹೋದರೆ, ಈಸಿಯಾಗಿ ಸಿಪ್ಪೆ ಸುಲಿಯಲು ನೆರವಾಗುತ್ತದೆ

**ದಾಳಿಂಬೆ ಬೀಜಗಳನ್ನು ಬಿಡಿಸುವುದು ಹೇಗೆ?:** ಈ ವಿಧಾನವು ಪ್ರಪಂಚದಾದ್ಯಂತ ಜನಪ್ರಿಯವಾಗಿದೆ. ಅನೇಕ ಪ್ರಸಿದ್ಧ ಅಡುಗೆಯವರು ಮತ್ತು ಅಡುಗೆ ತಜ್ಞರು ಸಹ ಈ ವಿಧಾನವನ್ನು ಶಿಫಾರಸು ಮಾಡುತ್ತಾರೆ. ಮಾರುಕಟ್ಟೆಯಿಂದ ತಂದ ದಾಳಿಂಬೆಗಳು ಧೂಳು ಅಥವಾ ರಾಸಾಯನಿಕ ಗಳಿಂದ ತುಂಬಿರಬಹುದು. ಆದ್ದರಿಂದ ಮೊದಲು ಅವುಗಳನ್ನು ಶುದ್ಧ ನೀರಿನಿಂದ ತೊಳೆಯಿರಿ. ದಾಳಿಂಬೆಯ ಮೇಲಿರುವ ಸಣ್ಣ ಕಿರೀಟದಂತಹ ಭಾಗವನ್ನು ನಿಧಾನವಾಗಿ ಕತ್ತರಿಸಿ. ಇದು ಆಂತರಿಕ ರಚನೆಯನ್ನು ಗುರುತಿಸಲು ಮತ್ತು ಸರಿಯಾದ ಕಟ್ ಮಾಡಲು ಸಹಾಯ ಮಾಡುತ್ತದೆ.

# ಸೀಬೆಹಣ್ಣಿನ ಉಪಯೋಗಗಳು

ಇದೊಂದು ಉತ್ಕೃಷ್ಟವಾದಹಣ್ಣು. ಇದನ್ನು ಬಡವರಸೇಬುಅಂದರೂ ತಪ್ಪಾಗಲಿಕ್ಕಿಲ್ಲ. ಇದು ಉಷ್ಣ ಪ್ರದೇಶಹಾಗೂ ಸಮಶೀತೋಷ್ಣ ಪ್ರದೇಶದಲ್ಲಿ ಬೆಳೆಯುವಹಣ್ಣು. ಶೀತಗುಣ ಉಳ್ಳದ್ದು ಹಾಗೂ ರುಚಿಕರವಾದದ್ದು, ಉಷ್ಣ ಪ್ರಕೃತಿಯವರಿಗೆ ಹಾಗೂ ಪಿತ್ತ ಪ್ರಕೃತಿಯ ದೇಹವಿರುವವರಿಗೆ ಇದು ಉತ್ತಮ ಆಹಾರ.ವಾತ ಪ್ರಕೃತಿಯವರಿಗೆ ಇದರ ಬೀಜ ಸೇವನೆಯಿಂದ ಹೊಟ್ಟೆನೋವು ಬರುವ ಸಾಧ್ಯತೆ ಇರುವುದರಿಂದ ಯಾರಾದರೂ ಅಲ್ಪ ಸೇವನೆ ಮಾಡುವುದು ಉತ್ತಮ. ಇದರ ಬೇರು, ಎಲೆ, ಹೂ, ಹಣ್ಣುಗಳು ಬಹುಉಪಯುಕ್ತ. ಇದರಲ್ಲಿಜೀವಸತ್ವಗಳಾದ ಎ, ಸಿ, ಇ, ಕೆ, ಸೋಡಿಯಂ, ಪೊಟ್ಯಾಶಿಯಂ, ಕ್ಯಾಲ್ಸಿಯಂ, ತಾಮ್ರ, ಕಬ್ಬಿಣ, ಮೆಗ್ನೆಷಿಯಂ, ನಿಯೋಸಿನ್ ಎಂಬಪೋಷಕಾಂಶಗಳು ಇವೆ.




**ಕಣ್ಣಿನ ಸಮಸ್ಯೆಗೆ:** ಸೀಬೆ ಗಿಡದ ಹೂ ಹಾಗೂ ದಾಳಿಂಬೆ ಚಿಗುರು ಎರಡರ ರಸವನ್ನು ತೆಗೆದು ಕಣ್ಣಿಗೆ 2-2 ಹನಿ ಹಾಕುವುದರಿಂದ ಕಣ್ಣುನೋವು, ಕಣ್ಣು ಕೆಂಪಾಗುವಿಕೆ ಕಡಿಮೆ ಆಗುತ್ತದೆ.

**ಪಿತ್ತದ ವಿಕಾರಗಳಿಗೆ :** ಸೀಬೆ ಹೂ,ಗುಲಾಬಿಹೂ, ಲಾವಂಚ, ಏಲಕ್ಕಿ 2 ಲವಂಗ 2, ಸೇರಿಸಿ ನೀರಿನಲ್ಲಿ ಅರೆದು ಶೋಧಿಸಿ ಸಕ್ಕರೆ, ನಿಂಬೆರಸ ಹಾಕಿ ಕುಡಿಯುವುದರಿಂದ ಪಿತ್ತದ ವಿಕಾರಗಳಾದ ಹೊಟ್ಟೆ ಉರಿ, ಬಾಯಾರಿಕೆ ಎಲ್ಲವೂ ಶಮನವಾಗುತ್ತದೆ. **ಪಿತ್ತದ ಗಂಧೆಗಳು:** ಇದಕ್ಕೆ ಸೀಬೆಯ ಚಿಗುರೆಲೆ ಮತ್ತು ಚೆಟ್ಟುಮೊಸರಿನಲ್ಲಿ ಅರೆದು ಲೇಪಿಸಿ. **ಮಲಬದ್ದತೆಗೆ:** ಇದರಲ್ಲಿನಾರಿನಂಶ ಅಧಿಕವಾಗಿರುವುದರಿಂದ ಆಹಾರವು ಜೀರ್ಣವಾಗುವುದಲ್ಲದೆ, ಮಲಬದ್ಧತೆಯು ನಿವಾರಣೆಯಾಗುತ್ತದೆ.ಊಟದ ನಂತರ ಸೇವಿಸಬೇಕು.

**ಅತಿಸಾರ:** ಎಳೆಸೀಬೆಕಾಯಿಯನ್ನು ಹೋಳುಮಾಡಿ ನೀರಿನಲ್ಲಿ ಹಾಕಿ ಚೆನ್ನಾಗಿ ಕುದಿಸಿ, ಕಷಾಯ ಮಾಡಿ ಮಜ್ಜಿಗೆಯೊಡನೆ ಸೇವಿಸಬೇಕು. **ಆಮಶಂಕೆ:** ಸೀಬೆಗಿಡದ ಚಿಗುರೆಲೆಗಳನ್ನು ನೀರಿನಲ್ಲಿ ಹಾಕಿ ಕುದಿಸಿ ಶೋಧಿಸಿ, ಆರಿದ ನಂತರ ಮಜ್ಜಿಗೆ ಬೆರೆಸಿ ಕುಡಿದರೆ ಆಮಶಂಕೆ ನಿವಾರಣೆಯಾಗುತ್ತದೆ.

# ಬೆಳಗ್ಗೆ ಎದ್ದ ತಕ್ಷಣ ಸುಕ್ಕು ಕಾಫಿ ಕುಡಿಬೇಕು ಅಂತಿದ್ದಾರೆ ಸದ್ಗುರು



ಬೆಳಗ್ಗೆ ಎದ್ದ ತಕ್ಷಣ ಒಣ ಶುಂಠಿ ಹಾಗೂ ಕೊತ್ತಂಬರಿ ಬೀಜಗಳಿಂದ ತಯಾರಿಸಲಾದ ಕಾಫಿ ಕುಡಿಯಬೇಕು ಎನ್ನುತ್ತಾರೆ ಸದ್ಗುರು. ಏನಿದು ಸುಕ್ಕು ಕಾಫಿ, ಇದರ ಪ್ರಯೋಜನಗಳ ಬಗ್ಗೆ ತಿಳಿಯೋಣ. ಸದ್ಗುರುಗಳು ಯಾವಾಗಲೂ ಆರೋಗ್ಯಕರ ಆಹಾರ ಮತ್ತು ಸರಳ ಮತ್ತು ಶಾಂತಿಯುತ ಜೀವನವನ್ನು ನಡೆಸುವ ಬಗ್ಗೆ ಮಾತನಾಡುತ್ತಾರೆ. ಇದೆಲ್ಲವೂ ನಿಧಾನ ಮತ್ತು ಆರೋಗ್ಯಕರ ಬೆಳಗಿನ ದಿನಚರಿಯೊಂದಿಗೆ ಪ್ರಾರಂಭವಾಗುತ್ತದೆ. ಬೆಳಿಗ್ಗೆ ಖಾಲಿ ಹೊಟ್ಟೆಗೆ ಸೇವಿಸಬಹುದಾದ ಅನೇಕ ಪಾನೀಯಗಳಿದ್ದರೂ, ಸದ್ಗುರು ಬೆಳಿಗ್ಗೆ ಸುಕ್ಕು ಕಾಫಿ ಎಂದೂ ಕರೆಯಲ್ಪಡುವ ಶುಂಠಿ ಕೊತ್ತಂಬರಿ ಕಾಫಿಯನ್ನು ಸೇವಿಸಲು ಸೂಚಿಸುತ್ತಾರೆ. ಸುಕ್ಕು ಕಾಫಿ ಎಂಬುದು ಕಾಫಿ ಬೀಜಗಳಿಂದಲ್ಲ, ಬದಲಾಗಿ ಒಣ ಶುಂಠಿಯಿಂದ (ಸುಕ್ಕು) ತಯಾರಿಸಲಾದ ಸಾಂಪ್ರದಾಯಿಕ ದಕ್ಷಿಣ ಭಾರತದ ಗಿಡಮೂಲಿಕೆ ಪಾನೀಯವಾಗಿದೆ.

**ಕೆಫೀನ್-ಮುಕ್ತ ಕಷಾಯ:** ಸುಕ್ಕು ಕಾಫಿ ಇದು ತಮಿಳುನಾಡು, ಕೇರಳ ಮತ್ತು ಕರ್ನಾಟಕದ ಕೆಲವು ಭಾಗಗಳಲ್ಲಿ ಜನಪ್ರಿಯವಾಗಿರುವ ಕೆಫೀನ್ -ಮುಕ್ತ ಕಷಾಯವಾಗಿದೆ, ಇದು ಉಷ್ಣತೆ, ಗುಣಪಡಿಸುವ ಗುಣಗಳಿಗೆ ಹೆಸರುವಾಸಿಯಾಗಿದೆ. ಒಣ ಶುಂಠಿಯನ್ನು ನೀರು, ಮೆಣಸು, ಕೊತ್ತಂಬರಿ ಬೀಜಗಳು, ತಾಳೆ ಬೆಲ್ಲ ಅಥವಾ ಬೆಲ್ಲ ಮತ್ತು ಕೆಲವೊಮ್ಮೆ ತುಳಸಿ ಅಥವಾ ಏಲಕ್ಕಿಯೊಂದಿಗೆ ಕುದಿಸಲಾಗುತ್ತದೆ. ಇದು ಜೀರ್ಣಕ್ರಿಯೆಯನ್ನು ಹೆಚ್ಚಿಸುವ, ದಟ್ಟಣೆಯನ್ನು ನಿವಾರಿಸುವ ಮತ್ತು ದೇಹವನ್ನು ನೈಸರ್ಗಿಕವಾಗಿ ಚೈತನ್ಯಗೊಳಿಸುವ ಹಿತವಾದ ಪಾನೀಯವಾಗಿದೆ.

**ಸುಕ್ಕು ಕಾಫಿ ತಯಾರಿಸುವುದು ಹೇಗೆ?:** ಬೇಕಾದ ಪದಾರ್ಥಗಳು: 4 ಕಪ್ ನೀರು, 2 ಇಂಚು ಶುಂಠಿ, 4 ಟೀಸ್ಪೂನ್ ಕೊತ್ತಂಬರಿ ಬೀಜಗಳು ಮತ್ತು ರುಚಿಗೆ ತಕ್ಕಷ್ಟು ತಾಳೆ ಬೆಲ್ಲ?

**ವಿಧಾನ:** 4 ಕಪ್ ನೀರನ್ನು ಕುದಿಸಿ. ಶುಂಠಿ ಮತ್ತು ಕೊತ್ತಂಬರಿ ಬೀಜಗಳನ್ನು ಸೇರಿಸಿ, ಕಡಿಮೆ ಶಾಖದಲ್ಲಿ 3 ರಿಂದ 4 ನಿಮಿಷಗಳ ಕಾಲ ಕುದಿಸಿ. ಒಲೆಯಿಂದ ಇಳಿಸಿದ ನಂತರ ಅದಕ್ಕೆ ತಾಳೆ ಬೆಲ್ಲವನ್ನು ಸೇರಿಸಿ ಮತ್ತು ಅದು ಕರಗುವವರೆಗೆ ಬೆರೆಸಿ. ಬಿಸಿಯಾಗಿರುವಾಗಲೇ ಕುಡಿಯಿರಿ.

**ಕೊತ್ತಂಬರಿ ಬೀಜಗಳ ಬಗ್ಗೆ ಅಧ್ಯಯನವು ಏನು ಹೇಳುತ್ತದೆ?:** ಕೊರಿಯಾಂಡ್ರಮ್ ಸ್ಯಾಟಿವಮ್ ಎಲ್ ಎ ರಿವ್ಯೂ ಆನ್ ಎಥ್ನೋಫಾರ್ಮಕಾಲಜಿ, ಫೈಟೊಕೆಮಿಸ್ಟ್ರಿ ಮತ್ತು ಕಾರ್ಡಿಯೋವಾಸ್ಕುಲರ್ ಬೆನಿಫಿಟ್ಸ್ ಎಂಬ ಶೀರ್ಷಿಕೆಯ ಅಧ್ಯಯನದ ಪ್ರಕಾರ, ಕೊತ್ತಂಬರಿ ಬೀಜಗಳನ್ನು ಕ್ರಿಯಾತ್ಮಕ ಆಹಾರವೆಂದು ಪರಿಗಣಿಸಬಹುದು. ಏಕೆಂದರೆ ಅದರ ವ್ಯಾಪಕ ಶ್ರೇಣಿಯ ಹೃದಯರಕ್ತನಾಳದ ಪ್ರಯೋಜನಗಳಾದ ಆಂಟಿಹೈಪರ್ಟೆನ್ಸಿವ್, ಆಂಟಿ-ಅಥೆರೋಜೆನಿಕ್, ಆಂಟಿಅರಿಥಮಿಕ್, ಹೈಪೋಲಿಪಿಡೆಮಿಕ್ ಹಾಗೂ ಹೃದಯರಕ್ತನಾಳದ ರಕ್ಷಣಾತ್ಮಕ ಪರಿಣಾಮಗಳು. ಈ ಬೀಜಗಳು ಹೊಟ್ಟೆ ಉಬ್ಬುವುದು, ಅಜೀರ್ಣ, ಹೊಟ್ಟೆ ನೋವು ಮತ್ತು ಅನಿಲದಂತಹ ಸಾಮಾನ್ಯ ಜೀರ್ಣಕಾರಿ ಕಾಯಿಲೆಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ. ಕೊತ್ತಂಬರಿ ಬೀಜಗಳಲ್ಲಿನ ಹೆಚ್ಚಿನ ನಾರಿನ ಅಂಶವು ಸೌಮ್ಯವಾದ ವಿರೇಚಕವಾಗಿ ಕಾರ್ಯನಿರ್ವಹಿಸುತ್ತದೆ, ನಿಯಮಿತ ಕರುಳಿನ ಚಲನೆಯನ್ನು ಉತ್ತೇಜಿಸುತ್ತದೆ ಮತ್ತು ಮಲಬದ್ಧತೆಯ ಸಮಸ್ಯೆಯನ್ನು ಕಡಿಮೆ ಮಾಡುತ್ತದೆ.

**ತಾಳೆ ಬೆಲ್ಲದ ಪ್ರಯೋಜನಗಳು:** ಇದು ಕಬ್ಬಿಣ, ಮೆಗ್ನೀಸಿಯಮ್, ಕ್ಯಾಲ್ಸಿಯಂ ಮತ್ತು ಪೊಟ್ಯಾಸಿಯಮ್‌ನಂತಹ ಅಗತ್ಯ ಖನಿಜಗಳನ್ನು ಹೊಂದಿರುತ್ತದೆ, ಇವುಗಳನ್ನು ಹೆಚ್ಚಾಗಿ ಸಂಸ್ಕರಿಸಿದ ಸಕ್ಕರೆಯಿಂದ ತೆಗೆದುಹಾಕಲಾಗುತ್ತದೆ. ತಾಳೆ ಬೆಲ್ಲವು ಜೀವಕೋಶಗಳನ್ನು ಹಾನಿಯಿಂದ ರಕ್ಷಿಸುವ ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿದೆ. ಇದು ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ ಮತ್ತು ಅಜೀರ್ಣ ಮತ್ತು ಮಲಬದ್ಧತೆಯಂತಹ ಸಮಸ್ಯೆಗಳಿಗೆ ಸಹಾಯ ಮಾಡುತ್ತದೆ. ಇದು ಕರುಳಿನ ಆರೋಗ್ಯವನ್ನು ಉತ್ತೇಜಿಸುವ ಪ್ರೋಬಯಾಟಿಕ್ ಗುಣಗಳನ್ನು ಸಹ ಹೊಂದಿದೆ.

## ಶುಂಠಿಯ ಔಷಧೀಯ ಗುಣಗಳು



**ಆಯುರ್ವೇದ ವೈದ್ಯರು ಶುಂಠಿಯನ್ನು ಪ್ರಬಲ ಜೀರ್ಣಕಾರಿ ಸಹಾಯಕವಾಗಿ ಸೂಚಿಸುತ್ತಾರೆ ಏಕೆಂದರೆ ಇದು ಜೀರ್ಣಕಾರಿ ಬೆಂಕಿಯನ್ನು ಉತ್ತೇಜಿಸುತ್ತದೆ, ಹಸಿವನ್ನು ಹೆಚ್ಚಿಸುತ್ತದೆ ಮತ್ತು ದೇಹದ ಸೂಕ್ಷ್ಮ ರಕ್ತಪರಿಚಲನಾ ಮಾರ್ಗಗಳನ್ನು ತೆರವುಗೊಳಿಸುತ್ತದೆ. ದೊಡ್ಡ ಊಟದ ನಂತರ ಶುಂಠಿ ಚಹಾವನ್ನು ಕುಡಿಯುವುದು ಸಹ ಸಹಾಯಕವಾಗಿದೆ. ಹೊಟ್ಟೆ ಉಬ್ಬರ ಮತ್ತು ವಾಯು. ನಿಮ್ಮ ಹೊಟ್ಟೆಯ ಸಮಸ್ಯೆಗಳು ಹೆಚ್ಚು ತೀವ್ರವಾಗಿದ್ದರೆ, ಆಹಾರ ವಿಷದ ವಿವಿಧ ಲಕ್ಷಣಗಳನ್ನು ನಿವಾರಿಸಲು ನೀವು ಶುಂಠಿಯನ್ನು ಸಹ ತೆಗೆದುಕೊಳ್ಳಬಹುದು. ಗರ್ಭಿಣಿ ಮಹಿಳೆಯರಲ್ಲಿ ಬೆಳಗಿನ ಬೇನೆ, ಪ್ರಯಾಣಿಕರಲ್ಲಿ ಚಲನೆಯ ಬೇನೆ ಮತ್ತು ಕಿಮೊಥೆರಪಿ ರೋಗಿಗಳಲ್ಲಿ ವಾಕರಿಕೆ ಸೇರಿದಂತೆ ವಿವಿಧ ರೀತಿಯ ವಾಕರಿಕೆ ಮತ್ತು ವಾಂತಿಯನ್ನು ಕಡಿಮೆ ಮಾಡಲು ಶುಂಠಿ ತುಂಬಾ ಒಳ್ಳೆಯದು ಎಂದು ಅವರು ಹೇಳುತ್ತಾರೆ. ಶುಂಠಿಯು ಜಿಂಜರಾಲ್ ಎಂಬ ಅತ್ಯಂತ ಪ್ರಬಲವಾದ ಉರಿಯೂತದ ಸಂಯುಕ್ತವನ್ನು ಹೊಂದಿದೆ, ಇದು ಕೀಲು ಮತ್ತು ಸ್ನಾಯು ನೋವನ್ನು ನಿವಾರಿಸಲು ಕಾರಣವಾಗಿದೆ.**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ:** ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ ಮತ್ತು ನೀವು ಇದನ್ನು ಬಾಕಿಯಿರುವ ಕೆಲಸಗಳನ್ನು ಪೂರ್ಣಗೊಳಿಸಲು ಬಳಸಬೇಕು. ನೀವು ಹಣಕಾಸಿನ ಲಾಭತರುವ ಅದ್ಭುತವಾದ ಹೊಸ ಕಲ್ಪನೆಗಳನ್ನು ಪ್ರಸ್ತುತಪಡಿಸುತ್ತೀರಿ.

**ವೃಷಭ:** ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ. ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ.

**ಮಿಥುನ:** ರಕ್ತದೊತ್ತಡವಿರುವ ರೋಗಿಗಳು ತಮ್ಮ ರಕ್ತದೊತ್ತಡ ಕಡಿಮೆ ಮಾಡಲು ಮತ್ತು ಕೊಲೆಸ್ಟ್ರಾಲ್ ನಿಯಂತ್ರಣದಲ್ಲಿರಿಸಲು ಕೆಂಪು ವೈನ್ ತೆಗೆದುಕೊಳ್ಳಬಹುದು. ಇದು ಅವರಿಗೆ ಮತ್ತಷ್ಟು ವಿಶ್ರಾಂತಿ ತರುತ್ತದೆ.

**ಕರ್ಕಾಟಕ:** ಕೆಲವು ಕುಟುಂಬದ ಸದಸ್ಯರು ತಮ್ಮ ಅಸೂಯೆಯ ವರ್ತನೆಯಿಂದ ನಿಮಗೆ ಕಿರಿಕಿರಿ ಮಾಡಬಹುದು. ಆದರೆ ತಾಳ್ಮೆ ಕಳೆದುಕೊಳ್ಳುವುದು ಬೇಡ. ಇಲ್ಲದಿದ್ದರೆ ಪರಿಸ್ಥಿತಿ ನಿಯಂತ್ರಣ ಮೀರಬಹುದು.

**ಸಿಂಹ:** ನಿಮ್ಮ ಸ್ನೇಹಿತರು ನಿಮಗೆ ಅವರ ಅವಶ್ಯಕತೆ ಅತ್ಯಂತ ಹೆಚ್ಚಿದ್ದಾಗ ನಿಮ್ಮನ್ನು ನಿರಾಸೆಗೊಳಿಸಬಹುದು. ನಿಮ್ಮ ಹೃದಯಕ್ಕೆ ಪ್ರಿಯವಾಗುವ ಯಾರನ್ನಾದರೂ ಸಂಧಿಸುವ ಅವಕಾಶಗಳು ಇಂದು ಬಲವಾಗಿವೆ.

**ಕನ್ಯಾ:** ನಿಮ್ಮ ಒತ್ತಡ ನಿವಾರಿಸಲು ಕುಟುಂಬದ ಸದಸ್ಯರ ಬೆಂಬಲ ಪಡೆಯಿರಿ. ಅವರ ಸಹಾಯವನ್ನು ಗೌರವದಿಂದ ಸ್ವೀಕರಿಸಿ. ನೀವು ಭಾವನೆಗಳು ಮತ್ತು ಒತ್ತಡಗಳನ್ನು ಒಳಗೆ ಅದುಮಿಡಬಾರದು.

**ತುಲಾ:** ಸಂತಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತವೆ. ಹೂಡಿಕೆ ಮಾಡುವುದು ಅನೇಕ ಬಾರಿ ನಿಮಗೆ ಪ್ರಯೋಜನಕಾರಿಯೆಂದು ಸಾಬೀತುಪಡಿಸುತ್ತದೆ.

**ವೃಶ್ಚಿಕ:** ಸಂತೃಪ್ತಿಯ ಜೀವನಕ್ಕಾಗಿ ನಿಮ್ಮ ಮಾನಸಿಕ ದೃಢತೆಯನ್ನು ಸುಧಾರಿಸಿ. ಹಣವನ್ನು ಬೆಟ್ಟಿಂಗ್‌ನಲ್ಲಿ ಖರ್ಚು ಮಾಡಿದವರು ಇಂದು ನಷ್ಟ ಅನುಭವಿಸುವ ಸಾಧ್ಯತೆಯಿದೆ. ಬೆಟ್ಟಿಂಗ್‌ನಿಂದ ದೂರವಿರಲು ನಿಮಗೆ ಸೂಚಿಸಲಾಗಿದೆ.

**ಧನಸ್ಸು:** ನೀವು ಹೇರಳ ಶಕ್ತಿಯನ್ನು ಹೊಂದಿರುತ್ತೀರಿ. ಕೆಲಸದ ಒತ್ತಡ ನಿಮ್ಮನ್ನು ಉದ್ರಿಕ್ತಗೊಳಿಸುವಂತೆ ತೋರುತ್ತದೆ. ಇಂದು ನೀವು ನಿಮ್ಮ ಮನೆಯ ಸದಸ್ಯರನ್ನು ಎಲ್ಲಿಗಾದರೂ ಸುತ್ತಾಡಲು ಕರೆದುಕೊಂಡು ಹೋಗಬಹುದು.

**ಮಕರ:** ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು ಮತ್ತು ನೀವು ಹಣದಿಂದ ಲಾಭ ಪಡೆಯಬಹುದು.

**ಕುಂಭ:** ಪ್ರಭಾವಿ ಮತ್ತು ಪ್ರಮುಖ ಜನರೊಡನೆ ನಿಮ್ಮ ಬಾಂಧವ್ಯವನ್ನು ಸುಧಾರಿಸಲು ಒಂದು ಪರಿಪೂರ್ಣ ಅವಕಾಶವಾಗಿರುತ್ತದೆ. ಪ್ರೀತಿಯ ಸಂಕಟವನ್ನು ಎದುರಿಸುವ ಸಾಧ್ಯತೆಗಳು ಇಂದು ಹೆಚ್ಚಿವೆ.

**ಮೀನ:** ಸ್ನೇಹಿತನ ಜೊತೆಗಿನ ನಿಮ್ಮ ಅಪಾರ್ಥ ಕೆಲವು ಅಹಿತಕರ ಪ್ರತಿಕ್ರಿಯೆಗಳನ್ನು ಉಂಟುಮಾಡಬಹುದು – ಯಾವುದೇ ನಿರ್ಧಾರ ಕೈಗೊಳ್ಳುವ ಮೊದಲು ಸಮತೋಲಿತ ನೋಟ ಹೊಂದಿ.

## ದೈಹಿಕ ಸಾಮರ್ಥ್ಯದಿಂದ ವ್ಯಕ್ತಿತ್ವ ನಿರ್ಮಾಣ: ಶೈನಿ ಗುಂಟಿ

• ಉದಯವಾಹಿನಿ ಬೀದರ್

ಯುವಜನರು ತಮ್ಮ ದೈಹಿಕ ಸಾಮರ್ಥ್ಯ ಪ್ರದರ್ಶಿಸಿದಲ್ಲಿ ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣ ಸಾಧ್ಯವಿದೆ ಎಂದು ಅಕ್ಕಪಡೆ ರಾಜ್ಯ ಸಂಘಟಕಿ ಶೈನಿ ಗುಂಟಿ ತಿಳಿಸಿದರು.

ನಗರದ ಹೊರವಲಯದಲ್ಲಿರುವ ಲಿಂಗರಾಜ ಅಪ್ಪ ಇಂಜಿನಿಯರಿಂಗ್ ಕಾಲೇಜು ಕ್ಯಾಂಪಸ್‌ನಲ್ಲಿರುವ ಶ್ರೀ ಶರಣಬಸವೇಶ್ವರ ಪಬ್ಲಿಕ್ ಸ್ಕೂಲ್ ಅವರಣದಲ್ಲಿ ಮೇರಾ ಯುವ ಭಾರತ ಇಲಾಖೆ ಹಾಗೂ ಮಂಗಲಾ ಮಹಿಳಾ ಗ್ರಾಮೀಣಾಭಿವೃದ್ಧಿ ಸಂಸ್ಥೆಗಳ ಸಹಯೋಗದಲ್ಲಿ ಜರುಗಿದ ತಾಲ್ಲೂಕು ಮಟ್ಟದ ಕ್ರೀಡಾಕೂಟ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಯುವಜನರು ಜೀವನದಲ್ಲಿ ವಿದ್ಯೆ ಜೊತೆಗೆ ದೈಹಿಕ ಚಟುವಟಿಕೆಗಳಲ್ಲಿ ನಿತ್ಯ ತೊಡಗಿಕೊಳ್ಳಬೇಕು. ಇದರಿಂದ ಅವರ ಆರೋಗ್ಯ ಸುಧಾರಣೆ ಜೊತೆಗೆ ಸ್ಪರ್ಧಾ ಮನೋಭಾವ ಬೆಳೆಯುತ್ತದೆ. ಹಾಗೇ ಮಾನಸಿಕ ಒತ್ತಡ ನಿವಾರಣೆಯಾಗಿ ಜೀವನದಲ್ಲಿ ಯಶಸ್ಸು ದೊರೆಯುತ್ತದೆ ಎಂದರು.

ಜೀವನದಲ್ಲಿ ಸಾಧನೆ ಮಾಡಲು ಗುರಿ ಮುಖ್ಯ. ಗುರಿ ತಲುಪಲು ಶಿಸ್ತು ಅಗತ್ಯ. ಶಿಸ್ತಿನ ಜೀವನ ಮನುಷ್ಯನಿಗೆ ಎತ್ತರಕ್ಕೆ ಕೊಂಡೊಯ್ದು ನಿಜವಾದ ಸಾಧಕನನ್ನಾಗಿ ನಿಲ್ಲಲು ಇದು ಸಹಕಾರಿಯಾಗುತ್ತದೆ ಎಂದು ಶೈನಿ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ ಚನಶೆಟ್ಟಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಬೀದರ್ ಜಿಲ್ಲೆ ಹಿಂದುಳಿದ ಜಿಲ್ಲೆ ಅಲ್ಲವೇ ಅಲ್ಲ. ಇಲ್ಲಿ ಅನೇಕ ಪ್ರತಿಭೆಗಳಿವೆ. ಎಲ್ಲಾ ಕ್ಷೇತ್ರದಲ್ಲಿ



ಉದಯವಾಹಿನಿ ಚಿತ್ರ

ಸಾಧಕರಿದ್ದಾರೆ. ಅದರಲ್ಲೂ ಕ್ರೀಡಾ ಕ್ಷೇತ್ರದಲ್ಲಿ ಬೀದರ್ ಜಿಲ್ಲೆಯಲ್ಲಿ ಎತ್ತಿದ ಕೈ. ರಾಜ್ಯ ಮಟ್ಟದಲ್ಲಿ ಹಾಗೂ ರಾಷ್ಟ್ರ ಮಟ್ಟದಲ್ಲಿ ಪ್ರತಿಭೆಗಳು ಮಿಂಚುವಂತಾಗಲು ಯುವಜನರು ಇಂಥ ಕಾರ್ಯಗಳಲ್ಲಿ ನಿರಂತರವಾಗಿ ತೊಡಗಿಕೊಳ್ಳುವಂತೆ ಕರೆ ಕೊಟ್ಟರು.

ರೆಡ್ ಕ್ರಾಸ್ ಸಂಸ್ಥೆ ಅಧ್ಯಕ್ಷೆ ಡಾ.ವಿದ್ಯಾ ಪಾಟೀಲ ಗೌರವ ಅತಿಥಿಗಳಾಗಿ ಮಾತನಾಡಿ, ಸ್ಪರ್ಧೆ ಎಂದಾದ ಬಳಿಕ ಸೋಲು, ಗೆಲುವು ಇದ್ದೆ ಇರುತ್ತದೆ. ಗೆಲ್ಲುವ ಹುಮ್ಮಸ್ಸಿದ್ದರೂ ಕೆಲವೊಂದು ಕ್ಷಣ ಸೋಲು ಉಂಟಾಗುತ್ತದೆ. ಆದರೆ ಅದೇ ಮುಂದೊಂದು ದಿನ ಸಾಧನೆಗೆ ಮೆಟ್ಟಿಲಾಗಿ ಪರಿಣಮಿಸುತ್ತದೆ ಎಂಬುದನ್ನು ಮರೆಯಬಾರದೆಂದು ಕಿವಿ ಮಾತು ಹೇಳಿದರು. ಸಾಹಿತಿ ವಿಜಯಲಕ್ಷ್ಮೀ ಕೌಟಗೆ, ಲಿಂಗರಾಜಪ್ಪ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯೆ ವಿನುತಾ ಪ್ರತಾಪುರೆ, ಶರಣಬಸವೇಶ್ವರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಸತೀಶ ಪ್ರತಾಪುರೆ ಮಾತನಾಡಿದರು.

### ನಶಾಮುಕ್ತ ಭಾರತ ಹಾಗೂ ಅಂಗಾಂಗ ದಾನ ಜಾಗೃತಿ ಅಭಿಯಾನ ಮತ್ತು ಜಾಥಾ

## ನಶಾಮುಕ್ತ ಕ್ಯಾಂಪಸ್ ನಮ್ಮ ಗುರಿ: ಡಾ. ಬಿ.ಸಿ.ಭಗವಾನ್

• ಉದಯವಾಹಿನಿ ಚಿತ್ರದುರ್ಗ

ವಿದ್ಯಾರ್ಥಿಗಳಲ್ಲಿ ವ್ಯಸನ ಒಂದು ಸಹಜ ರೂಢಿಯಾಗಿ ರೂಪುಗೊಳ್ಳುತ್ತಿರುವುದು ಕಳವಳದ ವಿಚಾರ. ಇದನ್ನು ಬುಡಸಮೇತ ಕೀಳುವುದು ನಮ್ಮ ಗುರಿ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗ ಡಾ. ಬಿ.ಸಿ. ಭಗವಾನ್ ಹೇಳಿದರು.

**ಬುಡಸಮೇತ ಕೀಳುವುದು ನಮ್ಮ ಗುರಿ**

ನಗರದ ಒನಕೆ ಓಬವ್ವ ವೃತ್ತದಲ್ಲಿ ಬುಧವಾರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಜಿಲ್ಲೆಯ ಸಂಯೋಜಿತ ಕಾಲೇಜುಗಳ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ನಶಾಮುಕ್ತ ಭಾರತ ಹಾಗೂ ಅಂಗಾಂಗ ದಾನ ಜಾಗೃತಿ ಅಭಿಯಾನ ಮತ್ತು ಜಾಥಾ ಕಾರ್ಯಕ್ರಮದಲ್ಲಿ ಮಾತನಾಡಿದರು. ವೈದ್ಯಕೀಯ ಕ್ಷೇತ್ರದ ಇಡೀ ಜಿಲ್ಲೆಯ ಎಲ್ಲಾ ವೃತ್ತಿಪರರು ಹಾಗೂ ವಿದ್ಯಾರ್ಥಿಗಳು ಒಂದೆಡೆ ಸೇರುವುದು, ಒಂದು ಸಾಮಾಜಿಕ ಕಳಕಳಿಯನ್ನಿಟ್ಟುಕೊಂಡು ಒಟ್ಟಾಗಿ ನಡೆಯುವುದು ಹಾಗೂ ಒಂದೇ ಗುರಿಯನ್ನು ಹಂಚಿಕೊಂಡು ಕೆಲಸ ಮಾಡುವುದು ಬಹಳ ದೊಡ್ಡ ಸಂಗತಿ. ವಿದ್ಯಾರ್ಥಿಗಳ, ಅದರಲ್ಲೂ ವೈದ್ಯಕೀಯ ವಿದ್ಯಾರ್ಥಿಗಳ ಶಕ್ತಿ ಹಾಗೂ ಚೈತನ್ಯವನ್ನು ಕಸಿಯುತ್ತಿರುವ ದುಶ್ಚಟಗಳಿಂದ ಅವರನ್ನು ದೂರ ಇಡುವುದು ಹಾಗೂ ನಶಾಮುಕ್ತ ಕ್ಯಾಂಪಸ್, ಆರೋಗ್ಯಪೂರ್ಣ ಯುವ ಕರ್ನಾಟಕವನ್ನು ಕಟ್ಟುವುದು ನಮ್ಮ ಗುರಿ. ಇದಕ್ಕಾಗಿ ಪ್ರತಿ ಜಿಲ್ಲೆಗಳಲ್ಲಿ ಜಾಗೃತಿ ಜಾಥಾಗಳಾನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಅವರು ವಿವರಿಸಿದರು.

ದೇಶದ ಬಹುದೊಡ್ಡ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವಾಗಿರುವ ರಾಜೀವ್ ಗಾಂಧಿ ವಿಶ್ವವಿದ್ಯಾಲಯವು ಪಾಠ, ಪರೀಕ್ಷೆ, ಫಲಿತಾಂಶದಂತಹ ತನ್ನ ಸಾಂಪ್ರದಾಯಿಕ ಜವಾಬ್ದಾರಿಗಳ ಜೊತೆಗೆ ವಿದ್ಯಾರ್ಥಿಗಳ ಭದ್ರ ಭವಿಷ್ಯ ಹಾಗೂ ಆ ಮೂಲಕ ಸ್ವಸ್ಥ ಸಮಾಜದ ಜವಾಬ್ದಾರಿಯನ್ನೂ ನಿರ್ವಹಿಸುತ್ತದೆ.

ವಿದ್ಯಾರ್ಥಿಗಳ ಬಗೆಗೆ, ಅವರ ಕುಟುಂಬ ಹಾಗೂ ಸಮಾಜದ ಬಗೆಗೆ ನಾವು ಹೊಂದಿರುವ ಅದಮ್ಯ ಕಾಳಜಿ ಹಾಗೂ ಕಳಕಳಿಯ ಭಾಗವಾಗಿ ಕಳೆದ ಮೂರು ತಿಂಗಳಿಂದ ಜಿಲ್ಲೆಜಿಲ್ಲೆಗಳಿಗೆ ಸಂಚರಿಸಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ನಮ್ಮ ಎಲ್ಲಾ 1500 ಕಾಲೇಜು ಆವರಣಗಳನ್ನು



ಉದಯವಾಹಿನಿ ಚಿತ್ರ

ನಶಾಮುಕ್ತಗೊಳಿಸುವುದು ಹಾಗೂ ನಮ್ಮ ವೈದ್ಯಕೀಯ ವಿದ್ಯಾರ್ಥಿಗಳಲ್ಲಿ ಅಂಗಾಂಗ ದಾನದ ಬಗ್ಗೆ ತಿಳಿವಳಿಕೆ ಮೂಡಿಸುವುದು ಈ ಕಾರ್ಯಕ್ರಮಗಳ ಉದ್ದೇಶ ಎಂದು ಮಾಹಿತಿ ನೀಡಿದರು.

ಹೊಳಲ್ಕೆರೆ ಶಾಸಕರಾದ ಡಾ. ಎಂ. ಚಂದ್ರಪ್ಪ ಮಾತನಾಡಿ, ವೈದ್ಯಕೀಯ ಹಾಗೂ ನಸಿರ್ ಒಗ್ ಸೇವೆ ಅತ್ಯುತ್ತಮ ಸೇವೆ. ಸಮಾಜದಲ್ಲಿ ಪರಿವರ್ತನೆ ತರುವ ಶಕ್ತಿ ಹಾಗೂ ಅವಕಾಶ ಇರುವುದು ಇದೇ ವೃತ್ತಿಯಲ್ಲಿ. ಇನ್ನೊಂದು ಜೀವ ಉಳಿಸುವ ಅವಕಾಶ ನಿಮ್ಮ ಕೈಯಲ್ಲಿ ಇರುತ್ತದೆ. ಈ ವೃತ್ತಿಯಲ್ಲಿರುವ ನೀವು ಬದ್ಧತೆ ಹಾಗೂ ನಿಷ್ಠೆಯಿಂದ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

**ರಾಜೀವ್ ಗಾಂಧಿ ವಿವಿಯ ಅಪರೂಪದ ಅಭಿಯಾನ -ಬಸವಕುಮಾರ ಸ್ವಾಮಿಗಳು:** ವಿಶ್ವವಿದ್ಯಾಲಯವೊಂದು ಹೀಗೆ ತರಗತಿಯನ್ನು ಬಿಟ್ಟು ರಸ್ತೆಗೆ ಇಳಿದು ಜನಜಾಗೃತಿಯಲ್ಲಿ ತೊಡಗುವುದು ಅಪರೂಪ. ವಿಶ್ವವಿದ್ಯಾಲಯದ ಕುಲಪತಿ ಜಿಲ್ಲೆ ಜಿಲ್ಲೆಯಲ್ಲಿ ತಿರುಗಿ, ವಿದ್ಯಾರ್ಥಿಗಳನ್ನೆಲ್ಲಾ ಒಟ್ಟುಗೂಡಿಸಿಕೊಂಡು ಜಾಗೃತಿ ಜಾಥಾ, ಕಾರ್ಯಕ್ರಮಗಳನ್ನು ಮಾಡುತ್ತಿರುವುದನ್ನು ನಾನು ಇದೇ ಮೊದಲು ನೋಡುತ್ತಿರುವುದು ಎಂದು ಬಸವಕುಮಾರ ಸ್ವಾಮಿಗಳು ಸಂತಸ ವ್ಯಕ್ತಪಡಿಸಿದರು.

**ಅಂಗಾಂಗದಾನ -ಜೀವದಾನ**

ದೇಶದಲ್ಲಿ ಪ್ರತಿ ವರ್ಷ ಸುಮಾರು 17 ಸಾವಿರ ಅಂಗಾಂಗ ಕಸಿ ನಡೆಯುತ್ತಿದೆ. ಆದರೆ, ಅಂಗಾಂಗ ಕಸಿಗಾಗಿ ಕಾಯುತ್ತಿರುವ ರೋಗಿಗಳ ಸಂಖ್ಯೆ 3 ಲಕ್ಷಕ್ಕೂ ಅಧಿಕ ಇದೆ. ಅಂಗಾಂಗ ದಾನ ಇಂದಿನ ತುರ್ತು ಅಗತ್ಯವಾಗಿದ್ದು, ನಾವೆಲ್ಲಾ ಅಂಗಾಂಗ ದಾನ ಪ್ರತಿಜ್ಞೆ ಕೈಗೊಳ್ಳುವ ಮೂಲಕ ಸಾರ್ವಜನಿಕರಲ್ಲೂ ಈ ಬಗ್ಗೆ ತಿಳಿವಳಿಕೆ ಮೂಡಿಸಬೇಕು. ಅಂಗಾಂಗ ದಾನದ ಅವಕಾಶ ಎಲ್ಲರಿಗೂ ಸಿಗುವುದಿಲ್ಲ. ನೀವು ಕೈಗೊಳ್ಳುವ ಒಂದು ಸಣ್ಣ ನಿರ್ಧಾರದಿಂದ ಎಂಟು ಜನರ ಜೀವ ಉಳಿಯಬಲ್ಲದು ಎಂದು ಡಾ. ಬಿ.ಸಿ.ಭಗವಾನ್ ಹೇಳಿದರು.

**"ಆರೋಗ್ಯಕರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ನಿಮ್ಮ ಆರೋಗ್ಯವನ್ನು ನೀವು ಕಾಪಾಡಿಕೊಳ್ಳುವ ಜೊತೆಗೆ ನಿಮ್ಮ ಕುಟುಂಬ, ನಿಮ್ಮ ಸಮಾಜ ಹಾಗೂ ದೇಶದ ಆರೋಗ್ಯವನ್ನು ಕಾಪಾಡಬೇಕು. ಅದಕ್ಕಾಗಿ ಇಂದೇ ನೀವೆಲ್ಲಾ ಪ್ರತಿಜ್ಞೆ ಮಾಡಬೇಕು- ನನ್ನ ತರಗತಿಗಳಲ್ಲಿ, ಕ್ಯಾಂಪಸ್‌ಗಳಲ್ಲಿ ಯಾವುದೇ ವಿಧದ ಮಾದಕ ದ್ರವ್ಯಗಳನ್ನು ಸೇವಿಸುವುದಿಲ್ಲ ಅಥವಾ ಆ ರೀತಿಯ ವಸ್ತುಗಳ ಮಾರಾಟ ಕಂಡುಬಂದರೆ ಸುಮ್ಮನಿರುವುದಿಲ್ಲ ಎಂದು ಪ್ರತಿಯೊಬ್ಬರು ಪ್ರತಿಜ್ಞೆಮಾಡಿ. ನೀವು ಆರೋಗ್ಯವಾಗಿದ್ದರೆ ಸಮಾಜ ಆರೋಗ್ಯವಾಗಿರುತ್ತದೆ. ದೇಶ ಸುಸ್ಥಿತಿಯಲ್ಲಿರುತ್ತದೆ. ಡ್ರಗ್, ಮದ್ಯಪಾನ, ತಂಬಾಕು ಸೇವನೆಯಿಂದ ದೂರ ಇರಿ. ನಿಮ್ಮ ಸ್ನೇಹಿತರೂ ಅತ್ತ ಸುಳಿಯದಂತೆ ನೋಡಿಕೊಳ್ಳಿ**

**-ಡಾ. ಬಿ.ಸಿ.ಭಗವಾನ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ**

ಇಂತಹ ಬದ್ಧತೆಯನ್ನು ಪ್ರತಿಯೊಂದು ವಿವಿಗಳೂ ಪ್ರದರ್ಶಿಸಬೇಕು. ಸಮಾಮುಖಿಯಾಗಿ ಕೆಲಸ ಮಾಡಲು ವಿದ್ಯಾರ್ಥಿಗಳನ್ನು ಪ್ರೇರೇಪಿಸಬೇಕು. ಅಂದಾಗ ಮಾತ್ರ ಸಮಾಜದಲ್ಲಿ ಪರಿವರ್ತನೆ ಸಾಧ್ಯ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್ ಮಾತನಾಡಿದರು. ಚಿತ್ರದುರ್ಗದ ಶಿವಲಿಂಗಾನಂದ ಸ್ವಾಮಿಗಳು, ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಗಳು ಸಾನಿಧ್ಯ ವಹಿಸಿದ್ದರು.

## 1.35 ಕೋಟಿ ರೂ.ಮೌಲ್ಯದ ಅಕ್ಕಿ ವಶ

• ಉದಯವಾಹಿನಿ ಕಲಬುರಗಿ

ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಸೇರಿದ ಅಕ್ಕಿಯನ್ನು ಅಕ್ರಮವಾಗಿ ಕಾಳಸಂತೆಯಲ್ಲಿ ಮಾರಾಟ ಮಾಡಲು ಲಾರಿಯಲ್ಲಿ ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಮೇಲೆ ಆಹಾರ ನಿರೀಕ್ಷಕರಾದ ಅರ್ಚನಾ, ಸಬ್ ಅರ್ಬನ್ ಉಪ ವಿಭಾಗದ ಎಸಿಪಿ ಬಸವೇಶ್ವರ, ಸಿಬ್ಬಂದಿಗಳಾದ ಶಂಕರಲಿಂಗ, ಬೀರಣ್ಣ, ಲಕ್ಷ್ಮೀಕಾಂತ, ದತ್ತಾತ್ರೇಯ ಅವರು ದಾಳಿ ನಡೆಸಿ 5 ಲಕ್ಷ ರೂ.ಮೌಲ್ಯದ ಲಾರಿ ಮತ್ತು ಅಕ್ಕಿ ಸೇರಿ 1.35 ಕೋಟಿ ರೂ.ಮೌಲ್ಯದ ಸ್ವತ್ತನ್ನು ವಶ ಪಡಿಸಿಕೊಂಡಿದ್ದಾರೆ.

ಈ ಬಗ್ಗೆ ಲಾರಿ ಚಾಲಕನಾದ ಹುಮನಾಬಾದ ತಾಲ್ಲೂಕಿನ ದುಬಲಗುಂಡಿಯ ರಾಜು ತಂದೆ ನರಸಿಂಗರಾವ್ ಮತ್ತು ಲಾರಿ ಮಾಲೀಕ ಝಾಕೀರ್ ತಂದೆ ಪಾಶಾಮಿಯಾ ಚಿದ್ರಿ ವಿರುದ್ಧ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅಕ್ಕಿಯನ್ನು ಯಾದಗಿರಿಯಿಂದ ಮಹಾರಾಷ್ಟ್ರ ಮತ್ತು ಗುಜರಾತಗೆ ಅಕ್ರಮವಾಗಿ ಸಾಗಿಸಲಾಗುತ್ತಿತ್ತು ಎಂದು ತಿಳಿದುಬಂದಿದೆ. ಇನ್ನೊಂದು ಪ್ರಕರಣದಲ್ಲಿ ಸಬ್ ಅರ್ಬನ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 28.47 ಲಕ್ಷ ರೂ.ಮೌಲ್ಯದ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದೆ.

## ಅಗ್ನಿ ಅವಘಡ ನಡೆಯದಂತೆ ಎಚ್ಚರ ವಹಿಸಿ



ಉದಯವಾಹಿನಿ ಚಿತ್ರ

• ಉದಯವಾಹಿನಿ ಬಳ್ಳಾರಿ

ಅಗ್ನಿ ಅವಘಡ ನಡೆಯದಂತೆ ಜನರು ಮುನ್ನೆಚ್ಚರಿಕೆಯಿಂದ ಇರಬೇಕು. ಇದರಿಂದ ಮುಂದೆ ಸಂಭವಿಸಬಹುದಾದ ನಷ್ಟ ಮತ್ತು ದುರಂತವನ್ನು ತಪ್ಪಿಸಬಹುದು ಎಂದು ಜಿಲ್ಲಾ ಅಗ್ನಿ ಶಾಮಕ ಅಧಿಕಾರಿ ಹನುಮನಗೌಡ ಪೊಲೀಸ್ ಪಾಟೀಲ್ ಅಭಿಪ್ರಾಯಪಟ್ಟರು. ಅವರು ನಗರದ ಸರಳಾದೇವಿ ಕಾಲೇಜಿನ ಆವರಣದಲ್ಲಿ 'ಭಾರತ ಸ್ಕೌಟ್ಸ್ ಮತ್ತು ಗೈಡ್ಸ್,ರೋವರ್ಸ್, ರೇಂಜರ್ಸ್ ಘಟಕಗಳು ಜಂಟಿಯಾಗಿ ಆಯೋಜಿಸಿದ್ದ 'ಅಗ್ನಿ ಅವಘಡ ಪ್ರಾತ್ಯಕ್ಷತೆ ಹಾಗೂ ಜಾಗೃತಿ ಕಾರ್ಯಗಾರ'ದಲ್ಲಿ ಭಾಗವಹಿಸಿ ಮಾತನಾಡಿದರು. ಆಕಸ್ಮಿಕ ಬೆಂಕಿ ತಗಲಿದಾಗ ಮನೆಯಲ್ಲಿ ನೀರಿನ ಬದಲಿಗೆ ಮರಳನ್ನು ಎರಚಿ ನಂದಿಸಲು ಪ್ರಯತ್ನಿಸಬೇಕು ಎಂದು ಮಾಹಿತಿ ನೀಡಿದರು.

## ಮೆಕ್ಕೆಜೋಳ ಖರೀದಿ ಕೇಂದ್ರ ಮತ್ತು ಕಾಲುವೆಗೆ ನೀರು ಬಿಡುವಂತೆ ರೈತ ಸಂಘದಿಂದ ಮನವಿ

• ಉದಯವಾಹಿನಿ ಕೊಲ್ಹಾರ

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕೊಲ್ಹಾರ ಘಟಕದಿಂದ ಮೆಕ್ಕೆಜೋಳ ಖರೀದಿ ಕೇಂದ್ರ ಹಾಗೂ ವಾರಬಂದಿ ಮೂಲಕ ಕಾಲುವೆಗೆ ನೀರು ಬಿಡುವಂತೆ ಜಿಲ್ಲಾ ಅಧಿಕಾರಿಗಳಿಗೆ ತಹಶೀಲ್ದಾರರ ಮೂಲಕ ಮನವಿ ಸಲ್ಲಿಸಿದರು. ತಾಲ್ಲೂಕು ಅಧ್ಯಕ್ಷ ಸೋಮು ಬಿರಾದಾರ ಮನವಿಯನ್ನು ತಹಶೀಲ್ದಾರ ಸಂತೋಷ ಮ್ಯಾಗೇರಿ ಹಾಗೂ ಡಿವಾಯ್ ಎಸ್ಪಿ ಬಲ್ಲಪ್ಪ ನಂದಗಾವಿ ಮತ್ತು ಪಿಎಸ್ಐ ಅಶೋಕ ನಾಯ್ಕ ರವರಿಗೆ ನೀಡಿದರು.

ತಾಲ್ಲೂಕು ಅಧ್ಯಕ್ಷ ಮಾತನಾಡಿ ರೈತರು ಬೆಳೆದ ಮೆಕ್ಕೆಜೋಳವನ್ನು ಯಾವುದೆ ನಿರ್ದಿಷ್ಟ ತೂಕದ ಕಂಡೀಷನ್ ಇಲ್ಲದೇ ರೈತರ ಸಂಪೂರ್ಣ ಮೆಕ್ಕೆಜೋಳವನ್ನು ಖರೀದಿ ಮಾಡಬೇಕು ಮತ್ತು ಕೊಲ್ಹಾರ ತಾಲ್ಲೂಕು ವ್ಯಾಪ್ತಿಯಲ್ಲಿ ಖರೀದಿ ಕೇಂದ್ರ ತೆರೆಯಬೇಕು ಹಾಗೂ ಕಾಲುವೆಗೆ



ಉದಯವಾಹಿನಿ ಚಿತ್ರ

ವಾರಾಬಂದಿ ಮೂಲಕ 10ದಿನ ನೀರು ಬಿಡುವುದು 5ದಿನ ಬಂದ ನಿಗದಿ ಮಾಡುವಂತೆ ಮನವಿ ನೀಡಿ ಮಾತನಾಡಿದರು. ಕಲ್ಲಪ್ಪ ಗಿಡ್ಡಪ್ಪಗೋಳ, ಯಲ್ಲಪ್ಪ ಗೂಳಗೊಂಡ, ಗೋಪಾಲ ಕಾಖಂಡಕಿ, ಸಂಗಪ್ಪ ಗೂಳಗೊಂಡ, ಧೂಳಪ್ಪ ಸಿಂಧೆ, ಲಕ್ಷ್ಮಣ ಬಿರಾದಾರ, ಬಸವರಾಜ ಯಾಳವಾರ, ಗೂಳಪ್ಪ ಗುಗ್ಗರಿ, ಯಲ್ಲಪ್ಪ ಹಡ್ರೋಳ್ಳಿ, ಚಂದಪ್ಪ ಕುಂಬಾರ,ರಾವತ ಬರಗಿ,

## ಮದ್ಯದ ಅಂಗಡಿ ತೆರೆಯದಂತೆ ಮನವಿ

• ಉದಯವಾಹಿನಿ ಚನ್ನಮ್ಮನ ಕಿತ್ತೂರು

ಸಾರ್ವಜನಿಕರಿಗೆ ತೊಂದರೆಯಾಗುವ ಸ್ಥಳದಲ್ಲಿ ಮದ್ಯದ ಅಂಗಡಿ ಸ್ಥಾಪನೆ ಮಾಡಬಾರದೆಂದು ಪಟ್ಟಣದ ಮಹಿಳೆಯರೆಲ್ಲರೂ ಹಾಗೂ ವಾರ್ಡ ನಂ. 17ನೇ ನಿವಾಸಿಗಳು ಜೊತೆಗೂಡಿ ಪ್ರತಿಭಟಿಸಿ ಶಾಸಕ ಬಾಬಾಸಾಹೇಬ ಪಾಟೀಲರಿಗೆ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ಶಾಸಕರು ಸಾರ್ವಜನಿಕರಿಗೆ ಶಾಲಾ ಮಕ್ಕಳಿಗೆ, ಮಹಿಳೆಯರಿಗೆ ತೊಂದರೆವುಂಟಾಗುತ್ತದೆ ಎಂದರೆ ನನ್ನದು ವಿರೋಧವಿದೆ. ಯಾವ ಕಾರಣಕ್ಕೂ ತೆರೆಯುವುದಿಲ್ಲ ಮತ್ತು ಸರ್ಕಾರದಿಂದ ಅನುಮತಿಯೂ ಕೊಡಿಸುವುದಿಲ್ಲ. ಎಂದು ಭರವಸೆ ನೀಡಿದರು.

ಪಪಂ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಎಫ್.ಜಕಾತಿ ಮಾತನಾಡಿ ಮಧ್ಯದಂಗಡಿ ಸ್ಥಾಪನೆ ಮಾಡುವ ಸ್ಥಳದಲ್ಲಿ ಅದರ ಬದಿಗೆ ಮಸೀದಿಯಿದ್ದು ಮಕ್ಕಳು ಸಹ ಶಾಲೆಗೆ ಅದೇ ಸ್ಥಳದಿಂದ ಹೋಗುತ್ತವೆ. ಈ ರಸ್ತೆ ರಾಷ್ಟ್ರೀಯ ಹೆದ್ದಾರಿಗೆ ಸಂಪರ್ಕಿಸುವ ರಸ್ತೆಯಾಗಿದ್ದು ಇಲ್ಲಿ ಅಪಘಾತ ಹೆಚ್ಚಾಗಿವೆ ಎಂದರು.

## ಕರಜಗಿಯಲ್ಲಿ ಜೆಸ್ಕಾಂ ನಿರ್ಲಕ್ಷ್ಯ: ಪದೇಪದೇ ಕೈಕೊಡುವ ಟ್ರಾನ್ಸ್‌ಫಾರ್ಮರ್

• ಉದಯವಾಹಿನಿ ಕರಜಗಿ

ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಕರಜಗಿ ಗ್ರಾಮದಲ್ಲಿ ಜೇಸ್ಕಾಂ ಇಲಾಖೆಯ ಕಾರ್ಯಪದ್ದತಿ ಜನರಲ್ಲಿ ಆಕ್ರೋಶ ಮೂಡಿಸಿದೆ. ಪ್ರತಿದಿನ ಬೆಳಗ್ಗೆಯಾದರೆ ಸಾಕು ವಿದ್ಯುತ್ ಸಮಸ್ಯೆಗಾಗಿ ಟ್ರಾನ್ಸ್ ಫಾರಂ ಕೈಕೋಡುತ್ತಿರುವದರಿಂದ ಆದರ ಎದುರಲ್ಲೆ ಕೂಡಬೇಕಾಗದ ಪರಿಸ್ಥಿತಿ ಎದುರಾಗಿದೆ ಎಂದು ಗ್ರಾಮಸ್ಥರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸರ್ಕಾರಿ ಲೈನ್‌ಮ್ಯಾನ್‌ಗಳು ಸಮಯಕ್ಕೆ ಬರುತ್ತಿಲ್ಲ. ಕೆಲವೊಮ್ಮೆ ಸರ್ಕಾರಿ ಸಿಬ್ಬಂದಿಯ ಜಾಗದಲ್ಲಿ ಪ್ರೈವೇಟ್ ಲೈನ್‌ಮ್ಯಾನ್‌ಗಳು ಕೆಲಸ ನಿರ್ವಹಿಸುವುದು ರೂಢಿಯಾಗಿದೆ ಎಂದು ಆರೋಪ ಮಾಡಲಾಗಿದೆ. ಇದರಿಂದ ಗ್ರಾಮದಲ್ಲಿ ವಿದ್ಯುತ್ ದುರಸ್ತಿ, ಲೋಡ್‌ಶೆಡ್ ಮತ್ತು ದೋಷ ಪರಿಹಾರ ಕಾರ್ಯಗಳು ವಿಳಂಬವಾಗುತ್ತಿದ್ದು ಜನಜೀವನಕ್ಕೆ ತೊಂದರೆ ಉಂಟಾಗಿದೆ. ಅಧಿಕಾರಿಗಳು ತಕ್ಷಣ ಗಮನಸೆಳೆದು



ಉದಯವಾಹಿನಿ ಚಿತ್ರ

ನಿಜವಾದ ಸರ್ಕಾರಿ ಸಿಬ್ಬಂದಿಯಿಂದಲೇ ಕೆಲಸ ಮಾಡಿಸಿ, ಕರಜಗಿಯ ವಿದ್ಯುತ್ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಕರಜಗಿ ಗ್ರಾಮದ ಭೀಮಶಾ ಪರೀಟ ಅವರ ಮನೆಯ ಮುಂದೆ ಅನಾವಶ್ಯಕವಾಗಿ ಕೆಲವು ವಿದ್ಯುತ್ ತಂತಿಗಳು ನೆಲಕ್ಕೆ ಬಿದ್ದು ಅಪಾಯಕಾರಿವಾಗಿವೆ. ಇವುಗಳನ್ನು ತೆರವು ಮಾಡಲು ಹಲವು ಬಾರಿ ಜೇಸ್ಕಾಂ ಇಲಾಖೆಗೆ ಮನವಿ

**ಗ್ರಾಮಸ್ಥರ ಹೇಳಿಕೆ**

**ಈ ತಂತಿಗಳನ್ನು ಕೂಡಲೇ ತೆರವುಗೊಳಿಸಬೇಕು. ಯಾವುದಾದರೂ ಅಹಿತಕರ ಘಟನೆ, ವಿದ್ಯುತ್ ದುರಂತ ಸಂಭವಿಸಿದರೆ ಅದರ ನೇರ ಹೊಣೆ ಜೇಸ್ಕಾಂ ಇಲಾಖೆಯದೆ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ.**

ಸಲ್ಲಿಸಿದ್ದೇನೆ ಇಂದಿಗೂ ಕ್ರಮ ಕೈಗೊಳ್ಳಲಿಲ್ಲ

ಹತ್ತಿರದಲ್ಲೇ ಸರ್ಕಾರಿ ಪ್ರಾಥಮಿಕ ಶಾಲೆ ಇರುವುದರಿಂದ ವಿದ್ಯಾರ್ಥಿಗಳು ಹೋಗಿ–ಬರುವ ಸಂದರ್ಭದಲ್ಲಿ ಅಪಾಯದ ಪರಿಸ್ಥಿತಿ ನಿರ್ಮಾಣವಾಗಬಹುದು ಜೊತೆಗೆ ಇದು ಮುಖ್ಯ ರಸ್ತೆಯ ಪಕ್ಕದಲ್ಲೇ ಇರುವುದರಿಂದ ಪ್ರತಿದಿನ ವಾಹನ ಸಂಚಾರ ಹೆಚ್ಚು, ಸುತ್ತಮುತ್ತ ಮನೆಗಳು ಇರುವುದರಿಂದ ಗ್ರಾಮಸ್ಥರು ಕೂಡಾ ಆತಂಕದಲ್ಲಿದ್ದಾರೆ.

## ವಿಶ್ವವಿಕಲಚೇತನರ ದಿನಾಚರಣೆ ಅಂಗವಿಕಲ ಮಕ್ಕಳ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹಿಸೋಣ

• ಉದಯವಾಹಿನಿ ಬಸವನಬಾಗೇವಾಡಿ

ಅಂಗವಿಕಲರು ಸಮಾಜದಲ್ಲಿ ಎಲ್ಲರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿ ಆತ್ಮವಿಶ್ವಾಸದಿಂದ ಜೀವನ ನಡೆಸುವಂತೆ ಅವಕಾಶ ಕಲ್ಪಿಸುವುದು ಸಮಾಜ ಹಾಗೂ ಸರ್ಕಾರದ ಜವಾಬ್ದಾರಿ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕಾರ್ಯಪ್ರವೃತ್ತರಾಗಬೇಕು ಎಂದು ಕ್ಷೇತ್ರ ಸಮನ್ವಯಾಧಿಕಾರಿ ಸುನೀಲ ನಾಯಕ ಅಭಿಪ್ರಾಯಪಟ್ಟರು. ತಾಲ್ಲೂಕಿನ ಇವಣಗಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಿಶ್ವ ವಿಕಲಚೇತನರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ,ಅಂಗವಿಕಲ ಮಕ್ಕಳ ಸಬಲೀಕರಣಕ್ಕಾಗಿ ಅನೇಕ ಶಾಲಾ-ಕಾಲೇಜು ಹಾಗೂ ಸಂಘ-ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು



ಉದಯವಾಹಿನಿ ಚಿತ್ರ

ಎಂದರು. ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಎಮ್ ವ್ಹಿ ಗಬ್ಬೂರ ಮಾತನಾಡಿ, ಪ್ರಸ್ತುತ ಕಾಲದಲ್ಲಿ ವಿಕಲಚೇತನರಿಗೆ ವಿದ್ಯಾಭ್ಯಾಸದ ಅವಕಾಶಗಳ ಜೊತೆಗೆ ಕೌಶಲಾಭಿವೃದ್ಧಿಗಳ ಕಲಿಕೆಯು ಅವರ ಬದುಕಿನಲ್ಲಿ ಸಾಧನೆ ಮಾಡುವಂತಹ ಭರವಸೆ ಮೂಡಿಸುತ್ತಿದೆ.

ಅಂಗವಿಕಲ ಮಕ್ಕಳ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹ ನೀಡುವುದರಿಂದ ಅವರ ದೌರ್ಬಲ್ಯಗಳ ಹೊರತಾಗಿಯೂ ಅದಮ್ಯ ಶಕ್ತಿ ಅವರಲ್ಲಿದೆ ಎಂಬುದನ್ನು ನಿರೂಪಿಸಲು ಸಾಧ್ಯ. ಅಂಗವಿಕಲರ ಏಳಿಗೆಗೆ ಕುಟುಂಬದ ಸದಸ್ಯರು ಮಾತ್ರವಲ್ಲದೇ ಪ್ರತಿಯೊಬ್ಬ ನಾಗರಿಕರು ಕೈಜೋಡಿಸಬೇಕು. ಅಂಗವಿಕಲರಿಗಾಗಿ ಕಾನೂನು ಅಡಿಯಲ್ಲಿ ಅನೇಕ ಹಕ್ಕುಗಳನ್ನು ನೀಡಿದ್ದು, ಅವರ ಶ್ರೇಯಸ್ಸು ಹಾಗೂ ಮಾನವ ಹಕ್ಕುಗಳಿಗೆ ಚ್ಯುತಿ ತರದಂತೆ ಅವರ ಅಭಿವೃದ್ಧಿಯಲ್ಲಿ ಸಹಕಾರ ನೀಡಬೇಕು ಎಂದರು. ಆಯ್ ಎಮ್ ಇಂಡಿ ಮಾತನಾಡಿದರು.

## ಕೆಂಪು ಕಲ್ಲು, ಮರಳುಗಾರಿಕೆ ಸಮಸ್ಯೆ ಬಹುತೇಕ ಪರಿಹಾರಗೊಂಡಿದೆ: ಡಿಸಿ

• ಉದಯವಾಹಿನಿ ಮಂಗಳೂರು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಂಪು ಕಲ್ಲು ಮರಳುಗಾರಿಕೆ ಸಮಸ್ಯೆ ಬಹುತೇಕ ಪರಿಹಾರಗೊಂಡಿದೆ. ಜಿಲ್ಲೆಯಲ್ಲಿ ಕೆಂಪು ಕಲ್ಲು ಗಣಿಗಾರಿಕೆಗೆ ಈಗಾಗಲೇ 59 ಪರವಾನಿಗೆ ನೀಡಲಾಗಿದೆ.

42 ಬ್ಲಾಕ್‌ಗಳಲ್ಲಿ ಮರಳುಗಾರಿಕೆ ನಡೆಸಲು ಮಾರ್ಚ್ ಒಳಗೆ ಪರವಾನಿಗೆ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿಂದು ಈ ಬಗ್ಗೆ ಮಾಹಿತಿ ನೀಡಿದ ಜಿಲ್ಲಾಧಿಕಾರಿ, ಜಿಲ್ಲೆಯಲ್ಲಿ ಈಗಾಗಲೇ 19 ಬ್ಲಾಕ್‌ಗಳಲ್ಲಿ ಮರಳುಗಾರಿಕೆ ನಡೆಯುತ್ತಿದೆ. ಇನ್ನೂ 42 ಮರಳು ಬ್ಲಾಕ್‌ಗಳನ್ನು ಗುರುತಿಸಲಾಗಿದೆ. ಇದರಿಂದಾಗಿ ಮುಂದಿನ ಐದು ವರ್ಷ ಮರಳುಗಾರಿಕೆಗೆ ಸಮಸ್ಯೆಯಾಗುವ ಸಾಧ್ಯತೆ ಇಲ್ಲ ಎಂದು ಹೇಳಿದರು. ಜಿಲ್ಲೆಯಲ್ಲಿ ಈ ಹಿಂದೆ 30–35 ರೂ.ಗೆ ದೊರೆಯುತ್ತಿದ್ದ ಕೆಂಪುಕಲ್ಲು ಬಳಿಕ 65 ರೂ.ಗೆ ಏರಿಕೆಯಾಗಿತ್ತು. ಈ ಸಮಸ್ಯೆ ಬಗೆಹರಿಸಿ, ಕೆಂಪು ಕಲ್ಲು ತೆಗೆಯಲು ಇದುವರೆಗೆ 59 ಪರ್ಮಿಟ್‌ಗಳನ್ನು ನೀಡಲಾಗಿದೆ. ಇನ್ನೂ



12 ಅರ್ಜಿಗಳು ಬಾಕಿ ಉಳಿದಿದ್ದು, ಶೀಘ್ರ ವಿಲೇವಾರಿ ಮಾಡಲಾಗುವುದು. ಸದ್ಯ ಕಲ್ಲಿನ ದರ 45 ರೂ.ಗೆ ಇಳಿಕೆಯಾಗಿದೆ. ಮುಂದೆ ಇದನ್ನು 40 ರೂ.ಗಿಂತ ಕೆಳಗೆ ಇಳಿಸುವ ಉದ್ದೇಶ ಇದೆ ಎಂದರು. ಕೆಂಪುಕಲ್ಲು ತೆಗೆಯಲು ಅರ್ಜಿ ಆಹ್ವಾನಿಸಲಾಗಿದ್ದು, 60 ಅರ್ಜಿಗಳು ಮಾತ್ರ ಬಂದಿದೆ. ಆಸಕ್ತರು ಅರ್ಜಿ ಹಾಕಿದರೆ ಪರ್ಮಿಟ್ ನೀಡಲು ಅನುಕೂಲವಾಗಲಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

# ಹಣವಿದ್ದರೂ ಯಾಕೆ ಖರ್ಚು ಮಾಡುತ್ತಿಲ್ಲ: ಅಧಿಕಾರಿಗಳಿಗೆ ಭೈರತಿ ಸುರೇಶ್ ತರಾಟೆ

### 35 ಲಕ್ಷ ಬೋರ್ ವೆಲ್‌ಗೆ ಸಂಬಂಧಿಸಿದ ಹಣ ಬಾಕಿ ಯಾಕೆ ಇದೆ ಖರ್ಚು ಮಾಡಿ, ನಿಮ್ಮ ಅಕೌಂಟಿನಲ್ಲಿ ಇಟ್ಟುಕೊಂಡು ಏನು ಮಾಡ್ತೀರಾ

• ಉದಯವಾಹಿನಿ ಬಳ್ಳಾರಿ

ಸರ್ಕಾರದಲ್ಲಿ ಹಣ ಇಲ್ಲ ಎಂದು ವಿರೋಧ ಪಕ್ಷದವರು ಬೊಬ್ಬೆ ಹೊಡೆಯುತ್ತಿದ್ದಾರೆ. ನೀವು ನೋಡಿದರೆ ಹಣ ಇದ್ದು ಕಾಮಗಾರಿ ಯಾಕೆ ತೆಗೆದುಕೊಂಡಿಲ್ಲ ಎಂದು ಪಾಲಿಕೆಯ ಅಧಿಕಾರಿಗಳನ್ನು ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ ಅವರು ತರಾಟೆಗೆ ತೆಗೆದುಕೊಂಡರು.

ನಗರದ ಹೊಸ ಡಿಸಿ ಕಚೇರಿ ಸಭಾಂಗಣದಲ್ಲಿ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಸಚಿವರು, 1.24 ಕೋಟಿ ರೂಗೆ ಕ್ರಿಯಾ ಯೋಜನೆ ತಯಾರಿಸಲು ಎರೆಡು ವರ್ಷ ಬೇಕಾ ಎಂದರು.

ಆಗಸ್ಟ್‌ನಲ್ಲಿ 134 ಕಾಮಗಾರಿಗೆ ಟೆಂಡರ್ ಕರೆದಿದೆ. ಇಷ್ಟು ತಿಂಗಳಾದರೂ ವರ್ಕ್ ಆರ್ಡರ್ ಕೊಡುತ್ತಿಲ್ಲ ಎಂದು ಸೂಪರಿಂಟೆಂಡೆಂಟ್ ಇಂಜನೀಯರ್‌ನ್ನು ಪ್ರಶ್ನಿಸಿದರು. ಸರಿಯಾಗಿ ಕೆಲಸ ಮಾಡದಿದ್ದರೆ ಅನಾನತ್ ಮಾಡುವುದಾಗಿ ಹೇಳಿದ ಮೇಲೆ 10 ದಿನದಲ್ಲಿ ಮಾಡಲಿದೆಂದು ಹೇಳಿದರು. 35 ಲಕ್ಷ ಬೋರ್ ವೆಲ್‌ಗೆ ಸಂಬಂಧಿಸಿದ ಹಣ ಬಾಕಿ ಯಾಕೆ ಇದೆ ಖರ್ಚು ಮಾಡಿ. ನಿಮ್ಮ ಅಕೌಂಟಿನಲ್ಲಿ ಇಟ್ಟುಕೊಂಡು ಏನು ಮಾಡ್ತೀರಾ ಎಂದರು ಸಚಿವರು.



ಉದಯವಾಹಿನಿ ಚಿತ್ರ

**ನನನ್ನು ಯಾಮಾರಿಸಲು ಬರಬೇಡಿ**

ನಗರದಲ್ಲಿ ಪಾರ್ಕ್ ಮತ್ತು ಐದು ಕೆರೆಗಳ ಜಲ ಸಂಪನ್ಮೂಲ ಅಭಿವೃದ್ಧಿಗೆ 25 ಕೋಟಿ ರೂ ಹಣ ಇದೆ. ಇನ್ನೂ ಒಂದು ಮಾತ್ರ ಡಿಪಿಆರ್ ಆಗಿದೆ ಉಳಿದಿದ್ದು ಬಾಕಿ ಏಕೆ ಎಂದರು.

**ಸರಿಯಾದ ದಾಖಲಾತಿ ಇಲ್ಲದ ಕಾರಣ**

1087 ಜನ ಖಾತಾ ಮಾಡಿಲ್ಲ ಎಂದು ಅಧಿಕಾರಿಗಳು ಹೇಳಿದಾಗ ಪಕ್ಕದಲ್ಲಿದ್ದ ನಾಗೇಂದ್ರ ಅವರಿಗೆ ಮಾಮಾ ನಾನೇ ಈ ಖಾತಾ ವ್ಯವಸ್ಥೆ ಮಾಡಿದ್ದು. ದಾಖಲೆ ನೀಡಲಿಲ್ಲ ಎಂದು ಬಿಡಬೇಡಿ ಜನರಿಂದ ದಾಖಲೆ ಪಡೆದು ಮಾಡಬೇಕು ಎಂದರು.

ಕಳೆದ ವರ್ಷ 55 ಕೋಟಿ ರೂ ಬೇಡಿಕೆ ಇತ್ತು. ಈ ವರ್ಷ 63 ಕೋಟಿ ಬೇಡಿಕೆ ಇದೆ ಎಮನದಾಗ ಸಿಟ್ಟಿಗೆ ಬಂದ ಸಚಿವರು ಏನ್ರೀ ಬಿ.ಖಾತಾ ಮಾಡಿದ ಮೇಲೂ ಕೇವಲ ಎಂಟು ಕೋಟಿ ಅಷ್ಟೇ ಹೆಚ್ಚು ಏನ್ರೀ ನಿಮ್ಮ ಲೆಕ್ಕ ಸರಿ ಇಲ್ಲ ಎಂದರು. ಆಗ ಎದ್ದು ಮಾಜಿ ಆಯುಕ್ತ ಕಲೀಲ್ 15 ಕೋಟಿ ರೂ ಹೆಚ್ಚಾಗಿದೆಂದರು.

ನಿಮ್ಮ ಬಳ್ಳಾರಿ ಮಹಾನಗರ ಪಾಲಿಕೆ ಶ್ರೀಮಂತವಾದುದು. ಪ್ರತಿ ವರ್ಷ ತೆರಿಗೆ ಹೆಚ್ಚು ಮಾಡಿ. ವಾಣಿಜ್ಯ ಕಟ್ಟಡಗಲಕ ತೆರಿಗೆ ಬಾಕಿ ವಸೂಲಿ ಮಾಡಿ, ತೆರಿಗೆ ನಾವೇನು ತೆಗೆದುಕೊಳ್ಳುವುದಿಲ್ಲ. ನಿಮ್ಮ ನಗರದ ಅಭಿವೃದ್ಧಿಗೆ ಬರುತ್ತೆ ಎಂದ ಸಚಿವರು ಡೆವಲಪರ್ಸ್ ಪರ ನಿಲ್ಲಬೇಡಿ, ಸರಿಯಾಗಿ ನಿಯಮದ ಪ್ರಕಾರ ಅನುಮತಿ ನೀಡಿ ಎಂದರು. ಆಗ ಆಯುಕ್ತ ಪಿ.ಎಸ್.ಮಂಜುನಾಥ ಅವರು ಪಾಲಿಕೆಯಲ್ಲಿ 223 ಸಿಬ್ಬಂದಿ ಕೊರತೆ ಇದೆ ಎಂದು ಸಚಿವರ ಗಮನಕ್ಕೆ ತಂದರು. ಪಾಲಿಕೆಯ ಲಾಯರ್‌ಗಳು ಅಡ್ಜಸ್ಟ್‌ಮೆಂಟ್ ಇರುವವರು ಬೇಡ. ಸರಿಯಾಗಿ ಇರುವವರನ್ನು ತೆಗೆದುಕೊಳ್ಳಿ ಎಂದು ಸೂಚಿಸಿದರು ಈ ವೇಳೆ ಲೀಗಲ್ ಸೆಲ್ ಸ್ಟ್ರಾಂಗ್ ಮಾಡಿ ಎಂದು ಶಾಸಕ ನಾಗೇಂದ್ರ ಹೇಳಿದರು. ನಗರದ ಅಭಿವೃದ್ಧಿಗೆ 200 ಕೋಟಿ ರೂ ಬಿಡುಗಡೆ ಮಾಡಿದೆ. ಅದನ್ನು ಮುಗಿಸಿ ಗುಣ ಮಟ್ಟದ ಕಾಮಗಾರಿ ಮಾಡಿ. ಮತ್ತೆ ಹಣ ಬಿಡುಗಡೆ ಮಾಡಿಸ್ತೀನಿ ಎಂದರು.

- ನನನ್ನು ಯಾಮಾರಿಸಲು ಬರಬೇಡಿ.
- ಮಾಹಿತಿ ಇಲ್ಲ ಎಂದರೆ ಹೇಗೆ
- ಏನು ಕೇಳಿದರೂ ಗೊತ್ತಿಲ್ಲ ಅಂತೀರಿ
- ಶ್ರೀಮಂತ ಮಹಾನಗರ ಪಾಲಿಕೆ ಇದೆ
- ವಾಣಿಜ್ಯ ಬಿಲ್ಡಿಂಗ್ ತೆರಿಗೆ ಬಿಡಬೇಡಿ.
- ನಗರದ ಅಭಿವೃದ್ಧಿಗೆ 200 ಕೋಟಿ ರೂ
- ಪಾಲಿಕೆ ಲಾಯರ್‌ಗಳು ಸರಿ ಕೆಲಸ ಮಾಡಲ್ಲ ಯಾಕೆ
- ಸ್ವೀಪಿಂಗ್ ಮಿಷನ್ ಖರೀದಿ ಮಾಡಿ.

ನಗರದ ಕಸ ಸ್ವಚ್ಚತೆಗೆ ಸಿಬ್ಬಂದಿ ಕೊರತೆ ಇದೆ. ಅದಕ್ಕಾಗಿ ಸ್ವೀಪಿಂಗ್ ಮಿಷನ್ ಖರೀದಿ ಮಾಡಿ ಎಂದಾಗ ಅನುದಾನದ ಪ್ರಶ್ನೆ ಬಂದಾಗ, ಡಿಸಿ ನಾಗೇಂದ್ರ ಪ್ರಸಾದ್ ಸಿಎಸ್ ಆರ್ ಫಂಡ್ ನಲ್ಲಿ ಕೊಡಿಸುವುದಾಗಿ ಹೇಳಿದರು. ಪಾಲಿಕೆ ಸದಸ್ಯರು ಸಣ್ಣ ಪುಟ್ಟ ಕಾಮಗಾರಿಗೂ ಹಣ ನೀಡಲ್ಲ ಎಂದು ದೂರಿದಾಗ. ಏನ್ರೀ ಅವರೇನು ಅವರ ಮನೆ ಕೆಲಸಕ್ಕೆ ಕೇಳ್ತಾರಾ, ನೀವೇನು ನಿಮ್ಮಮನೆಯಿಂದ ಕೊಡ್ತೀರಾ ಎಂದರು ಸಚಿವರು. ಸಭೆಯಲ್ಲಿ ಸಂಸದ ತುಕರಾಂ, ಶಾಸಕರಾದ ಬಿ.ನಾಗೇಂದ್ರ, ಭರತ್ ರೆಡ್ಡಿ, ಡಿಸಿ ನಾಗೇಂದ್ರ ಪ್ರಸಾದ್, ಮೇಯರ್ ಗಾದೆಪ್ಪ, ಬುಡಾ ಅಧ್ಯಕ್ಷ ಜೆ.ಎಸ್.ಆಂಜನೇಯಲು ಇದ್ದರು.

**ಪಾಲಿಕೆ ಸದಸ್ಯರಲ್ಲದವರು:** ಇವರು ಪಾಲಿಕೆ ಸದಸ್ಯರಲ್ಲ. ಇವರ ಹೆಂಡ್ತಿ, ಮಗಳು, ಸಂಬಂಧಿಕರು ಪಾಲಿಕೆ ಸದಸ್ಯರು, ಅವರು ಬರದೆ, ಸಚಿವರ ಸಭೆಯಲ್ಲಿ ಗಂಡರು ಪಾಲ್ಗೊಂಡು ನಮ್ಮ ವಾರ್ಡಿಗೆ ಹಣ ಕಡಿಮೆ ಕೊಟ್ಟಿದ್ದಾರೆಂದು ಪ್ರಶ್ನಿಸಿದರು.

# ಭಾರತ ಚೂರು ಚೂರಾದ್ರೆ ಮಾತ್ರ ಬಾಂಗ್ಲಾದಲ್ಲಿ ಶಾಂತಿ ನೆಲೆಸುತ್ತೆ



ವಿಶ್ವದಲ್ಲೇ ತಲ್ಲಣ ಸೃಷ್ಟಿ

**ಢಾಕಾ:** ಭಾರತವು ಚೂರು ಚೂರಾಗಿ ಒಡೆದು ಹೋಗದೆ ಹೊರತು ಬಾಂಗ್ಲಾದಲ್ಲಿ ಎಂದಿಗೂ ಶಾಂತಿ ನೆಲೆಸೋದಿಲ್ಲ ಎಂದು ಬಾಂಗ್ಲಾದೇಶದ ನಿವೃತ್ತ ಬ್ರಿಗೇಡಿಯರ್ ಜನರಲ್ ಅಬ್ದುಲ್ಲಾಹಿಲ್ ಅಮಾನ್ ಅಜ್ಮಿ ಕೊಟ್ಟಿರುವ ಹೇಳಿಕೆ ವಿಶ್ವದಲ್ಲೇ ತಲ್ಲಣ ಸೃಷ್ಟಿಸಿದೆ. ಶೇಖ್ ಹಸೀನಾ ನೇತೃತ್ವದ ಸರ್ಕಾರದ ಪತನದ ನಂತರ ಮತ್ತು ಅವರಿಗೆ ಗಲ್ಲು ಶಿಕ್ಷೆ ವಿಧಿಸಿದ ನಂತರ ಭಾರತ, ಬಾಂಗ್ಲಾದೇಶದ ಸಂಬಂಧದಲ್ಲಿ ಬಿರುಕು ಮೂಡಿರುವುದು ಪರೋಕ್ಷವಾಗಿ ಕಂಡುಬರುತ್ತಿದೆ. ಇ ಬೆನ್ನಲ್ಲೇ ಬಾಂಗ್ಲಾದೇಶದ ನಿವೃತ್ತ ಸೇನಾ ಅಧಿಕಾರಿ ಅಬ್ದುಲ್ಲಾಹಿಲ್ ಅಮಾನ್ ಅಜ್ಮಿ ಹೇಳಿರುವುದು ಭಾರಿ ಚರ್ಚೆಗೆ ಕಾರಣವಾಗಿದೆ.

ಢಾಕಾದ ನ್ಯಾಷನಲ್ ಪ್ರೆಸ್ ಕ್ಲಬ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ದೆಹಲಿ ಯಾವಾಗಲೂ ಬಾಂಗ್ಲಾದೇಶದ ಒಳಗೆ ಅಶಾಂತಿಯನ್ನು ಮೂಡಿಸುವ ಮತ್ತು ಅದನ್ನು ಜೀವಂತವಾಗಿರಿಸುವ ಕೆಲಸ ಮಾಡುತ್ತದೆ ಎಂದು ಆರೋಪಿಸಿದರು.

**ಯಾರು ಈ ಅಜ್ಮಿ:** ನಿವೃತ್ತ ಬ್ರಿಗೇಡಿಯರ್ ಜನರಲ್ ಅಬ್ದುಲ್ಲಾಹಿಲ್ ಅಮಾನ್ ಅಜ್ಮಿ 1971ರ ವಿಮೋಚನಾ ಯುದ್ಧದ ಸಮಯದಲ್ಲಿ ಹಿಂದುಗಳು ಮತ್ತು ಸ್ವಾತಂತ್ರ್ಯ ಪರ ಹೋರಾಟಗಾರರ ಹತ್ಯಾಕಾಂಡಕ್ಕೆ ಕಾರಣನಾಗಿದ್ದ, ಜಮಾತ್-ಎ-ಇಸ್ಲಾಮಿ ಮುಖ್ಯಸ್ಥ ಮತ್ತು ಶಿಕ್ಷೆಗೊಳಗಾದ ಯುದ್ಧಾಪರಾಧಿ ಗುಲಾಮ್ ಅಜಮ್‌ನ ಮಗ.

**ಚಿತ್ತಗಾಂಗ್ ಬಗ್ಗೆ ಸುಳ್ಳು ಸುಳ್ಳು ಆರೋಪ:** 1975 ರಿಂದ 1996 ರವರೆಗೆ ಚಿತ್ತಗಾಂಗ್ ಗುಡ್ಡಗಾಡು ಪ್ರದೇಶದಲ್ಲಿ ಅಶಾಂತಿಯನ್ನು ನೆಲೆಸಲು ಭಾರತವೇ ಕಾರಣ. ಶೇಖ್ ಮುಜಿಬುರ್ ರೆಹಮಾನ್ ಸರ್ಕಾರದ ಅವಧಿಯಲ್ಲಿ ಪರ್ವತ್ಯ ಚಟ್ಟೋಗ್ರಾಮ್ ಜನ ಸಂಹತಿ ಸಮಿತಿ ರಚನೆಯಾಯಿತು. ಅದರ ಶಸ್ತ್ರಸಜ್ಜಿತ ವಿಭಾಗವೇ ಶಾಂತಿ ವಾಹಿನಿ. ಭಾರತವು ಅವರಿಗೆ ಆಶ್ರಯ, ಶಸ್ತ್ರಾಸ್ತ್ರ ಮತ್ತು ತರಬೇತಿಯನ್ನು ಅಂದು ನೀಡಿತ್ತು. ಆ ಮೂಲಕ ರಕ್ತಪಾತಕ್ಕೆ ಕಾರಣವಾಯಿತು ಎಂದು ದೂರಿದ್ದಾರೆ. 1997ರಲ್ಲಿ ಸಹಿ ಹಾಕಲಾದ ಚಿತ್ತಗಾಂಗ್ ಶಾಂತಿ ಒಪ್ಪಂದವನ್ನು ಸಹ ಅಜ್ಮಿ ಟೀಕಿಸಿದ್ದಾರೆ.

**ಮಯಾಂಕ್ ಚೌಬೆ ಹೇಳಿದ್ದಿಷ್ಟು:** ಅಜ್ಮಿ ಸುಮ್ಮನೆ ಒಂದು ಹೇಳಿಕೆ ಕೊಟ್ಟಿಲ್ಲ, ಇದು ಬಾಂಗ್ಲಾದೇಶದ ಅಧಿಕಾರ ವ್ಯವಸ್ಥೆಯ ಕೆಲವು ವಿಭಾಗಗಳಲ್ಲಿ ಆಳವಾಗಿ ಬೇರೂರಿರುವ ಮನಸ್ಥಿತಿಯಾಗಿದೆ. ಇಂತಹ ಹೇಳಿಕೆಗಳೇ ಅಲ್ಲಿ ಉಗ್ರಗಾಮಿ ಗುಂಪುಗಳನ್ನು ಇಂದಿಗೂ ಸಹ ಹೇಗೆ ಧೈರ್ಯಶಾಲಿಯಾಗಿವೆ ಎಂಬುದನ್ನು ಬಹಿರಂಗಪಡಿಸುತ್ತದೆ. ರಾಜತಾಂತ್ರಿಕತೆಗಾಗಿ ನಗುತ್ತಲೇ ನಮ್ಮ ವಿಭಜನೆಯ ಬಗ್ಗೆ ಕನಸು ಕಾಣುವ ನೆರೆಹೊರೆಯ ಶಕ್ತಿಗಳ ಬಗ್ಗೆ ಭಾರತ ಎಚ್ಚೆತ್ತುಕೊಂಡಿರಬೇಕು ರಕ್ಷಣಾ ತಜ್ಞ ಮತ್ತು ಮಾಜಿ ಸೇನಾ ಅಧಿಕಾರಿ ಕರ್ನಲ್ ಮಯಾಂಕ್ ಚೌಬೆ ಎಕ್ಸ್‌ನಲ್ಲಿ ಟ್ವೀಟ್ ಹಂಚಿಕೊಂಡಿದ್ದಾರೆ

## ಮಿನಿ ನ್ಯೂಸ್

### 11 ವರ್ಷಗಳ ಹಿಂದೆ ಪತನಗೊಂಡಿದ್ದ ವಿಮಾನ; ಅವಶೇಷ ಶೋಧ ಪುನರಾರಂಭ

**ಕ್ವಾಲಾಲಂಪುರ:** 11 ವರ್ಷಗಳ ಹಿಂದೆ ಹಿಂದೂ ಮಹಾಸಾಗರದ ದಕ್ಷಿಣ ಪ್ರದೇಶದಲ್ಲಿ ಪತನಗೊಂಡಿರುವ ಮಲೇಷ್ಯಾ ವಿಮಾನದ ಅವಶೇಷಗಳನ್ನು ಪತ್ತೆಹಚ್ಚುವುದಕ್ಕಾಗಿ ಕೈಗೊಂಡಿರುವ ಆಳ ಸಮುದ್ರ ಶೋಧ ಕಾರ್ಯಾಚರಣೆಯನ್ನು ಡಿಸೆಂಬರ್ 30ರಿಂದ ಪುನಾರಂಭಿಸಿರುವುದಾಗಿ ಮಲೇಷ್ಯಾ ಸಾರಿಗೆ ಸಚಿವಾಲಯ ಬುಧವಾರ ತಿಳಿಸಿದೆ. 2014ರ ಮಾರ್ಚ್ 8ರಂದು 239 ಪ್ರಯಾಣಿಕರನ್ನು ಹೊತ್ತು ಕ್ವಾಲಾಲಂಪುರದಿಂದ ಬೀಜಿಂಗ್‌ಗೆ ಹೊರಟಿದ್ದ ಬೋಯಿಂಗ್ 777 ವಿಮಾನವು ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಸಂಪರ್ಕ ಕಳೆದುಕೊಂಡಿತ್ತು. ವಿಮಾನವು ಹಿಂದೂ ಮಹಾಸಾಗರದ ದಕ್ಷಿಣದ ಕಡೆಗೆ ಸಾಗಿರುವುದು ಉಪಗ್ರಹ ಸೆರೆ ಹಿಡಿದ ದತ್ತಾಂಶಗಳಿಂದ ತಿಳಿದುಬಂದಿದ್ದು, ಅದೇ ಪ್ರದೇಶದಲ್ಲಿ ಪತನಗೊಂಡಿದೆ ಎಂದು ನಂಬಲಾಗಿದೆ. ಆಳ ಸಮುದ್ರದ ಕಾರ್ಯಾಚರಣೆ ನಡೆಸಿ, ಅವಶೇಷಗಳನ್ನು ಪತ್ತೆಹಚ್ಚಲು ಸರ್ಕಾರ ನಿರ್ಧರಿಸಿದೆ.

### 80,000 ಜನರ ಮುಂದೆ ಗುಂಡಿಕ್ಕಿ ಕೊಂದರು 13 ವರ್ಷದ ಬಾಲಕನೇ ಶೂಟರ್

**ಕಾಬೂಲ್:** ಅಫ್ಘಾನಿಸ್ತಾನದ ಖೋಸ್ಟ್ ನಗರದಲ್ಲಿ ಒಂದೇ ಕುಟುಂಬದ 13 ಮಂದಿಯನ್ನು ಹತ್ಯೆ ಮಾಡಿದ್ದ ಅಪರಾಧಿಯನ್ನು ತಾಲಿಬಾನ್ ಆಡಳಿತ ಬಹಿರಂಗವಾಗಿ ಗುಂಡಿಕ್ಕಿ ಕೊಂದಿದೆ. 2021ರಲ್ಲಿ ತಾಲಿಬಾನ್ ಆಡಳಿತ ಪ್ರಾರಂಭವಾದಾಗಿನಿಂದ 11ನೇ ಮರಣದಂಡನೆ ಇದಾಗಿದೆ. ಸಾರ್ವಜನಿಕವಾಗಿ ಮರಣದಂಡನೆ ವಿಧಿಸುತ್ತಿರುವುದು ಅಫ್ಘಾನಿಸ್ತಾನದಲ್ಲಿ ಷರಿಯಾ ಕಾನೂನಿನ ಮರಳುವಿಕೆಯನ್ನು ಸಹ ಗುರುತಿಸುತ್ತದೆ. ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ವಿಧಿಸಲಾದ ಈ ಮರಣದಂಡನೆಯನ್ನು ಮೈದಾನದಲ್ಲಿ 80,000 ಜನರು ವೀಕ್ಷಿಸಿದ್ದಾರೆ.

ಅಫ್ಘಾನಿಸ್ತಾನದ ಸುಪ್ರೀಂ ಕೋರ್ಟ್ ಅಧಿಕೃತ ಹೇಳಿಕೆಯ ಪ್ರಕಾರ, ಅಬ್ದುಲ್ ರೆಹಮಾನ್ ಮತ್ತು ಆತನ ಕುಟುಂಬದ ಮಹಿಳೆಯರು, ಮಕ್ಕಳು ಸೇರಿದಂತೆ 13 ಜನರನ್ನು ಕೊಂದ ಅಪರಾಧಕ್ಕಾಗಿ ಮಂಗಲ್ ಎಂಬ ವ್ಯಕ್ತಿಗೆ ಮರಣದಂಡನೆ ವಿಧಿಸಲಾಗಿದೆ. ಈ ಆದೇಶವನ್ನು ಅಫ್ಘಾನಿಸ್ತಾನದ ಸರ್ವೋಚ್ಚ ನಾಯಕ ಹಿಬತುಲ್ಲಾ ಅಖುಂಜಾದಾ ಅನುಮೋದಿಸಿದ್ದಾರೆ ಎಂದು ಹೇಳಿಕೆ ತಿಳಿಸಿದೆ. ಸಂತ್ರಸ್ತರ ಕುಟುಂಬಕ್ಕೆ ಕ್ಷಮೆ, ಶಿಕ್ಷೆಯ ಆಯ್ಕೆಯನ್ನು ನೀಡಲಾಗಿತ್ತು. ಆದರೆ, ಸಂತ್ರಸ್ತ ಕುಟುಂಬ ಕಿಸಾಸ್‌ಗೆ ಒತ್ತಾಯಿಸಿದ ನಂತರ, ಮರಣದಂಡನೆ ಆದೇಶ ನೀಡಲಾಯಿತು ಎಂದು ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಲಾದ ಹೇಳಿಕೆ ತಿಳಿಸಿದೆ. ಷರಿಯಾ ಕಾನೂನಿನ ಪ್ರಕಾರ ಗುಂಡಿಕ್ಕಿ ಕೊಲ್ಲಲಾಯಿತು ಎಂದು

### ಸಂಚಾರ ಸಾಥಿ ಆ್ಯಪ್ ಕಡ್ಡಾಯ ಆದೇಶ ಹಿಂಪಡೆದ ಕೇಂದ್ರ ಸರ್ಕಾರ

**ನವದೆಹಲಿ:** ಕೇಂದ್ರ ಸರ್ಕಾರವು ಮೊಬೈಲ್‌ಗಳಲ್ಲಿ ಸಂಚಾರ ಸಾಥಿ ಆ್ಯಪ್ ಅಳವಡಿಕೆ ಕಡ್ಡಾಯಗೊಳಿಸುವ ಆದೇಶವನ್ನು ಬುಧವಾರ ಹಿಂಪಡೆದುಕೊಂಡಿದೆ. ಮೊಬೈಲ್‌ಗಳಲ್ಲಿ ಸಂಚಾರ ಸಾಥಿ ಆ್ಯಪ್ ಪ್ರಿ-ಇನ್‌ಸ್ಟಾಲ್ ಮಾಡುವುದಕ್ಕೆ ಕಾಂಗ್ರೆಸ್ ಸೇರಿದಂತೆ ವಿಪಕ್ಷಗಳಿಂದ ವ್ಯಾಪಕ ಟೀಕೆಗಳು ವ್ಯಕ್ತವಾಗಿತ್ತು. ಒಂದೇ ದಿನದಲ್ಲಿ ಸ್ವಯಂ ಪ್ರೇರಿತವಾಗಿ ಸಂಚಾರ ಸಾಥಿ ಆ್ಯಪ್ ಡೌನ್‌ಲೋಡ್ ಮಾಡಿ ಕೊಂಡವರ ಪ್ರಮಾಣ 10 ಪಟ್ಟು ಏರಿಕೆಯಾಗಿತ್ತು.


ಬಳಕೆದಾರರ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿದೆ. ಬಳಕೆದಾರರಿಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುವುದು ಉದ್ದೇಶವಾಗಿತ್ತು. ಕಳೆದೊಂದು ದಿನದಲ್ಲಿ 6 ಲಕ್ಷ ಮಂದಿ ಆ್ಯಪ್ ಡೌನ್‌ಲೋಡ್ ಮಾಡಿದ್ದು, 10 ಪಟ್ಟು ಹೆಚ್ಚಳ ಕಂಡುಬಂದಿದೆ. ಆ್ಯಪ್‌ಗೆ ಹೆಚ್ಚುತ್ತಿರುವ ಬೆಂಬಲದ ಹಿನ್ನೆಲೆಯಲ್ಲಿ ಪ್ರಿ-ಇನ್‌ಸ್ಟಾಲ್ ಕಡ್ಡಾಯಗೊಳಿಸದಿರಲು ನಿರ್ಧರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ನಿಷೇಧಿತ ಕೆಮ್ಮಿನ ಸಿರಪ್ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿ ಸೆರೆ

**ಲಕ್ನೋ:** ನಿಷೇಧಿತ ಕೆಮ್ಮಿನ ಸಿರಪ್, ಕೊಡೈನ್ ಹೊಂದಿರುವ ಇತರ ಔಷಧಿಗಳ ಅಕ್ರಮ ಸಂಗ್ರಹಣೆ ಮತ್ತು ವ್ಯಾಪಾರಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶದ ವಿಶೇಷ ಕಾರ್ಯ ಪಡೆ ಲಕ್ನೋದ ವ್ಯಕ್ತಿಯನ್ನು ಬಂಧಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪೊಲೀಸ್ ಮಹಾನಿರ್ದೇಶಕರ ಕಚೇರಿ ಬಿಡುಗಡೆ ಮಾಡಿದ ಹೇಳಿಕೆಯ ಪ್ರಕಾರ, ವಿಶೇಷ ಕಾರ್ಯಪಡೆ (ಎಸ್‌ಟಿಎಫ್) ಮಾದಕ ವಸ್ತುವಾಗಿ ಬಳಸಲು ಫೆನ್ಸಡಿಲ್ ಕೆಮ್ಮಿನ ಸಿರಪ್ ಮತ್ತು ಕೊಡೈನ್ ಹೊಂದಿರುವ ಇತರ ಔಷಧಿಗಳ ಅಕ್ರಮ ಸಂಗ್ರಹಣೆ ಮತ್ತು ವ್ಯಾಪಾರದ ಬಗ್ಗೆ ಮಾಹಿತಿಯನ್ನು ಪಡೆಯುತ್ತಿತ್ತು. ಈ ಔಷಧಿಗಳನ್ನು ಉತ್ತರ ಪ್ರದೇಶ, ಉತ್ತರಾಖಂಡ, ಬಿಹಾರ, ಜಾರ್ಖಂಡ್, ಅಸ್ಸಾಂ, ಪಶ್ಚಿಮ ಬಂಗಾಳ ಮತ್ತು ಬಾಂಗ್ಲಾದೇಶದ ಇತರ ಭಾಗಗಳಿಗೆ ಕಳುಹಿಸಲಾಗುತ್ತಿದೆ ಎಂದು ಮಾಹಿತಿದಾರರು ಬಹಿರಂಗಪಡಿಸಿದ್ದಾರೆ.

ಇದರ ನಂತರ, ಎಸ್‌ಟಿಎಫ್ ಮತ್ತು ಆಹಾರ ಸುರಕ್ಷತೆ ಮತ್ತು ಔಷಧ ಇಲಾಖೆ ಜಂಟಿ ತನಿಖಾ ಸಮಿತಿಯನ್ನು ರಚಿಸಿತು, ಇದು ನಂತರ ಹೆಚ್ಚಿನ ಪ್ರಮಾಣದ ಅಕ್ರಮ ಫೆನ್ಸಡಿಲ್ ಕೆಮ್ಮಿನ ಸಿರಪ್ ಅನ್ನು ವಶಪಡಿಸಿಕೊಂಡಿದೆ.ಇದರ ನಂತರ ಸುಶಾಂತ್ ಗಾಲ್ಫ್ ಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತನಿಖೆಯ ಸಮಯದಲ್ಲಿ, ಎಸ್‌ಟಿಎಫ್ ನವೆಂಬರ್ 12ರಂದು ಇಬ್ಬರು ಆರೋಪಿಗಳಾದ ವಿಭೋರ್ ರಾಣಾ ಮತ್ತು ವಿಶಾಲ್ ಸಿಂಗ್ ಅವರನ್ನು ಬಂಧಿಸಿತು. ಮತ್ತೊಬ್ಬ ಆರೋಪಿ ಅಮಿತ್ ಕುಮಾರ್ ಸಿಂಗ್ ಅಲಿಯಾಸ್ ಅಮಿತ್ ಟಾಟಾ ಅವರನ್ನು ನವೆಂಬರ್ 27ರಂದು ಬಂಧಿಸಲಾಯಿತು.

ವಿಚಾರಣೆಯ ಸಮಯದಲ್ಲಿ, ಪ್ರಕರಣದಲ್ಲಿ ನಾಲ್ಕನೇ ಆರೋಪಿ ಅಲೋಕ್ ಪ್ರತಾಪ್ ಸಿಂಗ್ ಪಾತ್ರವನ್ನು ಅವರು ಬಹಿರಂಗಪಡಿಸಿದರು. ನಿನ್ನೆ ಸುಶಾಂತ್ ಗಾಲ್ಫ್ ಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯ ಪಲಾಸಿಯೊ ಮಾಲ್ ಬಳಿ ಸಿಂಗ್ ಅವರನ್ನು ಬಂಧಿಸಲಾಗಿದೆ ಎಂದು ಹೇಳಿಕೆ ತಿಳಿಸಿದೆ. ಗ್ಯಾಂಗ್‌ನ ಇತರ ಸದಸ್ಯರ ಬಗ್ಗೆ ಮಾಹಿತಿಗಾಗಿ ಅವರನ್ನು ವಿಚಾರಣೆ ನಡೆಸಲಾಗುತ್ತಿದೆ ಎಂದು ಅದು ಹೇಳಿದೆ.




## ಇಮ್ರಾನ್ ಖಾನ್ ಭಾರತದ ಗೆಳೆಯ, ಸೈಕೋ ಮುನೀರ್ ಯುದ್ಧತಂತ್ರಗಳೆಲ್ಲಾ ಅಯೋಮಯ

# ಪಾಕಿಸ್ತಾನ ರಾಜಕಾರಣದಲ್ಲಿ ಸಂಚಲನ

**ಇಸ್ಲಾಮಾಬಾದ್:** ಪಾಕಿಸ್ತಾನದ ಸೇನಾಧ್ಯಕ್ಷ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್ ಭಾರತದೊಂದಿಗೆ ಯುದ್ಧ ತಯಾರಿ ನಡೆಸಿದ್ದಾರೆ ಎಂದು ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಸಹೋದರಿ ಅಲೀಮಾ ಖಾನ್ ಗಂಭೀರ ಆರೋಪ ಮಾಡಿದ್ದಾರೆ. ಅಸಿಮ್ ಮುನೀರ್ ಅವರನ್ನು ಇಸ್ಲಾಮಿಕ್ ಮೂಲಭೂತವಾದಿ ಎಂದು ಕರೆದಿರುವ ಅಲೀಮಾ ಖಾನ್, ಇಮ್ರಾನ್ ಖಾನ್ ಅವರನ್ನು ಶುದ್ಧ ಉದಾರವಾದಿ ನಾಯಕ ಎಂದು ಬಣ್ಣಿಸಿದ್ದಾರೆ. ಸ್ಕೈ ನ್ಯೂಸ್‌ಗೆ ನೀಡಿದ ವಿಶೇಷ ಸಂದರ್ಶನದಲ್ಲಿ, ಜೈಲಿನಲ್ಲಿ ತಮ್ಮ ಸಹೋದರ ಇಮ್ರಾನ್ ಖಾನ್ ಅವರನ್ನು ಭೇಟಿ ಮಾಡಿದ್ದರ ಬಗ್ಗೆ ಮಾತನಾಡಿದ ಅಲೀಮಾ ಖಾನ್, ಜೈಲಿನಲ್ಲಿ ಇಮ್ರಾನ್ ಖಾನ್ ಭೇಟಿ ಅತ್ಯಂತ ನೋವಿನ ಘಳಿಗೆ ಎಂದು ಬಾವುಕರಾಗಿ ಹೇಳಿದರು. ಅಲ್ಲದೇ ಪ್ರಧಾನಮಂತ್ರಿ ಶೆಹಬಾಜ್ ಷರೀಫ್ ನೇತೃತ್ವದ ಪಾಕಿಸ್ತಾನ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಇಮ್ರಾನ್ ಖಾನ್ ಭ್ರಷ್ಟಾಚಾರ ಆರೋಪದಡಿ ಜೈಲುಶಿಕ್ಷೆ ಅನುಭವಿಸುತ್ತಿದ್ದಾರೆ. ಜನರಲ್ ಅಸಿಮ್ ಮುನೀರ್‌ಓರ್ವ ಇಸ್ಲಾಮಿಕ್ ಸಂಪ್ರದಾಯವಾದಿಯಾಗಿದ್ದು, ಭಾರತದೊಂದಿಗೆ ಪೂರ್ಣ ಪ್ರಮಾಣದ ಯುದ್ಧ ಮಾಡುವ ಷಡ್ಯಂತ್ರ ನಡೆಸಿದ್ದಾರೆ. ಭಾರತದ ವಿರುದ್ಧ ಅವರು ನೀಡುತ್ತಿರುವ ಹೇಳಿಕೆಗಳು, ಪಾಕಿಸ್ತಾನವನ್ನು ಯುದ್ಧದ ಮೈದಾನಕ್ಕೆ ದೂಡಲಿದೆ. ಆದರೆ ಇಮ್ರಾನ್ ಖಾನ್ ಉದಾರವಾದಿ ನಾಯಕರಾಗಿದ್ದು, ನೆರೆಯ ರಾಷ್ಟ್ರದೊಂದಿಗೆ ಸ್ನೇಹ ಬೆಳೆಸಲು ಪ್ರಯತ್ನಿಸುತ್ತಿದ್ದಾರೆ ಎಂದು ಅಲೀಮಾ ಖಾನ್ ಹೇಳಿದ್ದಾರೆ. ಮೇ ತಿಂಗಳಲ್ಲಿ ಭಾರತ-ಪಾಕಿಸ್ತಾನ ಯುದ್ಧದ ಹಿಂದಿನ ಕಾರಣದ ಬಗ್ಗೆ ಕೇಳಿದಾಗ, ಅಲೀಮಾ ಖಾನ್ ಅವರು ಅದರ ಹೊಣೆಯನ್ನು ಸೇನಾಧ್ಯಕ್ಷ ಅಸಿಮ್ ಮುನೀರ್ ಮೇಲೆ ಹೊರಿಸಿದರು. ಅಸಿಮ್ ಮುನೀರ್ ಬಹಳ ಆಮೂಲಾಗ್ರ ಇಸ್ಲಾಮಿಸ್ಟ್ ಮತು ಇಸ್ಲಾಮಿಕ್ ಸಂಪ್ರದಾಯವಾದಿ. ಇದೇ ಕಾರಣಕ್ಕೆ ಅವರು ಭಾರತದೊಂದಿಗಿನ ಯುದ್ಧಕ್ಕಾಗಿ ಹಂಬಲಿಸುತ್ತಿದ್ದಾರೆ.

ಅವರ ಇಸ್ಲಾಮಿಕ್ ಮೂಲಭೂತವಾದ, ಸಂಪ್ರದಾಯವಾದವು ಇಸ್ಲಾಂನಲ್ಲಿನಂಬಿಕೆಯಿಲ್ಲದವರ ವಿರುದ್ಧ ಹೋರಾಡಲು ಅವರನ್ನು ಒತ್ತಾಯಿಸುತ್ತದೆ ಎಂದು ಇಮ್ರಾನ್ ಖಾನ್ ಸಹೋದರಿ ಕಿಡಿಕಾರಿದರು. ಇಮ್ರಾನ್ ಖಾನ್ ಅಧಿಕಾರದಲ್ಲಿದ್ದಾಗ ಭಾರತದೊಂದಿಗೆ ಸ್ನೇಹ ಬೆಳೆಸಲು ಪ್ರಯತ್ನಿಸಿದರು. ಶಾಂತಿ ಸ್ಥಾಪನೆಯಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂಬುದು ಅವರ ಖಚಿತ ನಿಲುವಾಗಿದೆ. ಪಾಕಿಸ್ತಾನದ ಜನರ ಮನಸ್ಸಿನಿಂದ ಯುದ್ಧದ ಭಯ ಹೋಗಲಾಡಿಸಲು ಪ್ರಯತ್ನಿಸುತ್ತಿರುವ ನನ್ನ ಸಹೋದರ ಈ ದೇಶದ ನಿಜವಾದ ಆಸ್ತಿ ಎಂದು ಅಲೀಮಾ ಖಾನ್ ಬಣ್ಣಿಸಿದರು. ಇಮ್ರಾನ್ ಖಾನ್ ಭಾರತದ ಮಿತ್ರ ಎಂಬ ಅವರ ಹೇಳಿಕೆ ಎರಡೂ ದೇಶಗಳಲ್ಲಿ ಸದ್ದು ಮಾಡುತ್ತಿದೆ.

ಜೈಲಿನಲ್ಲಿ ಇಮ್ರಾನ್ ಖಾನ್ ಸಾವು ವದಂತಿ ಹಬ್ಬಿದ್ದ ಸಂದರ್ಭದಲ್ಲಿ, ಅಲೀಮಾ ಖಾನ್ ಅವರು ತಮ್ಮ ಸಹೋದರನನ್ನು ಕಾಣಲು ಜೈಲಿಗೆ ಭೇಟಿ ನೀಡಿದ್ದರು. ಆಗ ಪೊಲೀಸರು ಅಲೀಮಾ ಖಾನ್, ಇತರರ ಮೇಲೆ ಹಲ್ಲೆ ನಡೆಸಿದ್ದರು ಎಂಬ ಆರೋಪ ಕೇಳಿಬಂದಿತ್ತು. ಸಹೋದರನನ್ನು ಭೇಟಿ ಮಾಡಿಸುವಂತೆ ಒತ್ತಾಯಿಸಿ ಜೈಲು ಆವರಣದ ಹೊರಗಡೆ ಧರಣಿ ಕುಳಿತಿದ್ದ ಅಲೀಮಾ ಖಾನ್, ಕೊನೆಗೂ ಇಮ್ರಾನ್ ಖಾನ್ ಅವರನ್ನು ಭೇಟಿಯಾಗುವಲ್ಲಿ ಯಶಸ್ವಿಯಾಗಿದ್ದಾರೆ. ಇಮ್ರಾನ್ ಖಾನ್ ಅವರನ್ನು ಭಾರತದ ಮಿತ್ರ ಎಂದು ಕರೆದಿರುವ ಅಲೀಮಾ ಖಾನ್, ಉಭಯ ರಾಷ್ಟ್ರಗಳ ಮಧ್ಯೆ ಶಾಂತಿ ಸ್ಥಾಪನೆಯಾದಾಗ ಮಾತ್ರ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಗಲು ಸಾಧ್ಯ ಎಂದು ಪ್ರತಿಪಾದಿಸಿದ್ದಾರೆ. ಆದರೆ ಶೆಹಬಾಜ್ ಷರೀಫ್ ಮತ್ತು ಅಸಿಮ್ ಮುನೀರ್ ಪಾಕಿಸ್ತಾನಿಯರಿಗೆ ಕನಸಿನಲ್ಲೂ ಯುದ್ಧದ ದೃಶ್ಯ ತೋರಿಸುತ್ತಿದ್ದಾರೆ ಎಂದು ಅಲೀಮಾ ಖಾನ್ ತೀವ್ರ ಆಕ್ರೋಶ ಹೊರಹಾಕಿದ್ದಾರೆ. ಶಾಂತಿ ಕುರಿತ ಅವರ ಮಾತುಗಳು ಮೆಚ್ಚುಗೆಗೆ ಪಾತ್ರವಾಗಿವೆ.

**ನೇರ ಯುದ್ಧದ ಕುತಂತ್ರ**


**ಪಾಕಿಸ್ತಾನ ಸೇನಾಧ್ಯಕ್ಷ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್, ಭಾರತಕ್ಕೆ ಪರಮಾಣು ಯುದ್ಧದ ಬೆದರಿಕೆ ಹಾಕುತ್ತಲೇ ಇದ್ದಾರೆ. ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ ಭಾರತ ನಡೆಸಿದ ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆ ವೇಳೆ ಪೆಟ್ಟು ತಿಂದಿರುವ ಅಸಿಮ್ ಮುನೀರ್, ಭಾರತದೊಂದಿಗೆ ನೇರ ಯುದ್ಧದ ಕುತಂತ್ರ ನಡೆಸುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಆದರೆ ಭಾರತ ಪರಮಾಣು ಯುದ್ಧ ಗೊಡ್ಡು ಬೆದರಿಕೆಗಳಿಗೆ ಹೆದರುವುದಿಲ್ಲ ಎಂಬ ಸತ್ಯ ಕೂಡ ಇಡೀ ಜಗತ್ತಿಗೆ ಗೊತ್ತಿದೆ.**

**ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಸಾವಿನ ವದಂತಿಗೆ ಕೊನೆಗೂ ತೆರೆಬಿದ್ದಿದೆ. ಜೈಲಿನಲ್ಲಿ ಇಮ್ರಾನ್ ಖಾನ್ ಅವರನ್ನು ಭೇಟಿ ಮಾಡಿ ಬಂದಿರುವ ಸಹೋದರಿ ಅಲೀಮಾ ಖಾನ್, ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳಲ್ಲಿ ಸಂಚಲನ ಸೃಷ್ಟಿಸುವಂತಹ ಹೇಳಿಕೆಗಳನ್ನು ನೀಡಿದ್ದಾರೆ. ಪಾಕ್ ಸೇನಾಧ್ಯಕ್ಷ ಅಸಿಮ್ ಮುನೀರ್ ಭಾರತದ ವಿರುದ್ಧ ಯುದ್ಧಕ್ಕೆ ತಯಾರಿ ನಡೆಸುತ್ತಿದ್ದಾರೆ ಎಂದು ಆರೋಪಿಸಿರುವ ಅಲೀಮಾ ಖಾನ್, ತಮ್ಮ ಸಹೋದರ ಇಮ್ರಾನ್ ಖಾನ್ ಭಾರತದೊಂದಿಗೆ ಸ್ನೇಹ ಬೆಳೆಸಲು ಪ್ರಯತ್ನಿಸುತ್ತಿದ್ದಾರೆ.**

**– ಅಲೀಮಾ ಖಾನ್, ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಸಹೋದರಿ**



# ಹೊಸ ನಕ್ಷತ್ರಪುಂಜ ಕಂಡು ಹಿಡಿದ ಪುಣೆ ವಿಜ್ಞಾನಿಗಳು



**ಪುಣೆ:** ಪುಣೆಯ ಖಗೋಳ ಭೌತಶಾಸ್ತ್ರ ಸಂಸ್ಥೆಯ ಇಬ್ಬರು ಸಂಶೋಧಕರು ಇದುವರೆಗೆ ಗಮನಿಸದ ಅತ್ಯಂತ ದೂರದ ಸುರುಳಿಯಾಕಾರದ ಗ್ಯಾಲಕ್ಸಿಗಳಲ್ಲಿ ಒಂದಾದ ಅಲಕಾನಂದ ಎಂಬ ನಕ್ಷತ್ರಪುಂಜವನ್ನು ಕಂಡುಹಿಡಿದಿದ್ದಾರೆ. ಬ್ರಹ್ಮಾಂಡವು ಕೇವಲ 1.5 ಶತಕೋಟಿ ವರ್ಷಗಳಷ್ಟು ಹಳೆಯದಾಗಿದ್ದಾಗ ಅಸ್ತಿತ್ವದಲ್ಲಿದ್ದ ಬೃಹತ್, ಉತ್ತಮವಾಗಿ ರೂಪುಗೊಂಡ ವ್ಯವಸ್ಥೆ ಇದಾಗಿದೆ. ಈ ಸಂಶೋಧನೆಯು ಆರಂಭಿಕ ಬ್ರಹ್ಮಾಂಡವು ಹಿಂದೆ ಊಹಿಸಿದ್ದಕ್ಕಿಂತ ಹೆಚ್ಚು ವಿಕಸನಗೊಂಡಿತು ಎಂಬುದಕ್ಕೆ ಬೆಳೆಯುತ್ತಿರುವ ಪುರಾವೆಗಳನ್ನು ಹೆಚ್ಚಿಸುತ್ತದೆ ಎನ್ನಲಾಗಿದೆ. ಹಿಮಾಲಯ ನದಿಯ ನಂತರ ಅಲಕಾನಂದ ಎಂದು ಹೆಸರಿಸಲಾದ ಭವ್ಯ-ವಿನ್ಯಾಸದ ಸುರುಳಿಯಾಕಾರದ ನಕ್ಷತ್ರ ಪುಂಜವು ಆರಂಭಿಕ ಸಂಕೀರ್ಣ ಗ್ಯಾಲಕ್ಸಿಯ ರಚನೆಗಳು ಹೇಗೆ ರೂಪುಗೊಂಡವು ಎಂಬುದರ ಕುರಿತು ಅಸ್ತಿತ್ವದಲ್ಲಿರುವ ಸಿದ್ಧಾಂತಗಳನ್ನು ಪ್ರಶ್ನಿಸುತ್ತದೆ ಎಂದು ಸಂಶೋಧಕರು ಮಾಹಿತಿ ನೀಡಿದ್ದಾರೆ.

ಈ ಆರಂಭಿಕ ಯುಗದಲ್ಲಿ ಅಂತಹ ಉತ್ತಮವಾಗಿ ರೂಪುಗೊಂಡ ಸುರುಳಿಯಾಕಾರದ ನಕ್ಷತ್ರಪುಂಜವನ್ನು ಕಂಡುಹಿಡಿಯುವುದು ಸಾಕಷ್ಟು ಅನಿರೀಕ್ಷಿತವಾಗಿದೆ. ನಾವು ಭಾವಿಸಿದ್ದಕ್ಕಿಂತ ಬಹಳ ಮುಂಚೆಯೇ ಅತ್ಯಾಧುನಿಕ ರಚನೆಗಳನ್ನು ನಿರ್ಮಿಸಲಾಗುತ್ತಿದೆ ಎಂದು ಇದು ತೋರಿಸುತ್ತದೆ ಎಂದು ಸಂಶೋಧಕರಲ್ಲಿ ಒಬ್ಬರು ಹೇಳಿದರು. ಬ್ರಹ್ಮಾಂಡವು ಅದರ ಪ್ರಸ್ತುತ ಯುಗದ ಕೇವಲ 10 ಪ್ರತಿಶತದಷ್ಟು ಇದ್ದಾಗ ಅಸ್ತಿತ್ವದಲ್ಲಿದ್ದರೂ, ಅಲಕಾನಂದಕ್ಷೀರಪಥಕ್ಕೆ ಗಮನಾರ್ಹವಾಗಿ ಹೋಲುತ್ತದೆ. ಸಂಶೋಧನೆಗಳನ್ನು ಯುರೋಪಿಯನ್ ಜರ್ನಲ್ ಖಗೋಳವಿಜ್ಞಾನ ಮತ್ತು ಖಗೋಳ ಭೌತಶಾಸ್ತ್ರದಲ್ಲಿ ಪ್ರಕಟಿಸಲಾಗಿದೆ. ನಾಸಾದ ಜೇಮ್ಸ್ ವೆಬ್ ಬಾಹ್ಯಾಕಾಶ ದೂರದರ್ಶಕ ಬಳಸಿ, ಪುಣೆ ಮೂಲದ ರಾಷ್ಟ್ರೀಯ ರೇಡಿಯೋ ಆಸ್ಟ್ರೋಫಿಸಿಕ್ಸ್ ಕೇಂದ್ರದ ಸಂಶೋಧಕರಾದ ರಾಶಿ ಜೈನ್ ಮತ್ತು ಯೋಗೇಶ್ ವಡಡೇಕರ್ ಈ ನಕ್ಷತ್ರಪುಂಜವನ್ನು ಗುರುತಿಸಿದ್ದಾರೆ.

ಅಲಕಾನಂದ ಸುಮಾರು 4 ರೆಡ್‌ಶಿಫ್ಟ್‌ನಲ್ಲಿದೆ, ಅಂದರೆ ಅದರ ಬೆಳಕು ಭೂಮಿಯನ್ನು ತಲುಪಲು 12 ಶತಕೋಟಿ ವರ್ಷಗಳಿಗಿಂತ ಹೆಚ್ಚು ಕಾಲ ಪ್ರಯಾಣಿಸಿದೆ ಎಂದು ಜೈನ್ ಹೇಳಿದರು.

ನಾವು ಈ ನಕ್ಷತ್ರಪುಂಜವನ್ನು ಬಿಗ್ ಬ್ಯಾಂಗ್ ನಂತರ ಕೇವಲ 1.5 ಶತಕೋಟಿ ವರ್ಷಗಳ ನಂತರ ಕಾಣಿಸಿಕೊಂಡಂತೆ ನೋಡುತ್ತಿದ್ದೇವೆ.

ಈ ಆರಂಭಿಕ ಯುಗದಲ್ಲಿ ಇಷ್ಟು ಚೆನ್ನಾಗಿ ರೂಪುಗೊಂಡ ಸುರುಳಿಯಾಕಾರದ ನಕ್ಷತ್ರಪುಂಜವನ್ನು ಕಂಡುಹಿಡಿಯುವುದು ಸಾಕಷ್ಟು ಅನಿರೀಕ್ಷಿತವಾಗಿದೆ. ನಾವು ಭಾವಿಸಿದ್ದಕ್ಕಿಂತ ಮುಂಚೆಯೇ ಅತ್ಯಾಧುನಿಕ ರಚನೆಗಳನ್ನು ನಿರ್ಮಿಸಲಾಗುತ್ತಿದೆ ಎಂದು ಇದು ತೋರಿಸುತ್ತದೆ ಎಂದು ಅವರು ಹೇಳಿದರು. ಅತಿಗೆಂಪು ಸಂವೇದನೆ ಮತ್ತು ರೆಸಲ್ಯೂಶನ್ ಅನ್ನು ಬಳಸಿಕೊಂಡು, ಅಲಕಾನಂದವು ನಕ್ಷತ್ರಗಳಲ್ಲಿ ಸೂರ್ಯನ ದ್ರವ್ಯರಾಶಿಯ ಸರಿಸುಮಾರು 10 ಶತಕೋಟಿ ಪಟ್ಟು ಹೊಂದಿದೆ ಮತ್ತು ವರ್ಷಕ್ಕೆ ಸುಮಾರು 63 ಸೌರ ದ್ರವ್ಯರಾಶಿಗಳಲ್ಲಿ ಹೊಸ ನಕ್ಷತ್ರಗಳನ್ನು ರೂಪಿಸುತ್ತಿದೆ ಎಂದು ತಂಡವು ಕಂಡುಹಿಡಿದಿದೆ, ಇದು ಕ್ಷೀರಪಥದ ಪ್ರಸ್ತುತ ದರಕ್ಕಿಂತ ಸುಮಾರು 20 ರಿಂದ 30 ಪಟ್ಟು ಹೆಚ್ಚು ಎಂದು ಸಂಶೋಧಕರು

## ರೇವಂತ್ ರೆಡ್ಡಿ ಹಿಂದೂ ವಿರೋಧಿ ಹೇಳಿಕೆ ಖಂಡಿಸಿ ಸಿಡಿದೆದ್ದ ಬಿಜೆಪಿ

**ಹೈದರಾಬಾದ್:** ತೆಲಂಗಾಣ ಸಿಎಂ ಎ. ರೇವಂತ್ ರೆಡ್ಡಿ ಅವರ ಹಿಂದೂ ವಿರೋಧಿ ಹೇಳಿಕೆಗಳನ್ನು ಖಂಡಿಸಿರುವ ಬಿಜೆಪಿಯ ಹಿರಿಯ ನಾಯಕರು, ರಾಜ್ಯಾದ್ಯಂತ ಹಿಂದೂ ಏಕತೆಗೆ ಕರೆ ನೀಡಿದ್ದಾರೆ. ರೇವಂತ್ ರೆಡ್ಡಿ ಅವರ ಹೇಳಿಕೆಗಳನ್ನು ಖಂಡಿಸಿ ಇಂದಿನಿಂದ ತೆಲಂಗಾಣದಾದ್ಯಂತ ಪ್ರತಿಭಟನೆ ನಡೆಸಲು ರಾಜ್ಯ ಬಿಜೆಪಿ ಅಧ್ಯಕ್ಷ ಎನ್. ರಾಮಚಂದರ್ ರಾವ್ ಕರೆ ನೀಡಿದ್ದಾರೆ. ಅವರ ಪ್ರತಿಕೃತಿ ದಹನವೂ ಇದರಲ್ಲಿ ಸೇರಿದೆ. ಇತ್ತೀಚಿನ ಜುಬಿಲಿ ಹಿಲ್ಸ್ ಉಪಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಕಾಂಗ್ರೆಸ್ ಎಂದರೆ ಮುಸ್ಲಿಮರು ಮತ್ತು ಮುಸ್ಲಿಮರು ಎಂದರೆ ಕಾಂಗ್ರೆಸ್ ಎಂದು ಹೇಳಿದ್ದರು ಎಂದು ಪತ್ರಿಕಾ ಹೇಳಿಕೆಯಲ್ಲಿ ಕೇಂದ್ರ ಸಚಿವ ಕಿಶನ್ ರೆಡ್ಡಿ ಹೇಳಿದ್ದಾರೆ. ಎಐಎಂಐಎಂ ಜೊತೆಗಿನ ಸ್ನೇಹದಿಂದಾಗಿ ಸಿಎಂ ಹಿಂದೂಗಳು, ಹಿಂದೂ ದೇವರು, ದೇವತೆಗಳ ವಿರುದ್ಧ ದುರಹಂಕಾರದ ಹೇಳಿಕೆಗಳನ್ನು ನೀಡುತ್ತಿರುವಂತೆ ತೋರುತ್ತಿದೆ ಎಂದು ಅವರು ಹೇಳಿದರು ತೆಲಂಗಾಣದಲ್ಲಿಯೂ ಹಿಂದೂಗಳು ಒಂದಾಗುವ ಸಮಯ ಬಂದಿದೆ. ರೇವಂತ್ ರೆಡ್ಡಿ, ಕಾಂಗ್ರೆಸ್ ಪಕ್ಷಕ್ಕೆ ಹಿಂದೂಗಳ ಶಕ್ತಿಯನ್ನು ತೋರಿಸಬೇಕಾದ ಸಮಯ ಬಂದಿದೆ ಎಂದು ಕೇಂದ್ರ ಕಲ್ಲಿದ್ದಲು ಸಚಿವ ಕಿಶನ್ ರೆಡ್ಡಿ ಹೇಳಿದರು. ಕಾಂಗ್ರೆಸ್, ರೇವಂತ್ ರೆಡ್ಡಿ ಅವರ ದುರಹಂಕಾರವನ್ನು ಮತದ ಬಲವನ್ನು ಬಳಸಿಕೊಂಡು ತೆಗೆದುಹಾಕಬೇಕು, ಅದು ಅವರಿಗೆ ಅಧಿಕಾರಕ್ಕೆ ಬರಲು ಸಹಾಯ ಮಾಡಿತು ಎಂದು ಅವರು ಹೇಳಿದರು.

ಜುಬಿಲಿ ಹಿಲ್ಸ್ ಉಪಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್, ಬಿಆರ್‌ಎಸ್ ಚುನಾವಣೆಯಲ್ಲಿ ಗೆದ್ದರೆ ಹಿಂದೂಗಳು ತಮ್ಮ ಸ್ವಾಭಿಮಾನವನ್ನು ಕಳೆದುಕೊಳ್ಳುತ್ತಾರೆ ಎಂದು ಬಿಜೆಪಿ ಎಚ್ಚರಿಸಿತ್ತು ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಸಂಜಯ್ ಕುಮಾರ್ ಹೇಳಿದರು. ರೇವಂತ್ ರೆಡ್ಡಿ ಹೇಳಿಕೆಯ ನಂತರ ಬಿಜೆಪಿಯ ಎಚ್ಚರಿಕೆ ನಿಜವಾಯಿತು ಎಂದು ಅವರು ಹೇಳಿದರು. ಹಿಂದೂ ಸಮಾಜವು ವಿಭಜನೆಯಾಗಿ ಉಳಿಯುವ ಮೂಲಕ ಅವಮಾನಗಳನ್ನು ಎದುರಿಸಬೇಕೆ ಅಥವಾ ಏಕತೆಯನ್ನು ಖಚಿತಪಡಿಸಿಕೊಳ್ಳುವ ಮೂಲಕ ತಮ್ಮ ಶಕ್ತಿಯನ್ನು ಪ್ರದರ್ಶಿಸಬೇಕೆ ಎಂದು ಈಗ ಯೋಚಿಸಬೇಕು. ಬಿಜೆಪಿ ಎಂದಿಗೂ ಇತರ ಧರ್ಮಗಳನ್ನು ಅವಮಾನಿಸುವುದಿಲ್ಲ. ಬಿಜೆಪಿ ಎಲ್ಲಾ ಧರ್ಮಗಳನ್ನು ಗೌರವಿಸುತ್ತದೆ ಎಂದು ಅವರು ಹೇಳಿದರು. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಕೇಂದ್ರ ಸರ್ಕಾರವು ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್ ಎಂಬ ತತ್ವದೊಂದಿಗೆ ಕಾರ್ಯನಿರ್ವಹಿಸುತ್ತದೆ ಎಂದು ಸಂಜಯ್ ಕುಮಾರ್ ಹೇಳಿದರು. ನಿನ್ನೆ ಇಲ್ಲಿ ಆಡಳಿತಾರೂಢ ಕಾಂಗ್ರೆಸ್‌ನ ಕಾರ್ಯಕಾರಿಣಿ ಸಭೆಯನ್ನುದ್ದೇಶಿಸಿ ಮಾತನಾಡಿದ ರೇವಂತ್ ರೆಡ್ಡಿ, ಭವ್ಯ ಪಕ್ಷವು ಎಲ್ಲರನ್ನೂ ಕರೆದೊಯ್ಯುತ್ತದೆ ಮತ್ತು ಇದು ವಿಭಿನ್ನ ಮನಸ್ಥಿತಿ ಹೊಂದಿರುವ ಜನರಿಗೆ ನೆಲೆಯಾಗಿದೆ ಎಂದು ಹೇಳಿದರು.



## ಭಾರತ-ಪಾಕ್ ಯುದ್ಧ ನಿಲ್ಲಿಸಿದ್ದು ನಾನೇ, ನನಗೆ ನೊಬೆಲ್ ಸಿಗಬೇಕು

**ನಾನೇ ಎಂಟು ಯುದ್ಧಗಳನ್ನು ನಿಲ್ಲಿಸಿದ್ದು**

**ವಾಷಿಂಗ್ಟನ್:** ಭಾರತ-ಪಾಕಿಸ್ತಾನ ನಡುವಿನ ಸಂಘರ್ಷವನ್ನು ಕೊನೆಗೊಳಿಸಿದ್ದು ನಾನೇ ಎಂಬ ತಮ್ಮ ಹೇಳಿಕೆಯನ್ನು ಪುನರುಚ್ಚರಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಈವರೆಗೆ ನಾನು ಎಂಟು ಯುದ್ಧಗಳನ್ನು ನಿಲ್ಲಿಸಿದ್ದು, ಪ್ರತಿಯೊಂದಕ್ಕೂ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಕೊಡಬೇಕು ಎಂದು ಪ್ರತಿಪಾದಿಸಿದ್ದಾರೆ. ನಾವು ಎಂಟು ಯುದ್ಧಗಳನ್ನು ಕೊನೆಗೊಳಿಸಿದ್ದೇವೆ. ಈಗ ಮತ್ತೊಂದು ಯುದ್ಧವನ್ನು ಅಂತ್ಯಗೊಳಿಸುವ ವಿಶ್ವಾಸವಿದೆ ಎಂದು ಟ್ರಂಪ್ ರಷ್ಯಾ-ಉಕ್ರೇನ್ ಯುದ್ಧವನ್ನು ಉಲ್ಲೇಖಿಸಿ ಹೇಳಿದ್ದಾರೆ.


ಮೇ 10ರಂದು, ಅಮೆರಿಕ ಮಧ್ಯಸ್ಥಿಕೆಯಲ್ಲಿ ಸುದೀರ್ಘ ಮಾತುಕತೆಯ ನಂತರ ಭಾರತ ಮತ್ತು ಪಾಕಿಸ್ತಾನ ದೇಶಗಳು ಪೂರ್ಣ ಮತ್ತು ತಕ್ಷಣದ ಕದನ ವಿರಾಮಕ್ಕೆ ಒಪ್ಪಿಕೊಂಡಿವೆ ಎಂದು ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಘೋಷಿಸಿದಾಗಿನಿಂದ, ಯುದ್ಧ ನಿಲ್ಲಿಸಿದ್ದು ನಾನೇ ಎಂದು 60ಕ್ಕೂ ಹೆಚ್ಚು ಬಾರಿ ತಮ್ಮ ಹೇಳಿಕೆಯನ್ನು ಪುನರಾವರ್ತಿಸಿದ್ದಾರೆ.

ಭಾರತ, ಪಾಕಿಸ್ತಾನ ಯುದ್ಧ ವಿರಾಮದಲ್ಲಿ ಯಾವುದೇ ಮೂರನೇ ವ್ಯಕ್ತಿಯ ಹಸ್ತಕ್ಷೇಪವನ್ನು ಭಾರತ ನಿರಾಕರಿಸಿದೆ. ಏಪ್ರಿಲ್ 22ರಂದು 26 ನಾಗರಿಕರು ಹತ್ಯೆಯಾದ ಪೆಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಭಾರತವು ಮೇ 7ರಂದು ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಭಯೋತ್ಪಾದಕರ ನೆಲೆಗಳನ್ನು ಗುರಿಯಾಗಿಸಿಕೊಂಡು ಅಪರೇಷನ್ ಸಿಂಧೂರವನ್ನು ಪ್ರಾರಂಭಿಸಿತ್ತು.

ನಾಲ್ಕು ದಿನಗಳ ತೀವ್ರ ಗಡಿಯಾಚೆಗಿನ ಡ್ರೋನ್, ಕ್ಷಿಪಣಿ ದಾಳಿಯ ನಂತರ ಮೇ 10ರಂದು ಸಂಘರ್ಷವನ್ನು ಕೊನೆಗೊಳಿಸಲು ಭಾರತ ಮತ್ತು ಪಾಕಿಸ್ತಾನ ಒಪ್ಪಂದಕ್ಕೆ ಬಂದವು.

**ನಾನು ರಷ್ಯಾ-ಉಕ್ರೇನ್ ನಡುವಿನ ಯುದ್ಧ ಕೊನೆಗೊಳಿಸಿದರೆ ನೊಬೆಲ್ ಪ್ರಶಸ್ತಿ ಸಿಗಲಿದೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ಆದರೆ, ಭಾರತ ಮತ್ತು ಪಾಕಿಸ್ತಾನ ಸೇರಿದಂತೆ ಇತರೆ ಎಂಟು ಯುದ್ಧಗಳನ್ನು ನಿಲ್ಲಿಸಿದ್ದರ ಬಗ್ಗೆ ಯಾರೂ ಮಾತನಾಡುತ್ತಿಲ್ಲ. ಆ ಎಂಟು ಯುದ್ಧ ನಿಲ್ಲಿಸಿದ್ದಕ್ಕಾಗಿ ಪ್ರತಿಯೊಂದಕ್ಕೂ ನೊಬೆಲ್ ಸಿಗಬೇಕಿದೆ.**

**–ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ**



# ಪಟೇಲರ ವ್ಯಕ್ತಿತ್ವ ಶ್ಲಾಘಿಸಿದ ಕೇಂದ್ರ ರಕ್ಷಣಾ ಸಚಿವ

## ಸರ್ಕಾರಿ ಖಜಾನೆಯ ಹಣದಿಂದ ನೆಹರು ಬಾಬ್ರಿ ಮಸೀದಿ ನಿರ್ಮಿಸಲು ಮುಂದಾದಾಗ ಪಟೇಲರು ವಿರೋಧಿಸಿದ್ದರು: ರಾಜನಾಥ್ ಸಿಂಗ್

**ಹೊಸದಿಲ್ಲಿ:** ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ನಿಜವಾದ ಜಾತ್ಯತೀತವಾದಿ ಮತ್ತು ಅಪ್ರಯೋಜಕ ರಾಜಕೀಯವನ್ನು ನಂಬದವರು ಎಂದು ಬಣ್ಣಿಸಿದ್ದಾರೆ. ಪಟೇಲರ 150ನೇ ಜನ್ಮದಿನಾಚರಣೆಯ ಅಂಗವಾಗಿ ವಡೋದರಾದಲ್ಲಿ ನಡೆದ ರಾಷ್ಟ್ರೀಯ ಏಕತಾ ಯಾತ್ರೆಯಲ್ಲಿ ಮಾತನಾಡುತ್ತಾ, ಆಗಿನ ಪ್ರಧಾನಿ ಜವಾಹರಲಾಲ್ ನೆಹರು ಅವರು ಸರ್ಕಾರಿ ಖಜಾನೆಯ ಹಣದಿಂದ ಬಾಬ್ರಿ ಮಸೀದಿ ನಿರ್ಮಿಸಲು ಮುಂದಾದಾಗ, ಅದನ್ನು ವಿರೋಧಿಸಿದವರು ಸರ್ದಾರ್ ಪಟೇಲ್ ಎಂದು ಹೇಳಿದರು. ಪಟೇಲ್ ಅವರು ಸರ್ಕಾರಿ ಹಣವನ್ನು ಇಂತಹ ಕೆಲಸಗಳಿಗೆ ಬಳಸಲು ಬಿಡಲಿಲ್ಲ ಎಂದು ರಾಜನಾಥ್ ಸಿಂಗ್ ಹೇಳಿದರು.

**ಪಟೇಲರ ಜಾತ್ಯಾತೀತ ನಿಲುವು:** ರಾಜನಾಥ್ ಸಿಂಗ್ ಅವರು ಸರ್ದಾರ್ ಪಟೇಲ್ ಅವರ ಉದಾರವಾದಿ ಮತ್ತು ಜಾತ್ಯತೀತ ನಿಲುವನ್ನು ಒತ್ತಿ ಹೇಳಿದರು. ಅವರು ಯಾವುದೇ ಅಪ್ರಯೋಜಕ ರಾಜಕೀಯವನ್ನು ಬೆಂಬಲಿಸುತ್ತಿರಲಿಲ್ಲ ಎಂದು ಹೇಳಿದರು. ನೆಹರು ಅವರು ಬಾಬ್ರಿ ಮಸೀದಿ ನಿರ್ಮಾಣಕ್ಕೆ ಸರ್ಕಾರಿ ಹಣ ಬಳಸುವ ಬಗ್ಗೆ ಪ್ರಸ್ತಾಪಿಸಿದಾಗ, ಪಟೇಲರು ಅದನ್ನು ಬಲವಾಗಿ ವಿರೋಧಿಸಿದರು. ಆ ಸಮಯದಲ್ಲಿ, ಸರ್ಕಾರಿ ಹಣದಿಂದ ಬಾಬ್ರಿ ಮಸೀದಿ ನಿರ್ಮಾಣವಾಗದಂತೆ ಅವರು ತಡೆದರು ಎಂದು ವಿವರಿಸಿದರು. ಇದೇ ಸಂದರ್ಭದಲ್ಲಿ, ಸೋಮನಾಥ ದೇವಾಲಯದ ಪುನರ್ನಿರ್ಮಾಣದ ವಿಚಾರದಲ್ಲಿ ನೆಹರು ಅವರು ವಿರೋಧ ವ್ಯಕ್ತಪಡಿಸಿದಾಗ, ಪಟೇಲರು ಅದನ್ನು ಖಂಡಿಸಿದರು. ದೇವಾಲಯದ ನಿರ್ಮಾಣಕ್ಕೆ ಸಾರ್ವಜನಿಕರಿಂದ ಲಕ್ಷಾಂತರ ರೂಪಾಯಿ ದೇಣಿಗೆ ಬಂದಿದೆ ಮತ್ತು ಅದಕ್ಕಾಗಿ ಒಂದು ಟ್ರಸ್ಟ್ ರಚಿಸಲಾಗಿದೆ. ಸರ್ಕಾರಿ ಖಜಾನೆಯಿಂದ ಒಂದು ಪೈಸೆಯೂ ಖರ್ಚಾಗಿಲ್ಲ ಎಂದು ಪಟೇಲರು ನೆಹರು ಅವರಿಗೆ ಸ್ಪಷ್ಟಪಡಿಸಿದರು. ಇದು ಸರ್ದಾರ್ ಪಟೇಲ್ ಅವರ ಕಾರ್ಯವೈಖರಿಯಾಗಿತ್ತು ಎಂದು ಸಿಂಗ್ ಹೇಳಿದರು.


**ಪಟೇಲರ ಸ್ಮಾರಕವನ್ನೂ ನೆಹರು ವಿರೋಧಿಸಿದ್ದರು:** ಸರ್ದಾರ್ ಪಟೇಲ್ ಅವರ ಸ್ಮಾರಕ ನಿರ್ಮಾಣವನ್ನು ನೆಹರು ವಿರೋಧಿಸಿದ್ದರು ಎಂಬ ಆರೋಪವನ್ನೂ ರಾಜನಾಥ್ ಸಿಂಗ್ ಮಾಡಿದರು. ಪಟೇಲ್ ಅವರ ನಿಧನದ ನಂತರ, ಸಾರ್ವಜನಿಕರು ಹಣ ಸಂಗ್ರಹಿಸಿ ಸ್ಮಾರಕ ನಿರ್ಮಿಸಲು ಮುಂದಾದರು. ಆದರೆ ಈ ವಿಷಯ ನೆಹರು ಅವರಿಗೆ ತಿಳಿದಾಗ, ಅವರು ಸರ್ದಾರ್ ಪಟೇಲ್ ಅವರು ರೈತರ ನಾಯಕರಾಗಿದ್ದರು, ಆದ್ದರಿಂದ ಆ ಹಣವನ್ನು ಗ್ರಾಮದ ಬಾವಿಗಳು ಮತ್ತು ರಸ್ತೆಗಳ ನಿರ್ಮಾಣಕ್ಕೆ ಬಳಸಬೇಕು ಎಂದು ಹೇಳಿದ್ದರು. ಇದು ಯಾರಿಗೂ ಗುಟ್ಟಾಗಿಲ್ಲ. ಆದರೆ ರಸ್ತೆ ಮತ್ತು ಬಾವಿ ನಿರ್ಮಾಣದ ಜವಾಬ್ದಾರಿ ಸರ್ಕಾರದ ಮೇಲಿದೆ. ಸ್ಮಾರಕಕ್ಕಾಗಿ ಸಂಗ್ರಹಿಸಿದ ಹಣವನ್ನು ಅದಕ್ಕೆ ಬಳಸುವ ಸಲಹೆ ತನಗೆ ಅಸಂಬದ್ಧವೆನಿಸುತ್ತದೆ ಎಂದರು. ನೆಹರು ಅವರು ತಮಗೆ ತಾವೇ ಭಾರತ ರತ್ನ ಪ್ರಶಸ್ತಿ ನೀಡಿಕೊಂಡರು. ಆದರೆ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಆ ಸಮಯದಲ್ಲಿ ಭಾರತ ರತ್ನ ನೀಡಬಹುದಿತ್ತು ಆದರೆ ಪ್ರಧಾನಿ ನರೇಂದ್ರ ಮೋದಿ ಅವರು 'ಸ್ಟ್ಯಾಚು ಆಫ್ ಯೂನಿಟಿ' ನಿರ್ಮಿಸುವ ಮೂಲಕ ಸರ್ದಾರ್ ಪಟೇಲ್ ಅವರಿಗೆ ಸೂಕ್ತ ಗೌರವ ನೀಡಿದ್ದಾರೆ ಎಂದರು.

ಕೆಲವರು ಸರ್ದಾರ್ ಪಟೇಲ್ ಅವರ ಪರಂಪರೆಯನ್ನು ಮರೆಮಾಚಲು ಮತ್ತು ಅಳಿಸಿಹಾಕಲು ಪ್ರಯತ್ನಿಸಿದರು, ಆದರೆ ಬಿಜೆಪಿ ಅಧಿಕಾರದಲ್ಲಿರುವವರೆಗೂ ಅದು ಸಾಧ್ಯವಿಲ್ಲ ಎಂದು ಸಿಂಗ್ ಹೇಳಿದರು.

ಭಾರತೀಯ ಸೇನೆಯ ಆಧುನೀಕರಣಕ್ಕೆ ಸರ್ದಾರ್ ಪಟೇಲ್ ಅವರು ನೀಡಿದ ಕೊಡುಗೆಯನ್ನು ಸಿಂಗ್ ಸ್ಮರಿಸಿದರು. ಭಾರತವು ತನ್ನದೇ ಆದ ರಕ್ಷಣಾ ಉತ್ಪಾದನಾ ಶಕ್ತಿಯನ್ನು ಹೊಂದಿರಬೇಕು ಎಂದು ಪಟೇಲ್ ಅವರು ಒತ್ತಾಯಿಸಿದ್ದರು.

**ಅವರು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜಾತ್ಯತೀತ ನಿಲುವನ್ನು ಶ್ಲಾಘಿಸಿದ್ದಾರೆ. ನೆಹರು ಅವರು ಬಾಬ್ರಿ ಮಸೀದಿ ನಿರ್ಮಾಣಕ್ಕೆ ಸರ್ಕಾರಿ ಹಣ ಬಳಸಲು ಮುಂದಾದಾಗ ಪಟೇಲರು ವಿರೋಧಿಸಿದ್ದರು. ಸೋಮನಾಥ ದೇವಾಲಯದ ಪುನರ್ ನಿರ್ಮಾಣದಲ್ಲೂ ಪಟೇಲರ ಪಾತ್ರ ಮಹತ್ವದ್ದಾಗಿತ್ತು. ಪಟೇಲರು ದೇಶದ ಹಿತಾಸಕ್ತಿಗೆ ಆದ್ಯತೆ ನೀಡುತ್ತಿದ್ದರು. ಅವರ ಪರಂಪರೆಯನ್ನು ಬಿಜೆಪಿ ಅಧಿಕಾರದಲ್ಲಿರುವವರೆಗೂ ಅಳಿಸಿಹಾಕಲು ಸಾಧ್ಯವಿಲ್ಲ.**

**–ರಾಜನಾಥ್ ಸಿಂಗ್, ಕೇಂದ್ರ ರಕ್ಷಣಾ ಸಚಿವ**



**ಅಯೋಧ್ಯಾ ರಾಮಮಂದಿರ ನಿರ್ಮಾಣ**

**ಅಯೋಧ್ಯೆಯಲ್ಲಿ ನಿರ್ಮಾಣವಾಗಿರುವ ಭವ್ಯ ರಾಮ ಮಂದಿರಕ್ಕೆ ಸರ್ಕಾರಿ ಖಜಾನೆಯಿಂದ ಒಂದು ಪೈಸೆಯೂ ಖರ್ಚಾಗಿಲ್ಲ. ರಾಮ ಮಂದಿರದ ಸಂಪೂರ್ಣ ವೆಚ್ಚವನ್ನು ದೇಶದ ಜನರೇ ಭರಿಸಿದ್ದಾರೆ. ಇದೇ ನಿಜವಾದ ಜಾತ್ಯತೀತತೆಯ ಅರ್ಥ. ಸರ್ದಾರ್ ಪಟೇಲರು ತಮ್ಮ ಆಚರಣೆಯಲ್ಲಿ ಇದನ್ನು ತೋರಿಸಿಕೊಟ್ಟಿದ್ದಾರೆ. ಎಲ್ಲರಿಗೂ ನ್ಯಾಯ ಸಿಗಬೇಕು, ಯಾರನ್ನೂ ಅಪ್ರಯೋಜಕವಾಗಿ ಕಾಣಬಾರದು, ದೇಶದ ಹಿತಾಸಕ್ತಿ ಮುಖ್ಯ ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು ಎಂದರು. ಭಾರತದ ಸಂವಿಧಾನ ರಚನೆಯಲ್ಲಿಯೂ ಸರ್ದಾರ್ ಪಟೇಲ್ ಅವರು ಪ್ರಮುಖ ಪಾತ್ರ ವಹಿಸಿದ್ದರು. ಅವರು ಪ್ರತ್ಯೇಕ ಮತದಾರರ ಪದ್ಧತಿಯನ್ನು ವಿರೋಧಿಸಿದರು. ಇದು ಭಾರತದ ಏಕತೆಯನ್ನು ಮತ್ತಷ್ಟು ಬಲಪಡಿಸಿತು ಎಂದರು.**

## ಮರಳಿ ಮನಸಾಗಿದೆ ಚಿತ್ರದ ಟೀಸರ್ ರಿಲೀಸ್

ದಾವಣಗೆರೆಯ ಮುದೇಗೌಡ್ರು, ನವೀನ್ ಕುಮಾರ್ ಆರ್.ಓ ಹಾಗೂ ತೆಲಿಗಿ ಮಲ್ಲಿಕಾರ್ಜುನಪ್ಪ ಅವರ ನಿರ್ಮಾಣದಲ್ಲಿ ಕಾರ್ಕಳದ ನಾಗರಾಜ್ ಶಂಕರ್ ಅವರ ಕಥೆ, ಚಿತ್ರಕಥೆ, ಸಂಭಾಷಣೆ, ನಿರ್ದೇಶನದಲ್ಲಿ ಮೂಡಿಬಂದಿರುವ 'ಮರಳಿ ಮನಸಾಗಿದೆ' ಕನ್ನಡ ಚಲನಚಿತ್ರದ ಟೀಸರ್ ಬಿಡುಗಡೆಗೆ ದಾವಣಗೆರೆ ಜನತೆ ಸಾಕ್ಷಿಯಾದರು.




ಕರುನಾಡ ಸಮರ ಸೇನೆ ಇದಕ್ಕೆ ಸಾಥ್ ನೀಡಿದ್ದು ವಿಶೇಷವಾಗಿತ್ತು. ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಆವರಗೊಳ್ಳದ ಶ್ರೀ ವೀರಭದ್ರ ಸ್ವಾಮಿ ಸನ್ನಿಧಾನದಲ್ಲಿ 'ಮರಳಿ ಮನಸಾಗಿದೆ' ಚಿತ್ರದ ಮಹೂರ್ತದಿಂದ ಶುಭಾರಂಭಗೊಂಡು ಜಿಲ್ಲೆ ಮತ್ತು ನಾಡಿನ ಪ್ರಮುಖ ತಾಣಗಳಲ್ಲಿ ಚಿತ್ರೀಕರಣಗೊಂಡು ತೆರೆಗೆ ಸಿದ್ಧವಾಗಿ, ಟೀಸರ್ ದಾವಣಗೆರೆಯಲ್ಲಿಯೇ ಬಿಡುಗಡೆಯಾಗಿರುವುದು ಕನ್ನಡಿಗರು ಹೆಮ್ಮೆಪಡುವ ವಿಚಾರವಾಗಿದೆ ಎಂದರು. ಯುವ ಪೀಳಿಗೆಗೆ ಭಾವನೆಗಳನ್ನು ಬೆಸೆಯುವಂತಹದ್ದು, ಮನಸ್ಸನ್ನು, ಬುದ್ದಿಯನ್ನು ಸ್ವಾಸ್ಥಗೊಳಿಸುವಂತಹದ್ದು, ಜೊತೆಗೆ ಸ್ವಾಸ್ಥ್ಯ ಬದುಕಿನೆಡೆಗೆ ಸಾಗುವಂತಹ ಸಂದೇಶವನ್ನು ಸಾರುವ ಚಿತ್ರ ನಿರ್ಮಾಣಗೊಂಡಿರುವುದು ಸಂತಸ ಉಂಟುಮಾಡಿದೆ. ಕನ್ನಡ ಚಿತ್ರಗಳನ್ನು ಪ್ರೇಕ್ಷಕರು ನೇರವಾಗಿ ಚಿತ್ರಮಂದಿರಗಳಿಗೆ ಹೋಗಿ ನೋಡುವಂತೆ ಕರೆ ನೀಡಿದರು. ವಿರಕ್ತಮಠದ ಡಾ. ಬಸವಪ್ರಭು ಸ್ವಾಮೀಜಿ ಮಾತನಾಡಿ, 'ಮರಳಿ ಮನಸಾಗಿದೆ' ಚಿತ್ರ ಶತದಿನೋತ್ಸವ ಆಚರಿಸುವ ಜೊತೆಗೆ ಪ್ಯಾನ್ ಇಂಡಿಯಾ ಖ್ಯಾತಿ ಗಳಿಸುವ ಚಿತ್ರಗಳನ್ನು ನಿರ್ಮಾಣ ಮಾಡಲಿ, ಚಿತ್ರದ ನಟ-ನಟಿಯರು ಪ್ಯಾನ್ ಇಂಡಿಯಾ ಸ್ಟಾರ್‌ಗಳಾಗಿ ಮಿಂಚಲಿ ಎಂದು ಶುಭ ಹಾರೈಸಿದರು. ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಅವರು, ಚಿತ್ರದ ಟೀಸರ್ ಗಮನಿಸಿದರೆ ಯುವ ಜನರ ಮನಸ್ಸನ್ನು ಸೆಳೆಯುವಲ್ಲಿ ಯಶಸ್ವಿಯಾಗಲಿದೆ. ಯುವಕರಲ್ಲಿ ಉತ್ಸಾಹ ಮೂಡಿಸುವ ಚಿತ್ರ ಇದಾಗಿದೆ ಎಂದರು.



ಪ್ಯಾನ್ ಇಂಡಿಯಾ ಸ್ಟಾರ್‌ಗಳಾಗಿ ಮಿಂಚಲಿ

## ಅರ್ಜುನ್ ಸಂಯೋಜನೆಯಲ್ಲಿ ಮಹಾಗುರು ಮಹಾದೇವ



ಶ್ರೀ ಮಾಯಕಾರ ಪ್ರೊಡಕ್ಷನ್ ಸಂಸ್ಥೆಯಿಂದ ನಿರ್ಮಿಸಲಾದ ಮಹಾಗುರು ಮಹಾದೇವ ಹಾಡು ಬಿಡುಗಡೆ ಕಾರ್ಯಕ್ರಮ ಬೆಂಗಳೂರಿನ ಎಂಎಂಬಿ ಲೆಗಸಿಯಲ್ಲಿ ನಡೆಯಿತು. ಖ್ಯಾತ ಜ್ಯೋತಿಷಿ ವಿದ್ವಾನ್ ಮೂಗೂರು ಮಧುದೀಕ್ಷಿತ್ ಗುರೂಜಿ, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ಖ್ಯಾತ ಚಿತ್ರ ಸಾಹಿತಿ ವಿ. ನಾಗೇಂದ್ರ ಪ್ರಸಾದ್ ಸೇರಿದಂತೆ ಹಾಡಿನಲ್ಲಿ ನಟಿಸಿದ ಇಡೀ ಕಲಾಬಳಗ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮಹಾಗುರು ಮಹಾದೇವ ಹಾಡು ಬಿಡುಗಡೆ ಬಳಿಕ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಮಾತನಾಡಿ, ಮೂಗೂರು ಮಧು ದೀಕ್ಷಿತ್ ಗುರುಗಳು ನನಗೆ ದೈವ ಸ್ವರೂಪ. ಅವರು ನನಗೆ ಗುರು ಸ್ಥಾನ ಕೊಟ್ಟಿದ್ದಾರೆ. ಅವರು ಈ ರೀತಿ ಐಡಿಯಾ ಇದೆ ಎಂದಾಗ ಮಾಡೋಣಾ ಎಂದು ಹಾಡು ಮಾಡಿದ್ದೇವೆ. ಈ ಹಾಡಿಗಾಗಿ ಎರಡು ವರ್ಷಗಳ ಕಾಲ ಕಾಯಿಸಿದ್ದೇನೆ. ಎಲ್ಲಾ ರೀತಿ ಜಾನರ್ ಗಳಲ್ಲಿ ನಿಸ್ಸೀಮರಾದ ನಾಗೇಂದ್ರ ಪ್ರಸಾದ್ ಸರ್ ಸಾಹಿತ್ಯ ಒದಗಿಸಿದರು. ಈ ಹಾಡಿಗೆ ದೊಡ್ಡ ಶಕ್ತಿಯಾಗಿ ನಿಂತ ಮತ್ತೋರ್ವರು ರಾಜೇಶ್ ಕೃಷ್ಣನ್ ಅಣ್ಣ.

ಅವರು ಕನ್ನಡದ ಬಾಲಸುಬ್ರಹ್ಮಣ್ಯಂ ಸರ್. ಅವರು ಹಾಡು ಹಾಡಲು ಒಂದು ರೂಪಾಯಿ ದುಡ್ಡು ತೆಗೆದುಕೊಂಡಿಲ್ಲ. ನಾನು ರೆಕಾರ್ಡ್ ಆದ್ಮೇಲೆ 150 ಬಾರಿ ಕೇಳಿದೆ. ಪ್ರತಿ ಬಾರಿ ರೋಮಾಂಚನವಾಗುತ್ತಿದೆ ಎಂದು ಹೇಳಿದರು.

ವಿದ್ವಾನ್ ಮೂಗೂರು ಮಧು ದೀಕ್ಷಿತ್ ಗುರೂಜಿ ಮಾತನಾಡಿ, ಈ ಹಾಡು ಮಾಡಲು ಮುಖ್ಯ ಕಾರಣ ಅರ್ಜುನ್ ಜನ್ಯ ಅವರು. ಅವರು ಸಂಗೀತ ನಿರ್ದೇಶಕರು ಮಾತ್ರವಲ್ಲದೇ ಒಳ್ಳೆ ಆಧ್ಯಾತ್ಮ ಗುರುಗಳು. ಈ ಹಾಡು ಅದ್ಭುತವಾಗಿ ಬರಲು ಕಾರಣ ಅರ್ಜುನ್ ಜನ್ಯ. ನಾಗೇಂದ್ರ ಪ್ರಸಾದ್ ಅವರು ಚೆನ್ನಾಗಿ ಸಾಹಿತ್ಯ ಬರೆದು ಕೊಟ್ಟರು. ಅರ್ಜುನ್ ಸರ್ ರಾಜೇಶ್ ಸರ್ ಬಳಿ ಹಾಡು ಹಾಡಿಸಿ ಕೊಟ್ಟಿದ್ದಾರೆ. ನನಗೆ ನಟನೆ ಬಗ್ಗೆ ಜ್ಞಾನ ಇಲ್ಲ. ಈ ಕಲಾವಿದರ ಜೊತೆ ನಿಂತಾಗ ನಾನು ನಟಿಸಿದೆ. ಮಾಯಕಾರ ಎಂಬ ನಮ್ಮ ಪ್ರೊಡಕ್ಷನ್ ನಡಿ ನಿರ್ಮಿಸಿದ್ದೇವೆ. ಅರ್ಜುನ್ ಜನ್ಯ ಹಾಗೂ ನಾಗೇಂದ್ರ ಪ್ರಸಾದ್ ಅವರು ನನ್ನ ಸಹೋದರರು.

## ಸುದೀಪ್ ಮನೆಯಲ್ಲಿ ಮದುವೆ ಸಂಭ್ರಮ

ಕಿಚ್ಚ ಸುದೀಪ್ ಅವರ ಮನೆಯಲ್ಲಿ ಸದ್ದಿಲ್ಲದೆ ಮದುವೆ ಸಂಭ್ರಮ ಜೋರಾಗಿದೆ. ಅರಿಶಿಣ ಶಾಸ್ತ್ರ ನಡೆದಿದ್ದು, ಡಿಸೆಂಬರ್ 4ರಂದು ಪ್ಯಾಲೆಸ್ ಗ್ರೌಂಡ್‌ನಲ್ಲಿ ರಿಸೆಪ್ಶನ್ ನಡೆಯಲಿದೆ. ಹಾಗಾದರೆ ವಿವಾಹ ಆಗಿದ್ದು ಯಾರು ಮದುವೆ ಆಗುತ್ತಿರೋದು ಯಾರು ಆ ಬಗ್ಗೆ ಇಲ್ಲಿ ಇದೆ ವಿವರ . ಕನ್ನಡದ ಸ್ಟಾರ್ ಹೀರೋ ಕಿಚ್ಚ ಸುದೀಪ್ ಮನೆಯಲ್ಲಿ ಈಗ ಮದುವೆ ಸಂಭ್ರಮ. ಹಾಗಂತ ಸುದೀಪ್ ಮಗಳು ಸಾನ್ವಿ ಸೈಲೆಂಟ್ ಆಗಿ ಮದುವೆ ಆಗುತ್ತಿದ್ದಾರೆ ಎಂದುಕೊಳ್ಳಬೇಡಿ. ಸುದೀಪ್ ಅಕ್ಕ ಸುರೇಖಾ ಅವರ ಮಗ ತಾರಣ್ ಸುರೇಶ್ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದಾರೆ. ತಾರಿಣಿ ಹೆಸರಿನ ಹುಡುಗಿಯನ್ನು ತಾರಣ್ ಕೈ ಹಿಡಿದಿದ್ದಾರೆ. ವಿವಾಹಕ್ಕೂ ಮೊದಲು ಅರಿಶಿಣ ಶಾಸ್ತ್ರ ನಡೆದಿದೆ. ಕುಟುಂಬದವರು ಮಾತ್ರ ಇದರಲ್ಲಿ ಭಾಗಿ ಆಗಿದ್ದರು. ತಾಯಿ ನಿಧನದ ನಂತರ ಕಿಚ್ಚನ ಮನೆಯಲ್ಲಿ ನಡೆದ ಮೊದಲ ಶುಭಕಾರ್ಯ ಇದು. ಈಗಾಗಲೇ ಶ್ರೀಲಂಕಾದಲ್ಲಿ ತಾರಣ್ ಹಾಗೂ ತಾರಿಣಿ ಡೆಸ್ಟಿನೇಷನ್ ಮದುವೆ ಆಗಿದ್ದಾರೆ. ನವ ದಂಪತಿಗೆ ಎಲ್ಲರೂ ಶುಭ ಕೋರುತ್ತಾ ಇದ್ದಾರೆ.ಡಿಸೆಂಬರ್ 4ರಂದು ಪ್ಯಾಲೇಸ್ ಗ್ರೌಂಡ್ ಚಾಮರವಜ್ರದಲ್ಲಿ ಮದುವೆ ರಿಸೆಪ್ಶನ್ ಇದೆ. ಸಂಜೆ 7 ಗಂಟೆ ಬಳಿಕ ಕಾರ್ಯಕ್ರಮ ಆರಂಭ ಆಗುತ್ತದೆ. ಕಿಚ್ಚ ಸುದೀಪ್ ಹಾಗೂ ಸುದೀಪ್ ಪತ್ನಿ ಪ್ರಿಯಾ ಮಗಳು ಸಾನ್ವಿಗೆ ಅರಿಶಿಣ ಹಚ್ಚುತ್ತಿರುವ ಫೋಟೋ ವೈರಲ್ ಆಗಿದೆ. ಹೀಗಾಗಿ, ಕೆಲವರು ಶಾನ್ವಿ ಮದುವೆ ಎಂದು ಸುದ್ದಿ ಹಬ್ಬಿಸಿದ್ದರು.



## ಕನ್ನಡತಿ ತನುಜಾಗೆ ದಾಖಲೆ ವೋಟಿಂಗ್

ಕನ್ನಡ ಸಿನಿಮಾಗಳ ಮೂಲಕ ನಟನೆಗೆ ಕಾಲಿಟ್ಟ ಕನ್ನಡತಿ ತನುಜಾ ಪುಟ್ಟಸ್ವಾಮಿ ತೆಲುಗು ಬಿಗ್‌ಬಾಸ್‌ನಲ್ಲಿ ಸಖತ್ ಆಗಿ ಮಿಂಚುತ್ತಿದ್ದಾರೆ. ಫಿನಾಲೆ ವಾರದ ಸಮೀಪದಲ್ಲಿದ್ದು, ತನುಜಾ ಈ ಬಾರಿ ನಾಮಿನೇಟ್ ಆಗಿದ್ದಾರೆ. ಆದರೆ ಅವರಿಗೆ ದಾಖಲೆ ಸಂಖ್ಯೆಯ ಮತಗಳು ಬಿದ್ದಿವೆ ಎಂಬುದು ಅರ್ಲಿ ಟ್ರೆಂಡ್ಸ್‌ನಿಂದ ತಿಳಿದು ಬರುತ್ತಿದೆ.

ಬಿಗ್‌ಬಾಸ್ ತೆಲುಗು ಸೀಸನ್ 09ರಲ್ಲಿ ಇಬ್ಬರು ಕನ್ನಡತಿಯರು ಸ್ಪರ್ಧಿಸುತ್ತಿದ್ದಾರೆ. ತನುಜಾ ಪುಟ್ಟಸ್ವಾಮಿ ಮತ್ತು ಸಂಜನಾ ಗರ್ಲಾನಿ. ಸೀಸನ್ 09ರ ಫಿನಾಲೆ ವಾರಕ್ಕೆ ಕೆಲವೇ ದಿನಗಳು ಬಾಕಿ ಇದೆ. ಈ ವಾರ ಕಳೆದರೆ ಸ್ಪರ್ಧಿಗಳು ಫಿನಾಲೆ ವಾರ ತಲುಪುತ್ತಾರೆ. ಸಂಜನಾ, ತನುಜಾ ಜೊತೆಗೆ ಸುಮನ್, ಕಲ್ಯಾಣ್, ರಿತು, ಇಮಾನ್ಯುಯೆಲ್ ಇನ್ನೂ ಕೆಲವು ಗಟ್ಟಿ ಸ್ಪರ್ಧಿಗಳು ಮನೆಯಲ್ಲಿದ್ದಾರೆ. ಆದರೆ ಈ ವಾರ ತನುಜಾ ಅವರಿಗೆ ಭಾರಿ ಸಂಖ್ಯೆಯ ವೋಟಿಂಗ್ ಬಂದಿದೆ ಎಂದು ಕೆಲ ತೆಲುಗು ಮಾಧ್ಯಮಗಳು ವರದಿ ಮಾಡಿವೆ. ಅದರಲ್ಲೂ ತನುಜಾಗೆ ದಾಖಲೆ ಸಂಖ್ಯೆಯ ವೋಟಿಂಗ್ ಬಂದಿದೆಯಂತೆ. ತನುಜಾ ಪುಟ್ಟಸ್ವಾಮಿ ಮೊದಲಿನಿಂದಲೂ ತೆಲುಗು ಬಿಗ್‌ಬಾಸ್ ಸೀಸನ್ 09ರ ಮೆಚ್ಚಿನ ಕಂಟೆಸ್ಟೆಂಟ್ ಆಗಿ ಗಮನ ಸೆಳೆದಿದ್ದಾರೆ. ಈ ವಾರ ಅವರು ನಾಮಿನೇಷನ್‌ನಲ್ಲಿದ್ದು ಅವರನ್ನು ಮನೆಯಲ್ಲಿ ಉಳಿಸಲು ಭಾರಿ ಸಂಖ್ಯೆಯ ವೋಟಿಂಗ್ ಅನ್ನು ಜನ ಮಾಡಿದ್ದಾರೆ ಎನ್ನಲಾಗುತ್ತಿದೆ.

## ಮದುವೆಗೆ ಬಂದವರಿಗೆ ಸಮಂತಾ ಕೊಟ್ಟ ಉಡುಗೊರೆ



ಸಮಂತಾ ಹಾಗೂ ರಾಜ್ ಅವರು ಕೊಯಮತ್ತೂರಿನ ಇಶಾ ಯೋಗ ಸೆಂಟರ್‌ನಲ್ಲಿ ಸರಳವಾಗಿ ಮದುವೆ ಆಗಿದ್ದು, ಅತ್ಯಂತ ಆಪ್ತರು ಮತ್ತು ಕುಟುಂಬದ ಪ್ರಮುಖರು ಮಾತ್ರವೇ ಈ ಇಬ್ಬರ ಮದುವೆ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಇವರ ಮದುವೆ ಅತ್ಯಂತ ಸರಳವಾಗಿ ನಡೆದಿದೆ. ಮದುವೆಗೆ ಬಂದವರಿಗೆ ಸಮಂತಾ ಕೊಟ್ಟ ಉಡುಗೊರೆ ಏನು ಮದುವೆಯಲ್ಲಿ ಊಟ ಹೇಗಿತ್ತು ಇಲ್ಲಿದೆ ಮಾಹಿತಿ.

ಸಮಂತಾ ಋತ್ ಪ್ರಭು ಇತ್ತೀಚೆಗಷ್ಟೆ ನಿರ್ದೇಶಕ, ನಿರ್ಮಾಪಕ ರಾಜ್ ನಿಧಿಮೋರು ಜೊತೆಗೆ ವಿವಾಹವಾಗಿದ್ದಾರೆ. ಸಮಂತಾ ಹಾಗೂ ರಾಜ್ ಅವರು ಕೊಯಮತ್ತೂರಿನ ಇಶಾ ಯೋಗ ಸೆಂಟರ್‌ನಲ್ಲಿ ಸರಳವಾಗಿ ಮದುವೆ ಆಗಿದ್ದು, ಅತ್ಯಂತ ಆಪ್ತರು ಮತ್ತು ಕುಟುಂಬದ ಪ್ರಮುಖರು ಮಾತ್ರವೇ ಈ ಇಬ್ಬರ ಮದುವೆ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಇವರ ಮದುವೆ ಅತ್ಯಂತ ಸರಳವಾಗಿ ನಡೆದಿದೆ. ಸಾಮಾನ್ಯವಾಗಿ ಸ್ಟಾರ್ ನಟ-ನಟಿಯರ ಮದುವೆ, ಎರಡನೇ ಮದುವೆ ಸಹ ಬಲು ಅದ್ಧೂರಿಯಾಗಿ ನಡೆಯುತ್ತವೆ. ಆದರೆ ಸಮಂತಾ ಮತ್ತು ರಾಜ್ ಬಹಳ ಸರಳವಾಗಿ ಮದುವೆ ಮಾಡಿಕೊಂಡಿದ್ದಾರೆ.

ಸಮಂತಾರ ಆಪ್ತ ಗೆಳತಿ ಶಿಲ್ಪಾ ರೆಡ್ಡಿ ಸಹ ಮದುವೆಯಲ್ಲಿ ಪಾಲ್ಗೊಂಡಿದ್ದರು. ಮದುವೆಯ ಚಿತ್ರಗಳು ಮತ್ತು ಕೆಲ ಮಾಹಿತಿಯನ್ನು ಶಿಲ್ಪಾ ರೆಡ್ಡಿ ಅವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಬೆಳಿಗ್ಗೆ ಆರು ಗಂಟೆಗೆ ಸಮಂತಾ ಹಾಗೂ ರಾಜ್ ಅವರ ಮದುವೆ ಸಮಾರಂಭ ನಡೆದಿದೆ.

## ವಿಶ್ರಾಂತಿಯ ಇಲ್ಲಾ ಗೇಟ್ ಪಾಸಾ ದೇಶೀಯ ಅಂಗಳದಲ್ಲಿ ಸಿರಾಜ್!

ಮೊಹಮ್ಮದ್ ಸಿರಾಜ್ ಟೀಮ್ ಇಂಡಿಯಾ ಪರ ಈವರೆಗೆ 46 ಏಕದಿನ ಪಂದ್ಯಗಳಲ್ಲಿ ಬೌಲಿಂಗ್ ಮಾಡಿದ್ದಾರೆ. ಈ ವೇಳೆ ಅವರು 73 ವಿಕೆಟ್‌ಗಳನ್ನು ಕಬಳಿಸಿದ್ದಾರೆ.

ಇದಾಗ್ಯೂ ಸೌತ್ ಆಫ್ರಿಕಾ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಗೆ ಸಿರಾಜ್ ಅವರನ್ನು ಆಯ್ಕೆ ಮಾಡಿರಲಿಲ್ಲ. ಸೌತ್ ಆಫ್ರಿಕಾ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಗೆ ಆಯ್ಕೆ ಮಾಡಲಾದ 15 ಸದಸ್ಯರುಗಳ ಭಾರತ ತಂಡದಲ್ಲಿ ಮೊಹಮ್ಮದ್ ಸಿರಾಜ್ ಹೆಸರು ಕಾಣಿಸಿಕೊಂಡಿರಲಿಲ್ಲ.


ವಿಶ್ರಾಂತಿಯ ಕಾರಣ ಸಿರಾಜ್ ಅವರನ್ನು ಏಕದಿನ ತಂಡದಿಂದ ಹೊರಗಿಡಲಾಗಿದೆ ಎನ್ನಲಾಗಿತ್ತು. ಆದರೀಗ ಅದೇ ಮೊಹಮ್ಮದ್ ಸಿರಾಜ್ ದೇಶೀಯ ಟೂರ್ನಿ ಆಡುತ್ತಿದ್ದಾರೆ.

ಇದರ ಬೆನ್ನಲ್ಲೇ ಟೀಮ್ ಇಂಡಿಯಾದಿಂದ ಸಿರಾಜ್‌ಗೆ ಗೇಟ್ ಪಾಸ್ ನೀಡಲಾಗಿದೆಯಾ ಎಂಬ ಪ್ರಶ್ನೆಯೊಂದು ಹುಟ್ಟಿಕೊಂಡಿದೆ.

ಸಿರಾಜ್ ಮಿಂಚಿನ ದಾಳಿ

ಏಕೆಂದರೆ ಟೀಮ್ ಇಂಡಿಯಾದಲ್ಲಿ ಎಲ್ಲವೂ ಸರಿಯಿಲ್ಲ ಎಂಬುದು ಈಗಾಗಲೇ ಜಗಜ್ಜಾಹೀರಾಗಿದೆ. ಕೋಚ್ ಗೌತಮ್ ಗಂಭೀರ್ ಅವರೊಂದಿಗೆ ಹಿರಿಯ ಆಟಗಾರರಿಗೆ ಭಿನ್ನಾಭಿಪ್ರಾಯಗಳಿವೆ ಎಂಬ ಸುದ್ದಿಗಳು ಹರಿದಾಡುತ್ತಿದೆ. ಇದರ ನಡುವೆ ಮೊಹಮ್ಮದ್ ಸಿರಾಜ್ ಸೈಯ್ಯದ್ ಮುಷ್ತಾಕ್ ಅಲಿ ಟೂರ್ನಿಯಲ್ಲಿ ಕಾಣಿಸಿಕೊಂಡಿದ್ದಾರೆ.

ಇದರ ಬೆನ್ನಲ್ಲೇ ಮೊಹಮ್ಮದ್ ಸಿರಾಜ್ ಅವರನ್ನು ಬೇಕಂತಲೇ ತಂಡದಿಂದ ಹೊರಗಿಡಲಾಗಿದೆಯಾ ಎಂಬ ಅನುಮಾನ ಹುಟ್ಟಿಕೊಂಡಿದೆ. ಏಕೆಂದರೆ ವಿಶ್ರಾಂತಿ ನೀಡಿದ್ದರೆ ಸಿರಾಜ್ ದೇಶೀಯ ಟಿ20 ಟೂರ್ನಿ ಆಡುವ ಅಗತ್ಯವಿರಲಿಲ್ಲ.




ಅಲ್ಲದೆ ಸಿರಾಜ್ ಅವರನ್ನು ಕಳೆದ ಕೆಲ ತಿಂಗಳಿಂದ ಭಾರತ ಟಿ20 ತಂಡದ ಆಯ್ಕೆಗೆ ಪರಿಗಣಿಸಲಾಗುತ್ತಿಲ್ಲ. ಇದಾಗ್ಯೂ ಏಕದಿನ ಸರಣಿ ವೇಳೆ ಸಿರಾಜ್ ಟಿ20 ಪಂದ್ಯವಾಡುತ್ತಿರುವುದು ಏಕೆ ಎಂಬ ಪ್ರಶ್ನೆಯೊಂದು ಹುಟ್ಟಿಕೊಂಡಿದೆ.

ಸಿರಾಜ್ ಅವರನ್ನು ಸೌತ್ ಆಫ್ರಿಕಾ ವಿರುದ್ಧದ ಸರಣಿಯಿಂದ ಕೈ ಬಿಟ್ಟಿರುವುದರಿಂದಲೇ ಅವರು ದೇಶೀಯ ಟೂರ್ನಿ ಆಡುತ್ತಿದ್ದಾರೆ ಎಂಬ ಮಾತುಗಳು ಕೂಡ ಕೇಳಿ ಬರುತ್ತಿದೆ. ಇತ್ತ ಮೊಹಮ್ಮದ್ ಸಿರಾಜ್ ಅವರನ್ನು ಹೊರಗಿಟ್ಟು ಸೌತ್ ಆಫ್ರಿಕಾ ಸರಣಿಗೆ ಆಯ್ಕೆ ಮಾಡಿರುವುದು ಹರ್ಷಿತ್ ರಾಣಾ, ಪ್ರಸಿದ್ಧ್ ಕೃಷ್ಣ ಅವರನ್ನು ಇಲ್ಲಿ ಉಲ್ಲೇಖಾರ್ಹ.

ಒಟ್ಟಿನಲ್ಲಿ ಸೌತ್ ಆಫ್ರಿಕಾ ವಿರುದ್ಧದ ಟೆಸ್ಟ್ ಸರಣಿ ಸೋಲಿನ ಬೆನ್ನಲ್ಲೇ ಟೀಮ್ ಇಂಡಿಯಾ ಆಯ್ಕೆ ಬಗ್ಗೆ ಪ್ರಶ್ನೆಗಳೆದ್ದಿವೆ. ಇದರ ನಡುವೆ ಮೊಹಮ್ಮದ್ ಸಿರಾಜ್ ಅವರನ್ನು ಏಕದಿನ ಸರಣಿಯಿಂದ ಕೈ ಬಿಡಲಾಗಿರುವುದು ಕೂಡ ಬಹಿರಂಗವಾಗಿದೆ. ಹೀಗಾಗಿಯೇ ಇದೀಗ ಸೋಷಿಯಲ್ ಮೀಡಿಯಾದಲ್ಲಿ ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ವಿರುದ್ಧ ಅಭಿಮಾನಿಗಳು ಆಕ್ರೋಶ ಹೊರಹಾಕುತ್ತಿದ್ದಾರೆ.

ಸೈಯ್ಯದ್ ಮುಷ್ತಾಕ್ ಅಲಿ ಟೂರ್ನಿಯಲ್ಲಿ ಹೈದರಾಬಾದ್ ಪರ ಕಣಕ್ಕಿಳಿದ ಮೊಹಮ್ಮದ್ ಸಿರಾಜ್ ಮಿಂಚಿನ ದಾಳಿ ಮೂಲಕ ಗಮನ ಸೆಳೆದಿದ್ದಾರೆ. ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಉತ್ತರ ಪ್ರದೇಶ್ ತಂಡವು 19.2 ಓವರ್‌ಗಳಲ್ಲಿ 127 ರನ್‌ಗಳಿಸಿ ಆಲೌಟ್ ಆಗಿತ್ತು. ಹೈದರಾಬಾದ್ ಪರ ಕರಾರುವಾಕ್ ದಾಳಿ ಸಂಘಟಿಸಿದ ಮೊಹಮ್ಮದ್ ಸಿರಾಜ್ 4 ಓವರ್‌ಗಳಲ್ಲಿ ನೀಡಿದ್ದು ಕೇವಲ 16 ರನ್‌ಗಳು ಮಾತ್ರ.

## ಕೊಹ್ಲಿ, ರುತುರಾಜ್ ಶತಕ ವ್ಯರ್ಥ 2ನೇ ಏಕದಿನ ಗೆದ್ದ ದಕ್ಷಿಣ ಆಫ್ರಿಕಾ



ರಾಂಚಿಯಲ್ಲಿ ನಡೆದಿದ್ದ ಮೊದಲ ಏಕದಿನ ಪಂದ್ಯವನ್ನು ಕೊನೆಯ ಓವರ್‌ನಲ್ಲಿ ಗೆದ್ದಿಕೊಂಡಿದ್ದ ಟೀಂ ಇಂಡಿಯಾ, ಇದೀಗ ರಾಯ್‌ಪುರದಲ್ಲಿ ನಡೆದ ಎರಡನೇ ಏಕದಿನ ಪಂದ್ಯವನ್ನು ಕೊನೆಯ ಓವರ್‌ನಲ್ಲಿ ಸೋತಿದೆ. ಟೀಂ ಇಂಡಿಯಾ ಬ್ಯಾಟರ್‌ಗಳು ಕಲೆಹಾಕಿದ್ದ 358 ರನ್‌ಗಳನ್ನು ತಂಡದ ಅನಾನುಭವಿ ಬೌಲಿಂಗ್ ವಿಭಾಗ ರಕ್ಷಿಸಲು ವಿಫಲವಾಯಿತು. ಇದರ ಜೊತೆಗೆ ಆಫ್ರಿಕಾ ಗೆಲುವಿನಲ್ಲಿ ಇಬ್ಬನಿಯೂ ಪ್ರಮುಖ ಪಾತ್ರವಹಿಸಿತು. ಪಂದ್ಯದಲ್ಲಿ ಟಾಸ್ ಸೋತು ಮತ್ತೊಮ್ಮೆ ಬ್ಯಾಟಿಂಗ್ ಮಾಡಿದ ಟೀಂ ಇಂಡಿಯಾ 5 ವಿಕೆಟ್ ನಷ್ಟಕ್ಕೆ 358 ರನ್ ಕಲೆಹಾಕಿತು. ಈ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡ ಕೊನೆಯ ಓವರ್‌ನಲ್ಲಿ ಗೆಲುವಿನ ದಡ ಮುಟ್ಟಿತು. ಭಾರತದ ಪರ ವಿರಾಟ್ ಕೊಹ್ಲಿ ಹಾಗೂ ರುತುರಾಜ್ ಗಾಯಕ್ವಾಡ್ ಶತಕ ಬಾರಿಸಿದರೆ, ಆಫ್ರಿಕಾ ಪರ ಐಡೆನ್ ಮಾರ್ಕ್ರಾಮ್ ಶತಕ ಬಾರಿಸಿದರು.

**ಕೊಹ್ಲಿ- ರುತುರಾಜ್ ಶತಕ**

ರಾಯ್‌ಪುರದಲ್ಲಿಯೂ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಟೀಂ ಇಂಡಿಯಾ ಮತ್ತೊಮ್ಮೆ ದೊಡ್ಡ ಸ್ಕೋರ್ ಗಳಿಸಿತು. ಸತತ ಎರಡನೇ ಪಂದ್ಯದಲ್ಲಿ ಸ್ಮರಣೀಯ ಇನ್ನಿಂಗ್ಸ್ ಆಡಿದ ಕೊಹ್ಲಿ ತಮ್ಮ 53 ನೇ ಏಕದಿನ ಶತಕವನ್ನು ದಾಖಲಿಸಿದರು. ಇತ್ತ ರುತುರಾಜ್ ಗಾಯಕ್ವಾಡ್ ಕೂಡ ಕೇವಲ 77 ಎಸೆತಗಳಲ್ಲಿ ತಮ್ಮ ಮೊದಲ ಏಕದಿನ ಶತಕವನ್ನು ಬಾರಿಸಿದರು. ಇಬ್ಬರೂ ಮೂರನೇ ವಿಕೆಟ್‌ಗೆ 195 ರನ್‌ಗಳ ಅದ್ಭುತ ಪಾಲುದಾರಿಕೆಯನ್ನು ಹಂಚಿಕೊಂಡರು. ನಾಯಕ ಕೆಎಲ್ ರಾಹುಲ್ ಕೂಡ ಅಂತಿಮ ಓವರ್‌ಗಳಲ್ಲಿ ಕೇವಲ 43 ಎಸೆತಗಳಲ್ಲಿ 66 ರನ್‌ಗಳ ಇನ್ನಿಂಗ್ಸ್ ಆಡಿದರು.

ಒಂದು ಹಂತದಲ್ಲಿ ಟೀಂ ಇಂಡಿಯಾ 400 ರನ್‌ಗಳ ಹತ್ತಿರ ತಲುಪಬಹುದಾಗಿದ್ದರೂ, ರವೀಂದ್ರ ಜಡೇಜಾ ಮತ್ತು ಯಶಸ್ವಿ ಜೈಸ್ವಾಲ್ ಅವರ ನಿಧಾನಗತಿಯ ಇನ್ನಿಂಗ್ಸ್ ಅದಕ್ಕೆ ತಡೆಯೊಡ್ಡಿತು. ನಿರ್ದಿಷ್ಟವಾಗಿ ಹೇಳುವುದಾದರೆ, ಕೊನೆಯ 10 ಓವರ್‌ಗಳಲ್ಲಿ ಭಾರತ ಕೇವಲ 74 ರನ್‌ಗಳನ್ನು ಗಳಿಸಿತು.

## ಕ್ಯಾಪಿಟಲ್ಸ್‌ಗೆ ಸೋಲು ವೈಪರ್ಸ್ ಶುಭಾರಂಭ

ಇಂಟರ್‌ನ್ಯಾಷನಲ್ ಲೀಗ್ ಟಿ20 ಟೂರ್ನಿ ಶುರುವಾಗಿದೆ. ಯುಎಇ ಕ್ರಿಕೆಟ್ ಬೋರ್ಡ್ ಆಯೋಜಿಸುವ ಈ ಟೂರ್ನಿಯ 4ನೇ ಸೀಸನ್‌ನ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ದುಬೈ ಕ್ಯಾಪಿಟಲ್ಸ್ ಹಾಗೂ ಡೆಸರ್ಟ್ ವೈಪರ್ಸ್ ತಂಡಗಳು ಮುಖಾಮುಖಿಯಾಗಿದ್ದವು.




ಈ ಮ್ಯಾಚ್‌ನಲ್ಲಿ ಟಾಸ್ ಗೆದ್ದ ಡೆಸರ್ಟ್ ವೈಪರ್ಸ್ ತಂಡದ ನಾಯಕ ಸ್ಯಾಮ್ ಕರನ್ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ದುಬೈ ಕ್ಯಾಪಿಟಲ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 150 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನತ್ತಿದ ಡೆಸರ್ಟ್ ವೈಪರ್ಸ್ ಪರ ಆಯಂಡ್ರೀಸ್ ಗೌಸ್ 36 ಎಸೆತಗಳಲ್ಲಿ 3 ಸಿಕ್ಸ್ ಹಾಗೂ 6 ಫೋರ್‌ಗಳೊಂದಿಗೆ 56 ರನ್ ಬಾರಿಸಿದರು. ಈ ಮೂಲಕ ಡೆಸರ್ಟ್ ವೈಪರ್ಸ್ ತಂಡವು 19 ಓವರ್‌ಗಳಲ್ಲಿ 151 ರನ್‌ಗಳಿಸಿ 4 ವಿಕೆಟ್‌ಗಳ ಜಯ ಸಾಧಿಸಿದೆ.

## ರಾಯ್‌ಪುರದಲ್ಲೂ ಕಿಂಗ್ ಕೊಹ್ಲಿಯದ್ದೇ ಕಾರುಬಾರು




ರಾಂಚಿ ಮತ್ತು ರಾಯ್‌ಪುರ ಏಕದಿನ ಪಂದ್ಯಗಳಲ್ಲಿ ವಿರಾಟ್ ಕೊಹ್ಲಿ ಸತತ ಶತಕಗಳನ್ನು ಸಿಡಿಸಿ ಮಿಂಚಿದ್ದಾರೆ. ರಾಂಚಿಯಲ್ಲಿ 135 ರನ್ ಗಳಿಸಿದ ನಂತರ, ರಾಯ್‌ಪುರದಲ್ಲಿ ತಮ್ಮ 53ನೇ ಏಕದಿನ ಶತಕವನ್ನು ಪೂರೈಸಿದ್ದಾರೆ.

ರುತುರಾಜ್ ಗಾಯಕ್ವಾಡ್ ಜೊತೆ ಶತಕದ ಜೊತೆಯಾಟವಾಡಿ ಭಾರತ ತಂಡವನ್ನು 200 ರನ್ ಗಡಿ ದಾಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ರಾಂಚಿ ಏಕದಿನ ಪಂದ್ಯದಲ್ಲಿ ಭರ್ಜರಿ ಶತಕ ಸಿಡಿಸಿ ಟೀಂ ಇಂಡಿಯಾ ಗೆಲುವಿನ ರೂವಾರಿ ಎನಿಸಿಕೊಂಡಿದ್ದ ವಿರಾಟ್ ಕೊಹ್ಲಿ ಇದೀಗ ರಾಯ್‌ಪುರದಲ್ಲೂ ಅದೇ ಹಾದಿಯಲ್ಲಿ ಮುಂದುವರೆದಿದ್ದಾರೆ. ರಾಂಚಿಯಲ್ಲಿ 135 ರನ್‌ಗಳ ಇನ್ನಿಂಗ್ಸ್ ಆಡಿದ್ದ ವಿರಾಟ್ ಇದೀಗ ಎರಡನೇ ಏಕದಿನ ಪಂದ್ಯದಲ್ಲೂ ಶತಕದ ಗಡಿ ದಾಟಿದ್ದಾರೆ. ಇದು ಕೊಹ್ಲಿ ಅವರ ಏಕದಿನ ವೃತ್ತಿಜೀವನದ 53 ನೇ ಏಕದಿನ ಶತಕವಾಗಿದ್ದು, ಈ ಸರಣಿಯ ಸತತ ಎರಡನೇ ಶತಕವಾಗಿದೆ. ಕೊಹ್ಲಿ ಶತಕ ಬಾರಿಸಿದ್ದು ಮಾತ್ರವಲ್ಲದೆ ರುತುರಾಜ್ ಗಾಯಕ್ವಾಡ್ ಅವರೊಂದಿಗೆ ಶತಕದ ಜೊತೆಯಾಟವನ್ನು ಕಟ್ಟಿದರು. ಈ ಮೂಲಕ ತಂಡವನ್ನು 200 ರನ್‌ಗಳ ಗಡಿ ಕೂಡ ದಾಟಿಸಿದರು.

**ರಾಂಚಿ ನಂತರ, ರಾಯ್‌ಪುರದಲ್ಲಿ ಶತಕ**

ಡಿಸೆಂಬರ್ 3, ಬುಧವಾರ ರಾಯ್‌ಪುರದ ಶಹೀದ್ ವೀರನಾರಾಯಣ್ ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಸರಣಿಯ ಎರಡನೇ ಏಕದಿನ ಪಂದ್ಯದಲ್ಲಿ ಟೀಂ ಇಂಡಿಯಾ ಮೊದಲು ಬ್ಯಾಟಿಂಗ್ ಮಾಡಬೇಕಾಯಿತು. ಆದಾಗ್ಯೂ, ಈ ಬಾರಿ ರೋಹಿತ್ ಶರ್ಮಾ ಬೇಗನೆ ಔಟಾದರು. ಯಶಸ್ವಿ ಜೈಸ್ವಾಲ್ ಕೂಡ ಸ್ವಲ್ಪ ಸಮಯದ ನಂತರ ಪೆವಿಲಿಯನ್‌ಗೆ ಮರಳಿದರು. ಪರಿಣಾಮವಾಗಿ, ಹಿಂದಿನ ಪಂದ್ಯದಲ್ಲಿ 52 ನೇ ಶತಕ ಗಳಿಸಿದ್ದ ವಿರಾಟ್ ಕೊಹ್ಲಿಯ ಮೇಲೆ ಎಲ್ಲರ ಕಣ್ಣುಗಳು ಮತ್ತೊಮ್ಮೆ ನೆಟ್ಟಿದ್ದವು .

ಕೊಹ್ಲಿ ಪ್ರಾರಂಭಿಸಿದ ರೀತಿ ಮತ್ತೊಂದು ದೊಡ್ಡ ಇನ್ನಿಂಗ್ಸ್ ಕಾದಿದೆ ಎಂದು ಸೂಚಿಸಿತು. ಕೊಹ್ಲಿ ತಮ್ಮ ನಾಲ್ಕನೇ ಎಸೆತದಲ್ಲಿ ಪ್ರಬಲವಾದ ಪುಲ್ ಶಾಟ್ ಹೊಡೆದು ಸಿಕ್ಸರ್ ಬಾರಿಸಿ ತಮ್ಮ ಖಾತೆಯನ್ನು ತೆರೆದರು. ಅಲ್ಲಿಂದ ಹೊಡಿಬಡಿ ಆಟವನ್ನು ಮುಂದುವರೆಸಿದ ಕೊಹ್ಲಿ 47 ಎಸೆತಗಳಲ್ಲಿ ಅರ್ಧಶತಕ ತಲುಪಿದರು. ಸ್ವಲ್ಪ ಸಮಯದಲ್ಲೇ ತಮ್ಮ ಏಕದಿನ ಕ್ರಿಕೆಟ್‌ನ 53 ನೇ ಶತಕವನ್ನು ಪೂರೈಸಿದರು. 38 ನೇ ಓವರ್‌ನ ಕೊನೆಯ ಎಸೆತದಲ್ಲಿ ಕೊಹ್ಲಿ ಒಂದು ರನ್ ತೆಗೆದುಕೊಂಡು ಎಂದಿನಂತೆ ತಮ್ಮ ನಿಶ್ಚಿತಾರ್ಥದ ಉಂಗುರವನ್ನು ಹೊರತೆಗೆದು, ಅದನ್ನು ಚುಂಬಿಸಿ, ಆಕಾಶದತ್ತ ನೋಡುತ್ತಾ ಮತ್ತು ದೇವರಿಗೆ ಧನ್ಯವಾದ ಹೇಳುವ ಮೂಲಕ ತಮ್ಮ 53 ನೇ ಏಕದಿನ ಶತಕವನ್ನು ಆಚರಿಸಿದರು.

ಸತತ 2ನೇ ಶತಕ

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966